ಸಂಪುಟ: 05 ಸಂಚಿಕೆ: 162 ಪುಟಗಳು: 08 ಸೋಮವಾರ 25 ಆಗಸ್ಟ್ 2025 www.udayavahini.in epaper.udayavahini.in Udaya vahini news Udaya vahini news Udayavahini news youtube udayavahininews@gmail.com

ಸಂಪಾದಕರು: ಟಿ. ಹೊಂಬೇಗೌಡ RNI No. KARKAN/2021/80833 9448225696 +91 8035841833 ₹5

**ಮುಂಜಾನೆ ಮಾತು**

ಹಿಂದಿರುಗಿ ನೋಡುವ ಅವಶ್ಯಕತೆ ಇಲ್ಲ, ಮುಂದೆ ನೋಡಿ ನಮಗೆ ಅನಂತ ಶಕ್ತಿ ಅನಂತ ಉತ್ಸಾಹ ಅನಂತ ತಾಳ್ಮೆ ಬೇಕು, ಆಗ ಮಾತ್ರ ಮಹತ್ಕಾರ್ಯಗಳನ್ನು ನಾವು ಸಾಧಿಸಬಹುದು

ಉದಯ UV ವಾಹಿನಿ
ಸರ್ವ ಸಮಾನತೆಯ ಕನ್ನಡ ದಿನಪತ್ರಿಕೆ

# ಬಾನು ಮುಷ್ತಾಕ್ ದಸರಾ ಉದ್ಘಾಟಿಸುವುದು ಅವರ ಧಾರ್ಮಿಕ ನಂಬಿಕೆಗೆ ವಿರುದ್ಧ!

**● ಮೈಸೂರು ದಸರಾ ಮಹೋತ್ಸವದ ಉದ್ಘಾಟಕರಾಗಿ ಬಾನು ಮುಷ್ತಾಕ್ ಆಯ್ಕೆ ● ಬಿಜೆಪಿ ನಾಯಕರ ವಿರೋಧ**

• ಉದಯವಾಹಿನಿ, ಬೆಂಗಳೂರು

ಈ ಬಾರಿ ಮೈಸೂರು ದಸರಾ ಮಹೋತ್ಸವದ ಉದ್ಘಾಟಕರಾಗಿ ಬುಕರ್ ಪ್ರಶಸ್ತಿ ವಿಜೇತೆ ಬಾನು ಮುಷ್ತಾಕ್ ಅವರನ್ನು ಕರ್ನಾಟಕ ಸರ್ಕಾರ ಆಯ್ಕೆ ಮಾಡಿದೆ. ಆದರೆ, ಈ ಆಯ್ಕೆಗೆ ಕೆಲ ಹಿಂದೂ ಸಂಘಟನೆಗಳು ಮತ್ತು ಮೈಸೂರು ಮಾಜಿ ಸಂಸದ ಪ್ರತಾಪ್ ಸಿಂಹ ವಿರೋಧ ವ್ಯಕ್ತಪಡಿಸಿದ್ದರು. ಸದ್ಯ ಶಾಸಕ ಬಸನಗೌಡ ಪಾಟೀಲ್ ಯತ್ನಾಳ್ ಕೂಡ ಈ ಬಗ್ಗೆ ಅಪಸ್ವರ ಎತ್ತಿದ್ದಾರೆ.

**ಯತ್ನಾಳ್ ಟ್ವೀಟ್‌ನಲ್ಲಿ ಏನಿದೆ?**

ಎಕ್ಸ್‌ನಲ್ಲಿ ಟ್ವೀಟ್ ಹಂಚಿಕೊಂಡಿರುವ ಯತ್ನಾಳ್, ನಾನು ವೈಯಕ್ತಿಕವಾಗಿ ಶ್ರೀಮತಿ ಭಾನು ಮುಶ್ತಾಕ್ ಅವರನ್ನು ಲೇಖಕಿ ಹಾಗೂ ಹೋರಾಟಗಾರ್ತಿಯಾಗಿ ಗೌರವಿಸುತ್ತೇನೆ. ಆದರೆ, ನಾಡದೇವತೆ ಚಾಮುಂಡೇಶ್ವರಿ ದೇವಿಗೆ ಪುಷ್ಪಾರ್ಚನೆ ಸಲ್ಲಿಸಿ ದೀಪ ಬೆಳಗುವುದರ ಮೂಲಕ ದಸರಾವನ್ನು ಉದ್ಘಾಟಿಸುವುದು, ಅವರ ಸ್ವಂತ ಧಾರ್ಮಿಕ ನಂಬಿಕೆಗಳಿಗೆ ವಿರುದ್ಧವಾಗಿದೆ ಎಂದು ಹೇಳಿದ್ದಾರೆ.




ಇಸ್ಲಾಂ ಮೂರ್ತಿ ಪೂಜೆಯನ್ನು ಧಿಕ್ಕರಿಸಿ ಒಂದು ದೇವರು ಹಾಗೂ ಒಂದು ಗ್ರಂಥವನ್ನೇ ಒಪ್ಪಿಕೊಳ್ಳುತ್ತದೆ ಎಂಬ ನಂಬಿಕೆಯಲ್ಲಿ ಅವರು ಇನ್ನೂ ಇದ್ದಾರೆಯೇ, ಅಥವಾ ಎಲ್ಲಾ ಮಾರ್ಗಗಳೂ ಅಂತಿಮವಾಗಿ ಒಂದೇ ಮೋಕ್ಷಕ್ಕೆ ದಾರಿ ಮಾಡಿಕೊಡುತ್ತವೆ ಎಂದು ಅವರು ನಂಬುತ್ತಾರೆಯೇ ಎಂಬುದರ ಬಗ್ಗೆ ಶ್ರೀಮತಿ ಭಾನು ಮುಶ್ತಾಕ್ ಅವರು ಸ್ಪಷ್ಟನೆ ನೀಡುವುದು ಅಗತ್ಯ ಎಂದು ಟ್ವೀಟ್‌ನಲ್ಲಿ ಉಲ್ಲೇಖಿಸಿದ್ದಾರೆ.

**ಸ್ಪಷ್ಟತೆ ಇಲ್ಲದೆ ಉದ್ಘಾಟನೆ ಮಾಡ್ಬೇಡಿ**

ಈ ಸ್ಪಷ್ಟತೆ ಇಲ್ಲದೆ, ದಸರಾ ಉದ್ಘಾಟಿಸುವುದು ಸರಿಯಲ್ಲ. ಆದರೆ, ದಸರಾ ಉತ್ಸವದ ಅಂಗವಾಗಿ ನಡೆಯುವ ಸಾಂಸ್ಕೃತಿಕ ಅಥವಾ ಕವಿಗೋಷ್ಠಿಯಂತಹ ಸಾಹಿತ್ಯ ಕಾರ್ಯಕ್ರಮಗಳನ್ನು ಉದ್ಘಾಟಿಸುವ ಅತಿಥಿಯಾಗಿ ಅವರು ಭಾಗವಹಿಸುವುದು ತಕ್ಕದ್ದಾಗಿದೆ ಎಂದು ಬಸನಗೌಡ ಪಾಟೀಲ್ ಯತ್ನಾಳ್ ಹೇಳಿದ್ದಾರೆ.

**ಅತಿಥಿಯಾಗಿ ಭಾಗವಹಿಸಲಿ ಎಂದ ಯತ್ನಾಳ್**



**ಪ್ರತಾಪ್ ಸಿಂಹ ಹೇಳಿದ್ದೇನು?;** ಮುಸ್ಲಿಂರು ಎನ್ನುವ ಕಾರಣಕ್ಕೆ ನನ್ನ ಅಪಸ್ವರ ಎತ್ತುತ್ತಿಲ್ಲ. ಬಾನು ಮುಷ್ತಾಕ್ ಸಾಹಿತ್ಯದ ಬಗ್ಗೆ ಗೌರವವಿದೆ. ದಸರಾ ಇದು ಜಾತ್ಯಾತೀತತೆಯ ಪ್ರತೀಕ ಅಲ್ಲ. ಇದು ಧಾರ್ಮಿಕ ಆಚರಣೆ. ದಸರಾ 100% ಧಾರ್ಮಿಕ ಆಚರಣೆ. ದುರ್ಗಾ ಪೂಜೆ, ನವರಾತ್ರಿ ಉತ್ಸವ ಇರುತ್ತದೆ. ಇದು ಧಾರ್ಮಿಕ ಹಬ್ಬ. ತಾಯಿ ಚಾಮುಂಡಿಗೆ ಪೂಜೆ ಸಲ್ಲಿಸಿ ದಸರಾಗೆ ಚಾಲನೆ ನೀಡಲಾಗುತ್ತದೆ. ಹಾಗಾಗಿ, ಬಾನು ಮುಷ್ತಾಕ್ ಅವರಿಗೆ ತಾಯಿ ಚಾಮುಂಡಿ ಮೇಲೆ ನಂಬಿಕೆ ಇದೆಯೇ ಎಂದು ಅವರು ಮಾಜಿ ಸಂಸದ ಪ್ರತಾಪ್ ಸಿಂಹ ಮಾತನಾಡಿದ್ದಾರೆ.

ಬಾನು ಮುಷ್ತಾಕ್ ಅವರನ್ನು ಸಾಹಿತ್ಯ ಸಮ್ಮೇಳನದ ಅಧ್ಯಕ್ಷರನ್ನಾಗಿ ಮಾಡಿದರೆ ಯಾವುದೇ ತಕರಾರು ಇರುವುದಿಲ್ಲ. ಆದರೆ, ಸಿಎಂ ಧಾರ್ಮಿಕ ನಂಬಿಕೆಗಳನ್ನು ವಿರೋಧಿಸುವವರನ್ನು ಏಕೆ ಕರೆಯುತ್ತಾರೆ ಎಂದು ಆಕ್ರೋಶ ವ್ಯಕ್ತಪಡಿಸಿದರು.

ಸಿಎಂ ಸಿದ್ದರಾಮಯ್ಯ ಮಹಾರಾಜರ ಪರಂಪರೆಯನ್ನು ಹೀಗೆ ಹಾಳು ಮಾಡುತ್ತಿದ್ದಾರೆ. ರಿಷಬ್ ಶೆಟ್ಟಿಗೆ ರಾಷ್ಟ್ರೀಯ ಪ್ರಶಸ್ತಿ ಬಂದಿದೆ, ಅವರನ್ನು ಕರೆಯುತ್ತೀರಾ? ಪ್ರಶಸ್ತಿ ಬಂದವರೆಲ್ಲರನ್ನು ದಸರಾ ಉದ್ಘಾಟನೆಗೆ ಕರೆಯಲು ಸಾಧ್ಯವೇ? ಎಂದು ಪ್ರತಾಪ್ ಸಿಂಹ ಸಿಎಂ ವಿರುದ್ಧ ಗುಡುಗಿದರು.

## ಬುರುಡೆ ತನಿಖೆ ನಡೆಸಿದ ಸರ್ಕಾರಕ್ಕೆ ಚಾಟಿ ಬೀಸಿದ ಸಿಎಂ ಪರಮಾಪ್ತ

• ಉದಯವಾಹಿನಿ, ಬೆಂಗಳೂರು

ಬುರುಡೆ ತನಿಖೆ ನಡೆಸಿದ ಸರ್ಕಾರಕ್ಕೆ ಸಿದ್ದರಾಮಯ್ಯ ಪರಮಾಪ್ತ, ಮಾಜಿ ಸಚಿವ ಕೆ.ಎನ್.ರಾಜಣ್ಣ ಚಾಟಿ ಬೀಸಿದ್ದಾರೆ ಎಂದು ಬಿಜೆಪಿ ಲೇವಡಿ ಮಾಡಿದೆ. ಈ ಬಗ್ಗೆ ಸಾಮಾಜಿಕ ಮಾಧ್ಯಮ ಎಕ್ಸ್‌ನಲ್ಲಿ ಪೋಸ್ಟ್ ಮಾಡಿರುವ ರಾಜ್ಯ ಬಿಜೆಪಿ ಘಟಕ, 'ಧರ್ಮಸ್ಥಳ ದೇವಸ್ಥಾನ ವ್ಯಾಪ್ತಿಯಲ್ಲಿ ಶವ ಹೂತಿದ್ದೇನೆ ಎಂದು ದೂರು ನೀಡಲು ಬಂದ ವ್ಯಕ್ತಿಯು ತಂದಿದ್ದ ಬುರುಡೆಯ ಪೂರ್ವಾಪರಗಳನ್ನು ವಿಚಾರಿಸದೆ ತನಿಖೆಗೆ ಆದೇಶಿಸಿದ್ದು ಸರಿಯಾದ ಕ್ರಮವಲ್ಲ ಎಂದು ಸಿದ್ದರಾಮಯ್ಯ ಪರಮಾಪ್ತ, ಮಾಜಿ ಸಚಿವ ರಾಜಣ್ಣ ಅವರು ಕುಟುಕಿದ್ದಾರೆ. ಬಿಜೆಪಿ ಕೂಡಾ ಇದನ್ನೇ ಆರಂಭದಿಂದಲೂ ಪ್ರಶ್ನಿಸಿತ್ತು. ಹೂತು ಹಾಕಿದ್ದ ಶವದ ಬುರುಡೆ ಈ ಷಡ್ಯಂತ್ರಕಾರರಿಗೆ ಸಿಕ್ಕಿದ್ದೆಲ್ಲಿ ಎನ್ನುವುದನ್ನು ಪತ್ತೆಹಚ್ಚಲು ಸರ್ಕಾರ ನಿರ್ದೇಶನ ನೀಡಬೇಕಿತ್ತು. ಆದರೆ ಸರ್ಕಾರ ನಗರ ನಕ್ಸಲರ ತಾಳಕ್ಕೆ ತಕ್ಕಂತೆ ಕುಣಿದಿದ್ದು ದುರಂತವೇ ಸರಿ' ಎಂದಿದೆ. ಧರ್ಮಸ್ಥಳದ ಅನಾಮಿಕ ತಲೆಬುರುಡೆ ತಂದುಕೊಟ್ಟ ತಕ್ಷಣ ಆತನ ಬಗ್ಗೆ ಪೂರ್ವಪರ ವಿಚಾರಿಸದೆ, 164 ಹೇಳಿಕೆ ಪಡೆದು ಎಸ್‌ಐಟಿ ರಚಿಸಲಾಯಿತು. ತನಿಖೆಯ ಪ್ರಾರಂಭಿಕ ಹಂತದಲ್ಲಿ ಎಲ್ಲರು ಎಡವಿದ್ದಾರೆ. ಎಲ್ಲಿಂದ ಬುರುಡೆ ತಂದಿದ್ದರು, ಕಾನೂನು ಪ್ರಕಾರವೇ ಗುಂಡಿಯಿಂದ ಬುರುಡೆ ಹೊರ ತೆಗೆಯಲಾಗಿದೆಯೇ? ಎಂಬುವುದನ್ನು ಪರಿಶೀಲಿಸಿದ್ದರೆ ಇಷ್ಟೆಲ್ಲಾ ರಾದ್ಧಾಂತ ಆಗುತ್ತಿರಲಿಲ್ಲ ಎಂದು ಮಾಜಿ ಸಚಿವ ರಾಜಣ್ಣ ಹೇಳಿದ್ದಾರೆ.

## ಬಲಿಜ ಸಮುದಾಯದ ನಾಯಕರಲ್ಲಿ ಯಾರಿಗೆ ಸಿಗಲಿದೆ ಸಚಿವ ಸ್ಥಾನ

• ಉದಯವಾಹಿನಿ, ಚಿಕ್ಕಬಳ್ಳಾಪುರ

ಕಾಂಗ್ರೆಸ್ ನೇತೃತ್ವದ ರಾಜ್ಯ ಸರಕಾರದ ಸಚಿವ ಸಂಪುಟ ವಿಸ್ತರಣೆ ಸುದ್ದಿ ಆಗಾಗ್ಗೆ ಸದ್ದು ಮಾಡುತ್ತಲೇ ಇದೆ. ಈಗಲೂ ಅಂಥದ್ದೇ ಸುದ್ದಿ ಹರಿದಾಡುತ್ತಿದ್ದು, ಬಲಿಜ ಸಮುದಾಯಕ್ಕೆ ಸಚಿವ ಸ್ಥಾನ ಸಿಗುವ ಸಾಧ್ಯತೆ ಇದ್ದು, ಶಾಸಕರಾದ ಪ್ರದೀಪ್ ಈಶ್ವರ್ ಹಾಗೂ ಎಂ.ಆರ್.ಸೀತಾರಾಮ್ ಅವರ ಹೆಸರು ಕೇಳಿಬರುತ್ತಿದೆ. ವಿಧಾನಸಭೆ ಚುನಾವಣೆಯಲ್ಲಿ ಬಲಿಜ ಸಮುದಾಯಕ್ಕೆ ಸೇರಿದ ಪ್ರದೀಪ್ ಈಶ್ವರ್ ಅವರು ಏಕೈಕ ಶಾಸಕರಾಗಿ ಆಯ್ಕೆಯಾಗಿದ್ದಾರೆ. ಸಚಿವ ಸಂಪುಟದಲ್ಲಿಸದ್ಯಕ್ಕೆ ಬಲಿಜಿಗ ಸಮುದಾಯಕ್ಕೆ ಸಚಿವ ಸ್ಥಾನ ನೀಡಿಲ್ಲ.

ಕೆಲವು ಕ್ಷೇತ್ರಗಳಲ್ಲಿ ನಿರ್ಣಾಯಕ ಪಾತ್ರ ವಹಿಸಿರುವ ಬಲಿಜ ಸಮುದಾಯದವರಿಗೆ ಸಚಿವ ಸ್ಥಾನ ನೀಡುವುದು ಕಾಂಗ್ರೆಸ್‌ಗೆ ಅನಿವಾರ್ಯವಾಗಿದೆ. ಹೀಗಾಗಿ ಈ ಬಾರಿ ಸಚಿವ ಸಂಪುಟ ವಿಸ್ತರಣೆ ಅಥವಾ ಪುನಾರಚನೆ ವೇಳೆ ಬಲಿಜ ಸಮುದಾಯಕ್ಕೆ ಸಚಿವ ಸ್ಥಾನ ನೀಡಲೇಬೇಕೆಂಬ ಪಟ್ಟು ಹೆಚ್ಚಾಗಿದೆ.

## ದಲಿತರಲ್ಲಿ ಒಗ್ಗಟ್ಟು ತಂದ ಒಳಮೀಸಲು ತೀರ್ಮಾನ

• ಉದಯವಾಹಿನಿ, ಬೆಂಗಳೂರು

ರಾಜ್ಯದಲ್ಲಿ ಸುಮಾರು ಮೂರೂವರೆ ದಶಕಗಳಿಂದ ಪರಸ್ಪರ ಮತ್ಸರ, ಸಂಘರ್ಷದಲ್ಲಿ ಮುಳುಗಿದ್ದ ದಲಿತ ಸಮುದಾಯಗಳನ್ನು ಒಳಮೀಸಲು ತೀರ್ಮಾನ ಒಟ್ಟುಗೂಡಿಸಿದೆ. ವಿಶೇಷವಾಗಿ ಪರಸ್ಪರ ಎದುರಾಳಿಗಳಂತಿದ್ದ ಎಡಗೈ ಮತ್ತು ಬಲಗೈ ಸಮುದಾಯಗಳನ್ನು ಹತ್ತಿರವಾಗಿಸಿದ್ದು, ಜನಸಂಖ್ಯೆ ಆಧರಿಸಿ ಒಳಮೀಸಲು ಕಲ್ಪಿಸುವ ತೀರ್ಮಾನವು ಭವಿಷ್ಯದಲ್ಲಿ ರಾಜಕೀಯವಾಗಿ ಲಾಭ ತಂದುಕೊಡುವ ಲೆಕ್ಕಾಚಾರ ಆಡಳಿತಾರೂಢ ಕಾಂಗ್ರೆಸ್‌ನಲ್ಲಿ ನಡೆದಿದೆ. ರಾಜ್ಯದಲ್ಲಿ ದಲಿತರ ಶೇ.17ರಷ್ಟು ಮೀಸಲು ಅವಕಾಶಗಳನ್ನು ಬಲಗೈ (ಛಲವಾದಿ) ಹಾಗೂ ನಾಲ್ಕು ಸ್ಪೃಶ್ಯ ಸಮುದಾಯಗಳ ಪಾಲಾಗುತ್ತಿದ್ದು, ಉಳಿದವರಿಗೆ ಅನ್ಯಾಯವಾಗುತ್ತಿದೆ ಎಂಬುದು ಬಹುದಿನಗಳ ದೂರು. ವಿಶೇಷವಾಗಿ, ಪರಿಶಿಷ್ಟ 101 ಜಾತಿಗಳ ಒಟ್ಟು ಜನಸಂಖ್ಯೆಯಲ್ಲಿಶೇ.34.91 ಪಾಲು ಹೊಂದಿರುವ ತಮಗೆ ಮೀಸಲು ಅವಕಾಶಗಳು ಕೈತಪ್ಪಿವೆ ಎಂಬುದು ಎಡಗೈ (ಮಾದಿಗ) ಸಮುದಾಯದಲ್ಲಿ ಅಸಮಾಧಾನ ಮೂಡಿಸಿತ್ತು. ಈ ಕಾರಣಕ್ಕೆ ಪರಿಶಿಷ್ಟರಲ್ಲೇ ಪ್ರಬಲ ಜಾತಿಗಳಾದ ಎಡಗೈ ಮತ್ತು ಬಲಗೈ ಸಮುದಾಯಗಳ ನಡುವೆ ದಶಕಗಳಿಂದ ವೈರತ್ವ ಬೆಳೆದಿತ್ತು.

# ಬಗೆದಷ್ಟೂ ಬಯಲಾಗ್ತಿದೆ ಬುರುಡೆ ರಹಸ್ಯ!

**ದೆಹಲಿಗೂ ಬುರುಡೆ ಕೊಂಡೊಯ್ದಿದ್ದ ಚಿನ್ನಯ್ಯ & ಗ್ಯಾಂಗ್**





ಕೊಲೆ, ಅತ್ಯಾಚಾರಕ್ಕೊಳಗಾದವರ ಶವಗಳನ್ನು ಹೂತು ಹಾಕಿದ್ದಾಗಿ ಹೇಳಿ ರಾತ್ರೋರಾತ್ರಿ ರಾಷ್ಟ್ರೀಯ ಮತ್ತು ಅಂತಾರಾಷ್ಟ್ರೀಯ ಮಟ್ಟದಲ್ಲಿ ಸುದ್ದಿಯಾಗಿದ್ದ ಚಿನ್ನಯ್ಯ ತನ್ನ ಬಳಿ ಇದ್ದ ಬುರಡೆಯನ್ನು ದೆಹಲಿಗೆ ಕೊಂಡೊಯ್ದಿದ್ದು ಬೆಳಕಿಗೆ ಬಂದಿದೆ. ಧರ್ಮಸ್ಥಳದ ಕಾಡಿನಲ್ಲಿ ಆತಹತ್ಯೆ ಮಾಡಿಕೊಂಡಿದ್ದ ವ್ಯಕ್ತಿಯೊಬ್ಬನ ತಲೆಯನ್ನು ಕತ್ತಿನಿಂದ ಬೇರ್ಪಡಿಸಿದ ನಂತರ ಬುರುಡೆಯನ್ನು ರಹಸ್ಯವಾಗಿ ತೆಗೆದುಕೊಂಡು ಹೋಗಿ ಗುಂಪಿನ ನಿರ್ದೇಶನದಂತೆ ಪ್ರಮುಖರೊಬ್ಬರನ್ನು ಭೇಟಿಯಾಗಿದ್ದ. ಜುಲೈ 3ರಂದು ವಕೀಲರೊಂದಿಗೆ ಆಗಮಿಸಿದ ಮುಸುಕುಧಾರಿ ದಕ್ಷಿಣಕನ್ನಡ ಜಿಲ್ಲೆ ಎಸ್ಪಿ ಕಚೇರಿಗೆ ಭೇಟಿ ನೀಡಿ ಲೈಂಗಿಕ ದೌರ್ಜನ್ಯ, ಅತ್ಯಾಚಾರಕ್ಕೊಳಗಾಗಿ ಕೊಲೆಯಾದ ಮಹಿಳೆಯರ ಮತ್ತು ಮಕ್ಕಳ ನೂರಾರು ಶವಗಳನ್ನು ಹೂತು ಹಾಕಿರುವುದಾಗಿ ಹೇಳಿ ರಾತ್ರೋರಾತ್ರಿ ಅಂತಾರಾಷ್ಟ್ರೀಯ ಮಟ್ಟದಲ್ಲೂ ಸುದ್ದಿಯಾಗಿದ್ದ. ತನ್ನ ಬಳಿ ಇದ್ದ ಬುರುಡೆಯನ್ನೇ ಸಾಕ್ಷಿಯನ್ನಾಗಿ ಪರಿಗಣಿಸಬೇಕೆಂದು ಚಿನ್ನಯ್ಯ ಹೇಳಿದ್ದ. ಅವರ ತಂಡದಲ್ಲಿದ್ದ ಉನ್ನತ ವ್ಯಕ್ತಿಯೊಬ್ಬರು ದೆಹಲಿಗೆ ತಲುಪಿಸಲು ಸಕಲ ವ್ಯವಸ್ಥೆಯನ್ನು ಮಾಡಿಕೊಟ್ಟಿದ್ದರು. ದೆಹಲಿಯಲ್ಲಿ ಉನ್ನತ ಸ್ಥಾನದಲ್ಲಿರುವ ವ್ಯಕ್ತಿಯನ್ನು ರಹಸ್ಯವಾಗಿ ಭೇಟಿ ಮಾಡಿದ್ದ ಅಂದಿನ ಮುಸುಕುಧಾರಿ ಪೊಲೀಸರು, ನ್ಯಾಯಾಧೀಶರು ಹಾಗೂ ತನಿಖಾಧಿಕಾರಿಗಳ ಮುಂದೆ ಯಾವ ರೀತಿ ಹೇಳಿಕೆಗಳನ್ನು ನೀಡಬೇಕು ಎಂಬುದರ ಬಗ್ಗೆಯೂ ತರಬೇತಿಯನ್ನು ನೀಡಲಾಗಿತ್ತು. ನಾನು ಹೇಳಿದಂತೆ ನಡೆದುಕೊಂಡರೆ ಯಾವುದೇ ರೀತಿಯ ಕಾನೂನು ಸಮಸ್ಯೆಗಳು ಎದುರಾಗುವುದಿಲ್ಲ. ನಿಮಗೆ ಬೇಕಾದ ಆರ್ಥಿಕ ನೆರವನ್ನು ನಮ್ಮ ಕಡೆಯವರು ತಲುಪಿಸಿದ್ದಾರೆ.

**ದೆಹಲಿಗೂ ಹೋಗಿತ್ತು ತಲೆಬುರುಡೆ!**

**ಚಿನ್ನಯ್ಯ ಬಂಧನದ ನಂತರ ಪ್ರಕರಣಕ್ಕೆ ಹೊಸ ಟ್ವಿಸ್ಟ್**

**ಜುಲೈ 11ಕ್ಕೆ ನ್ಯಾಯಾಲಕ್ಕೆ ಹಾಜರಾಗಿದ್ದ ಚಿನ್ನಯ್ಯ**

ದೆಹಲಿಯಿಂದ ಬಂದ ಬಳಿಕ ವ್ಯವಸ್ಥಿತವಾಗಿ ಪ್ಲಾನ್ ಮಾಡಿ ದೂರುದಾರ ಚಿನ್ನಯ್ಯ ಬುರುಡೆಯೊಂದಿಗೆ ಪ್ರತ್ಯಕ್ಷನಾಗಿದ್ದ. ಬಳಿಕ ವಕೀಲರ ತಂಡ ಈತನಿಗೆ ನೆರವು ನೀಡಿತ್ತು. ಜುಲೈ 11ಕ್ಕೆ ನ್ಯಾಯಾಲಯಕ್ಕೆ ಹಾಜರಾದ ಮುಸುಕುದಾರಿ ದೂರುದಾರ ಬುರುಡೆ ಹಿಡಿದುಕೊಂಡು 164 ಸ್ಟೇಟ್ ಮೆಂಟ್ ನೀಡಿದ್ದ. ನ್ಯಾಯಾಧೀಶರ ಮುಂದೆ ತಾನು ಧರ್ಮಸ್ಥಳದ ಮಾಜಿ ಸ್ವಚ್ಛತಾ ನೌಕರ. ತನ್ನ ಕೆಲಸದ ಅವಧಿಯಲ್ಲಿ ನೂರಾರು ಶವಗಳನ್ನು ಹೂತಿಟ್ಟಿದ್ದೇನೆ. ಬಹುತೇಕ ಮಹಿಳೆ ಹಾಗೂ ಮಕ್ಕಳ ಶವಗಳು. ಎಲ್ಲವೂ ಅನುಮಾನಸ್ಪದ ಸಾವು ಪ್ರಕರಣ ಆಗಿದೆ. ಈ ಪೈಕಿ ಮಕ್ಕಳು ಹಾಗೂ ಹೆಣ್ಣುಮಕ್ಕಳ ಮೇಲೆ ದೌರ್ಜನ್ಯ ನಡೆದಿತ್ತು ಎಂದು ಹೇಳಿಕೆ ನೀಡಿದ್ದ. ಈ ಪೈಕಿ ಒಂದು ಬುರುಡೆಯನ್ನು ತಾನು ತಂದಿದ್ದೇನೆ. ನನಗೆ ಪಾಪ ಪ್ರಜ್ಞೆ ಕಾಡಿ ಈ ರೀತಿ ಮಾಡಿದ್ದಾನೆ. ಬುರುಡೆ ತಂದಿರುವುದಕ್ಕೆ ತನಗೆ ಶಿಕ್ಷೆ ನೀಡಿದರೂ ನಾನು ಎದುರಿಸಲು ಸಿದ್ದ. ಆದರೆ ಮೃತಪಟ್ಟವರಿಗೆ ನ್ಯಾಯ ಸಿಗಬೇಕು ಅನ್ನೋ ಕಾರಣದಿಂದ ಇದೀಗ ಬಯಲು ಮಾಡುತ್ತಿದ್ದೇನೆ. ನನಗೆ ಜೀವಬೆದರಿಕೆ ಇದೆ. ಸೂಕ್ತ ರಕ್ಷಣೆ ಒದಗಿಸಬೇಕು ಎಂದು ನ್ಯಾಯಾಲಯದ ಮುಂದೆ ಮನವಿ ಮಾಡಿದ್ದ.

•ಉದಯವಾಹಿನಿ, ಬೆಂಗಳೂರು

ಧರ್ಮಸ್ಥಳದಲ್ಲಿ ನೂರಾರು ಶವಗಳನ್ನು ಹೂತಿಟ್ಟಿರುವ ಬಗ್ಗೆ ಬುರುಡೆ ಬಿಟ್ಟಿದ್ದ ಚಿನ್ನಯ್ಯ ಮತ್ತವರ ತಂಡದಿಂದ ಒಂದೊಂದೇ ರಹಸ್ಯಗಳು ಬಯಲಿಗೆ ಬರುತ್ತಿವೆ. ಚಿನ್ನಯ್ಯ ತಂದು ಕೊಟ್ಟಿದ್ದ ಬುರುಡೆ ರಹಸ್ಯ ಎಲ್ಲಿಂದ ಬಂತು ಎಂಬ ಯಕ್ಷ ಪ್ರಶ್ನೆಗೆ ಕಡೆಗೂ ಉತ್ತರ ಲಭಿಸಿದೆ. ಇದು ದೇಶದ ರಾಜಧಾನಿ ದೆಹಲಿಯಲ್ಲಿ ವ್ಯವಹಾರ ಕುದಿರಿಸಿರುವ ಬಗ್ಗೆ ಸ್ಫೋಟಕ ಮಾಹಿತಿ ಲಭ್ಯವಾಗಿದೆ. ಚಿನ್ನಯ್ಯನ ಗ್ಯಾಂಗ್ ಈ ಬುರುಡೆಯನ್ನು ದೆಹಲಿಗೆ ಕೊಂಡೊಯ್ದು, ಅಲ್ಲಿ ಪ್ರತಿಷ್ಠಿತ ವ್ಯಕ್ತಿಗಳನ್ನು ಭೇಟಿಯಾಗಿ, ಬುರುಡೆಯನ್ನು ಪ್ರದರ್ಶಿಸಿತ್ತು. ಈ ಭೇಟಿಯ ಸಂದರ್ಭದಲ್ಲಿ ಬುರುಡೆಯ ಕತೆಯನ್ನು ವಿವರಿಸಿ, ಒಂದು ಮೆಗಾ ಡೀಲ್ ಕೂಡ ನಡೆದಿತ್ತು ಎಂಬ ರಹಸ್ಯ ಈಗ ತಿಳಿದುಬಂದಿದೆ. ಈ ಷಡ್ಯಂತ್ರದ ಎಸ್ ಐಟಿ ತನಿಖೆಯಿಂದ ಹಿಂದಿನ ಗುಪ್ತ ಒಡಂಬಡಿಕೆಗಳು ಒಂದೊಂದೇ ಬಯಲಿಗೆ ಬರುತ್ತಿವೆ.

**ಬುರುಡೆ ಬಂಡವಾಳ ಬಯಲು:** ಈ ಬುರುಡೆಯನ್ನು ಇಟ್ಟುಕೊಂಡು ನ್ಯಾಯಾಲಯದಿಂದ ಸಾಕ್ಷಿ ಸಂರಕ್ಷಣಾ ಕಾಯ್ದೆಯಡಿ ಭದ್ರತೆ ಪಡೆದುಕೊಂಡಿದ್ದ. ಹೀಗಾಗಿ ಎಸ್‌ಐಟಿ ಸಹ ಆತ ಹೇಳಿದಂತೆ ಕೇಳುತ್ತಿತ್ತು. ಆತ ಹೇಳಿದ್ದ 17 ಜಾಗಗಳಲ್ಲಿ ಗುಂಡಿ ತೋಡಿದ ಬಳಿಕ ಮೂಲ ಬುರುಡೆಯ ಬಗ್ಗೆ ಎಸ್‌ಐಟಿ ಅಧಿಕಾರಿಗಳು ಪ್ರಶ್ನೆ ಮಾಡಿದ್ದರು. ಈ ವೇಳೆ ಆತ ಒಂದೊಂದು ಜಾಗದ ಹೆಸರನ್ನು ಹೇಳಿದ್ದ. ಒಮ್ಮೆ ಬೋಳಿಯಾರ್ ಮತ್ತೊಮ್ಮೆ ಕಲ್ಲೇರಿ ಇನ್ನೊಮ್ಮೆ ಇನ್ಯಾವುದೋ ಜಾಗವನ್ನು ಹೇಳಿದ್ದ. ಈ ಮಧ್ಯೆ ಬುರುಡೆಯಲ್ಲಿದ್ದ ಮಣ್ಣು ಧರ್ಮಸ್ಥಳ ಪರಿಸರದ್ದೇ ಅಲ್ಲ ಎನ್ನುವುದು ವಿಧಿವಿಜ್ಞಾನ ಪ್ರಾಯೋಗಾಲಯದಲ್ಲಿ ದೃಢಪಟ್ಟಿತ್ತು. ಇದು ಪಕ್ಕಾ ಆಗುತ್ತಿದ್ದಂತೆ ಪೊಲೀಸರು ತಮ್ಮ ಶೈಲಿಯಲ್ಲಿ ವಿಚಾರಣೆ ನಡೆಸಿದಾಗ ಆತ ಬೇರೆ ಜಾಗದಿಂದ ಈ ಬುರುಡೆ ತಂದಿದ್ದೇನೆ. ಬೇರೆಯವರು ಹೇಳಿದಂತೆ ನಾನು ಈ ಪ್ರಕರಣಕ್ಕೆ ಬಂದಿದ್ದೇನೆ ಎಂದು ಬಾಯಿಬಿಟ್ಟಿದ್ದ.

**ಮೊದಲು 2 ಲಕ್ಷಕ್ಕೆ ಡೀಲ್ :** ಧರ್ಮಸ್ಥಳದಲ್ಲಿ ನೂರಾರು ಶವಗಳನ್ನೂ ಹೂತಿಟ್ಟಿರುವ ಪ್ರಕರಣದಲ್ಲಿ ಎಸ್‌ಐಟಿ ಕಪಿಮುಷ್ಠಿಯಲ್ಲಿರುವ ಚಿನ್ನಯ್ಯ, ಗ್ಯಾಂಗ್‌ನಿಂದ 2 ಲಕ್ಷ ರೂ. ಹಣ ಪಡೆದು ಆರಂಭದಲ್ಲಿ ನಾಟಕವಾಡಿದ್ದ ಎಂಬ ಅಂಶ ಬೆಳಕಿಗೆ ಬಂದಿದೆ. 2023 ಡಿಸೆಂಬರ್‌ನಲ್ಲಿ ಗ್ಯಾಂಗ್‌ವೊಂದು ಚಿನ್ನಯ್ಯನನ್ನು ಸಂಪರ್ಕಿಸಿ ಅಕ್ರಮವಾಗಿ ಶವಗಳನ್ನು ಹೂತಿಟ್ಟಿರುವ ಬಗ್ಗೆ ತಪ್ಪೊಪ್ಪಿಗೆ ಕೊಡುವಂತೆ ಆ ಗ್ಯಾಂಗ್‌ನೊಂದಿಗೆ ಚಿನ್ನಯ್ಯ ವ್ಯವಹಾರ ಕುದುರಿಸಿದ್ದ ಅಂಶ ಬಟಾ ಬಯಲಾಗಿದೆ.ಅಪಪ್ರಚಾರ ಮಾಡುವ ಗ್ಯಾಂಗ್‌ನಲ್ಲಿ ಯಾರಿದ್ದಾರೆ ಎಂಬ ಬಗ್ಗೆ ವಿಚಾರಣೆ ವೇಳೆ ಚಿನ್ನಯ್ಯ ಬಾಯ್ಬಿಟ್ಟಿದ್ದಾನೆ. ಈ ವೇಳೆ ಮಹೇಶ್‌ಶೆಟ್ಟಿ ತಿಮರೋಡಿ, ಗಿರೀಶ್ ಮಟ್ಟಣನವರ್ ಹೆಸರನ್ನು ಹೇಳಿದ್ದಾನೆ. ಸತತ 19 ಗಂಟೆಗಳ ವಿಚಾರಣೆಯಲ್ಲಿ ಕೆಲವು ಸ್ಫೋಟಕ ವಿಷಯಗಳನ್ನು ಆರೋಪಿ ಚಿನ್ನಯ್ಯ ಬಹಿರಂಗಪಡಿಸಿದ್ದು, ಈ ಇಡೀ ಪ್ರಕರಣದ ಸೂತ್ರಧಾರಿಗಳ ಪಾತ್ರದ ಬಗ್ಗೆ ಎಸ್‌ಐಟಿ ಅಧಿಕಾರಿಗಳಿಗೆ ಮಾಹಿತಿ ನೀಡಿದ್ದಾನೆ ಎಂದು ಮೂಲಗಳೂ ತಿಳಿಸಿವೆ. ಈ ಹಿನ್ನೆಲೆಯಲ್ಲಿ ಚಿನ್ನಯ್ಯನನ್ನು ಎಸ್‌ಐಟಿ ತೀವ್ರ ವಿಚಾರಣೆಗೆ ಗುರಿಪಡಿಸಿ ಇನ್ನಷ್ಟು ಮಾಹಿತಿಗಳನ್ನು ಸಂಗ್ರಹಿಸುವ ಕಾರ್ಯದಲ್ಲಿ ನಿರತವಾಗಿವೆ.

| | |
|---|---|
| 1 | ಧರ್ಮಸ್ಥಳ ಪ್ರಕರಣದ ಮತ್ತೊಂದು ಸ್ಫೋಟಕ ಮಾಹಿತಿ ಬಹಿರಂಗವಾಗಿದೆ. |
| 2 | ಧರ್ಮಸ್ಥಳ ಪ್ರಕರಣ, ಚಿನ್ನಯ್ಯನ ಜೊತೆ ಬುರುಡೆ ಹಿಡಿದು ದೆಹಲಿಗೆ ಹೋಗಿದ್ದ ಗ್ಯಾಂಗ್ |
| 3 | ಗ್ಯಾಂಗ್ ಬುರುಡೆ ಹಿಡಿದು ದೆಹಲಿಯಲ್ಲಿ ಕೆಲ ಪ್ರಮುಖರ ಭೇಟಿಯಾಗಿ ಮಾಸ್ಟರ್ ಪ್ಲಾನ್ ರೆಡಿ..! |

**ಧರ್ಮಸ್ಥಳದಲ್ಲಿ ಶೀಘ್ರದಲ್ಲೇ ಬೃಹತ್ ಸಂತ ಸಂಗಮ ಆಗಲಿದೆ:** ಧರ್ಮಸ್ಥಳ ಕ್ಷೇತ್ರ ದಿನದಿಂದ ದಿನಕ್ಕೆ ಹೆಚ್ಚು ಭಕ್ತರನ್ನು ತನ್ನತ್ತ ಸೆಳೆಯುತ್ತಿದೆ. ಹೆಗ್ಗಡೆಯವರ ಮೇಲೆ ಸಾವಿರಾರು ಆರೋಪ ಮಾಡಿದರೂ ಅವರು ಯಾರ ವಿರುದ್ಧವೂ ಮಾತನಾಡಿಲ್ಲ. ಇವತ್ತು ಧರ್ಮಸ್ಥಳ ಪರ ಸಂಘಟಿತ ಹೋರಾಟ ಬೇಕಿಲ್ಲ, ಜನರೇ ಸ್ವಯಂಪ್ರೇರಿತವಾಗಿ ಹೋರಾಟಕ್ಕೆ ಮುಂದಾಗಿದ್ದಾರೆ. ಧರ್ಮಕ್ಷೇತ್ರದಲ್ಲಿ ಶೀಘ್ರದಲ್ಲೇ ಬೃಹತ್ ಸಂತ ಸಂಗಮ ಆಗಲಿದೆ ಎಂದು ಸಾಮಾಜಿಕ ಹೋರಾಟಗಾರ, ಪತ್ರಕರ್ತ ವಸಂತ್ ಗಿಳಿಯಾರ್ ಹೇಳಿದರು. ನನಗೆ ವಿಶ್ವಾಸವಿದೆ. ಧರ್ಮಸ್ಥಳ ವಿರುದ್ಧದ ಅಪಪ್ರಚಾರ ಖಂಡಿಸಲು ಶೀಘ್ರದಲ್ಲೇ ಉತ್ತರದ ಯೋಗಿಗಳು, ಮಹಾಂತರು, ದಕ್ಷಿಣದ ಸಂತರು ಧರ್ಮಕ್ಷೇತ್ರಕ್ಕೆ ಬರಲಿದ್ದಾರೆ. ದೊಡ್ಡ ಸಂತ ಸಂಗಮ ಆಗಬೇಕು. ಜಗತ್ತಿನೆಲ್ಲೆಡೆಯಿಂದ ಧರ್ಮ ಬಂಧುಗಳು ಆಗಮಿಸಲಿದ್ದಾರೆ ಎಂದು ತಿಳಿಸಿದರು.

**ಪ್ರತಾಪ್ ಸಿಂಹ ಆಗ್ರಹ**

ಧರ್ಮಸ್ಥಳ ಪ್ರಕರಣದಲ್ಲಿ ತಮಿಳುನಾಡು, ಕೇರಳ, ಹೈದರಾಬಾದ್‌ಗೂ ಲಿಂಕ್ ಇದೆ. ಆದ್ದರಿಂದ ಈ ಕೇಸ್‌ನ್ನು ಎನ್‌ಐಎಗೆ ರಾಜ್ಯ ಸರ್ಕಾರ ವರ್ಗಾಯಿಸಬೇಕು ಎಂದು ಮಾಜಿ ಸಂಸದ ಪ್ರತಾಪ್ ಸಿಂಹ ಆಗ್ರಹಿಸಿದ್ದಾರೆ. ಧರ್ಮಸ್ಥಳ ಪ್ರಕರಣದ ಬಗ್ಗೆ ಮೈಸೂರಿನಲ್ಲಿ ಮಾತನಾಡಿದ ಅವರು, ಧರ್ಮಸ್ಥಳ ವಿರುದ್ಧ ಅಪಪ್ರಚಾರವು ವ್ಯವಸ್ಥಿತ ಪಿತೂರಿಯಾಗಿದೆ. ಇವೆಲ್ಲವೂ ಧರ್ಮಸ್ಥಳಕ್ಕೆ ಕಳಂಕವನ್ನು ಅಂಟಿಸುವ ಕೆಲಸವಾಗಿದೆ ಎಂಬುದು ಸ್ಪಷ್ಟವಾಗಿದೆ. ಈ ಪ್ರಕರಣದಲ್ಲಿ ಕೇರಳದಲ್ಲಿರುವ ಕಮ್ಯುನಿಸ್ಟ್ ಪಾರ್ಟಿ, ಎಸ್‌ಡಿಪಿಐ ಪ್ರಕರಣದಲ್ಲಿ ಧ್ವನಿ ಎತ್ತಿವೆ ಎಂದು ಕಿಡಿಕಾರಿದ್ದಾರೆ. ಎಸ್‌ಐಟಿ ತನಿಖೆಯಿಂದ ಇದರ ಸತ್ಯ ಬಯಲಾಗಲ್ಲ. ಇದಕ್ಕೆ ರಾಷ್ಟ್ರೀಯ ತನಿಖಾ ದಳದಿಂದ ತನಿಖೆ ಆಗಬೇಕು. ಮಾಸ್ಕ್ ಮ್ಯಾನ್, ಸುಜಾತ ಭಟ್ ಇವರೆಲ್ಲರ ನಿಜ ಬಣ್ಣವು ಸಮಾಜದ ಎದುರು ಬಯಲಾಗಿದೆ. ಈ ಪ್ರಕಣದಲ್ಲಿ ಎಸ್‌ಡಿಪಿಐ ಅವರ ಕೈವಾಡ ಇರುವುದರಿಂದ ಎಸ್‌ಡಿಪಿಐಗೂ ಧರ್ಮಸ್ಥಳಕ್ಕೂ ಏನೂ ಸಂಬಂಧ ಎಂದು ಬಯಲಾಗಬೇಕಿದೆ.

# ಕುಮಾರಣ್ಣನ ಆರೋಗ್ಯ ಸರಿಯಿಲ್ಲ ಎಂದವರಿಗೆ ನಿಖಿಲ್ ತಕ್ಕ ಉತ್ತರ

**■ ಕುಮಾರಣ್ಣ ಚೇತರಿಕೆ ಕಾಣುತ್ತಿದ್ದು, ಶೀಘ್ರದಲ್ಲೇ ಸಂಪೂರ್ಣ ಗುಣಮುಖರಾಗುವ ನಿರೀಕ್ಷೆ ■ ಆರೋಗ್ಯ ಕುರಿತು ಯಾವುದೇ ಆತಂಕ ಇಲ್ಲ**

• ಉದಯವಾಹಿನಿ, ಬೆಂಗಳೂರು

ಕುಮಾರಣ್ಣ ಆರೋಗ್ಯ ಸರಿ ಇಲ್ಲ ಅಂತ ರಾಜ್ಯದಲ್ಲೆಡೆ ಚರ್ಚೆಗಳು ಶುರುವಾಗಿದೆ, ಅವರ ತಂದೆ ತಾಯಿ ಆಶೀರ್ವಾದ, ಭಗವಂತನ ಕೃಪೆ, ನಿಮ್ಮೆಲ್ಲರ ಪ್ರೀತಿಯ ಹಾರೈಕೆಯಿಂದ ಕುಮಾರಣ್ಣ ಆರೋಗ್ಯವಾಗಿದ್ದಾರೆ. ಯಾವುದೇ ಸಮಸ್ಯೆ ಇಲ್ಲ, ಯಾರು ಕೂಡ ಆತಂಕ ಪಡುವ ಅಗತ್ಯವಿಲ್ಲ ಎಂದು ನಿಖಿಲ್ ಕುಮಾರಸ್ವಾಮಿ ಅವರು ತಿಳಿಸಿದರು.

ಈ ಬಗ್ಗೆ ದೇವನಹಳ್ಳಿಯಲ್ಲಿ ಆಯೋಜಿಸಿದ್ದ ಜನರೊಂದಿಗೆ ಜನತಾದಳ ಸಮಾವೇಶದಲ್ಲಿ ಮಾತನಾಡಿದ ಅವರು, ಇತ್ತೀಚೆಗೆ ಮಾಧ್ಯಮಗಳು ಮತ್ತು ಕಾರ್ಯಕರ್ತರು ಕುಮಾರಣ್ಣನ ಆರೋಗ್ಯದಲ್ಲಿ ಏರುಪೇರಾಗಿದೆ ಅಂತ ಕೇಳ್ತಿದ್ರು.

ಹೀಗಾಗಿ ನಾನು 80 ಕ್ಷೇತ್ರಗಳಲ್ಲಿ ಸುತ್ತಾಡಿ ಅವರ ಜವಬ್ದಾರಿಯನ್ನ ನಾನು ಹೊರುತ್ತಿದ್ದೇನೆ. ಪ್ರತಿನಿತ್ಯ ನಾನು ನನ್ನ ಆಯಸ್ಸು ನನ್ನ ತಂದೆಗೆ ಕೊಡಬೇಕು ಅಂತ ದೇವರಲ್ಲಿ ಪ್ರಾರ್ಥನೆ ಮಾಡ್ತಿದ್ದೀನಿ. ನಾನು ಕೇವಲ ಮಗನಾಗಿ ಈ ಮಾತನ್ನ ಹೇಳ್ತಿಲ್ಲ'' ಎಂದರು. ಕುಮಾರಣ್ಣ ಆರೋಗ್ಯದಲ್ಲಿ ಸಣ್ಣಪುಟ್ಟ ಏರುಪೇರಾಗಿದೆ. ಆದರೆ ಯಾವುದೇ ಆತಂಕ ಪಡುವ ಅಗತ್ಯವಿಲ್ಲ.ಮತ್ತೆ ಅವರು ಚೇತರಿಕೆ ಕಾಣುತ್ತಿದ್ದಾರೆ. ಶೀಘ್ರದಲ್ಲೆ ಸಂಪೂರ್ಣ ಗುಣಮುಖರಾಗುತ್ತಾರೆ. ದೇವೆಗೌಡರು, ಕುಮಾರಣ್ಣ ಇಬ್ಬರು ಸಹ ಶತಾಯುಷಿಗಳಾಗುತ್ತಾರೆ ಅನ್ನೋ ನಂಬಿಕೆ ಇದೆ ಎಂದು ತಿಳಿಸಿದರು.



**ಬಿಜೆಪಿ ಜೊತೆ ಜೆಡಿಎಸ್ ಮೈತ್ರಿ ಇದೆಯಾ?:** ಬಿಜೆಪಿ ಜೊತೆಗಿನ ಜೆಡಿಎಸ್ ಮೈತ್ರಿ ದಿನದಿಂದ ದಿನಕ್ಕೆ ಗಟ್ಟಿಯಾಗುತ್ತಿದೆ ಎಂದು ಜೆಡಿಎಸ್ ಯುವ ಘಟಕದ ಅಧ್ಯಕ್ಷ ನಿಖಿಲ್ ಕುಮಾರಸ್ವಾಮಿ ಹೇಳಿದ್ದಾರೆ. ಮುಂಬರುವ ಬೃಹತ್ ಬೆಂಗಳೂರು ಮಹಾನಗರಪಾಲಿಕೆ (ಬಿಬಿಎಂಪಿ) ಹಾಗೂ ಇತರೆ ಸ್ಥಳೀಯ ಸಂಸ್ಥೆಗಳ ಚುನಾವಣೆಯಲ್ಲೂ ಈ ಮೈತ್ರಿ ಮುಂದುವರಿಯಲಿದೆ ಎಂದು ಅವರು ತಿಳಿಸಿದ್ದಾರೆ. ಇದೇ ವೇಳೆ, ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿಯವರಿಗೆ ಸ್ಪಷ್ಟತೆ ಇಲ್ಲ, ಯಾರೋ ಬರೆದುಕೊಟ್ಟ ಸ್ಕ್ರಿಪ್ಟ್ ಅನ್ನು ಮಾತ್ರ ಓದುತ್ತಾರೆ ಎಂದು ನಿಖಿಲ್ ಟೀಕಿಸಿದರು.

**ಎಚ್ ಡಿಕೆ ಈಗ ಹೆಚ್ಚಾಗಿ ಕರ್ನಾಟಕಕ್ಕೆ ಬರ್ತಾ ಇಲ್ಲ**

ಕೇಂದ್ರ ಸಚಿವರಾದ ಹೆಚ್.ಡಿ. ಕುಮಾರಸ್ವಾಮಿ ಅವರು ವಾರಾಂತ್ಯದ ರಾಜಕೀಯ ಕಾರ್ಯಕ್ರಮಗಳಿಗಾಗಿ ಬೆಂಗಳೂರಿಗೆ ಬರುತ್ತಿದ್ದ ತಮ್ಮ ಹಳೆಯ ರೂಢಿಯನ್ನು ಬದಲಾಯಿಸಿದ್ದಾರೆ. ಇತ್ತೀಚೆಗೆ ಅವರು ಬೆಂಗಳೂರಿಗೆ ಬರುವುದು ಕಡಿಮೆಯಾಗಿದ್ದು, ದೆಹಲಿಯಲ್ಲೇ ಹೆಚ್ಚಾಗಿ ಉಳಿಯುತ್ತಿದ್ದಾರೆ. ಇದು ಅವರ ರಾಜಕೀಯ ತಂತ್ರಗಾರಿಕೆಯಲ್ಲಿ ಬದಲಾವಣೆ ಆಗಿದೆಯೇ ಎಂಬ ಪ್ರಶ್ನೆ ರಾಜಕೀಯ ವಲಯದಲ್ಲಿ ಚರ್ಚೆಗೆ ಕಾರಣವಾಗಿದೆ. ಎಚ್ ಡಿ ಕುಮಾರಸ್ವಾಮಿ ಅನುಪಸ್ಥಿತಿಯಲ್ಲಿ ರಾಜ್ಯವ್ಯಾಪಿ ಪ್ರವಾಸವನ್ನು ಮಾಡುತ್ತಿರುವ ಜೆಡಿಎಸ್ ಯುವ ಘಟಕದ ಅಧ್ಯಕ್ಷ ನಿಖಿಲ್ ಕುಮಾರಸ್ವಾಮಿ.

ಅಲ್ಲದೆ, ಕಾಂಗ್ರೆಸ್ ಹಿರಿಯ ನಾಯಕರಾದ ರಾಜಣ್ಣ ಅವರನ್ನು ಪಕ್ಷದಿಂದ ವಜಾಗೊಳಿಸುವ ಮೂಲಕ ಅವರಿಗೆ ಮುಜುಗರ ಮತ್ತು ಗೌರವಕ್ಕೆ ಧಕ್ಕೆ ಉಂಟುಮಾಡಲಾಗಿದೆ ಎಂದು ಅವರು ಆರೋಪಿಸಿದರು.

**ನಿಖಿಲ್ ಕುಮಾರಸ್ವಾಮಿ ಏನಂದ್ರು?:** ಪ್ರಜ್ವಲ್ ರೇವಣ್ಣಗೆ ಜೀವಾವಧಿ ಶಿಕ್ಷೆ ವಿಧಿಸಿದ ನ್ಯಾಯಾಲಯದ ತೀರ್ಪಿಗೆ ತಲೆಬಾಗುತ್ತೇವೆ ಎಂದು ಜೆಡಿಎಸ್ ಯುವ ಘಟಕದ ಅಧ್ಯಕ್ಷ ನಿಖಿಲ್ ಕುಮಾರಸ್ವಾಮಿ ಪ್ರತಿಕ್ರಿಯಿಸಿದ್ದಾರೆ. ಈ ವಿಷಯದ ಕುರಿತು ಮಾತನಾಡಿದ ಅವರು, ಪ್ರಜ್ವಲ್ ರೇವಣ್ಣ ಆರೋಪಿಯಾದ ತಕ್ಷಣವೇ ಜೆಡಿಎಸ್ ಪಕ್ಷದಿಂದ ಅವರನ್ನು ಅಮಾನತು ಮಾಡಲಾಗಿತ್ತು ಎಂದು ಸ್ಪಷ್ಟಪಡಿಸಿದರು. ಈ ವಿಷಯದ ಕುರಿತು ಬಿಜೆಪಿ ನಾಯಕರು ಪ್ರತಿಕ್ರಿಯಿಸಬೇಕೆಂದು ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಆಗ್ರಹಿಸಿದ್ದಾರೆ.

**ಈ ದಿನದ ದರ** ಪೆಟ್ರೋಲ್: 103.50 ₹/L | ಡೀಸೆಲ್ : 90.03 ₹/L | ಬಂಗಾರ: ₹10,162/Gram24ct ₹9,315/Gram22ct | ಬೆಳ್ಳಿ: ₹120.00/Gram

## ಧಾರ್ಮಿಕ ಪ್ರವಚನ



• ಉದಯವಾಹಿನಿ, ಬೆಂಗಳೂರು

ಭೀಮನಕಟ್ಟೆ ಪ್ರವಚನ ಬಳಗದ ವತಿಯಿಂದ ಆಗಸ್ಟ್ 24 ರಿಂದ ಸೆಪ್ಟೆಂಬರ್ 7ರವರೆಗೆ ಪ್ರತಿದಿನ ಸಂಜೆ 6-15ಕ್ಕೆ ಶ್ರೀ ಚಂದ್ರಶೇಖರ ಆಚಾರ್ಯರಿಂದ ಪ್ರೋಷ್ಠಪದಿ ಭಾಗವತ ಧಾರ್ಮಿಕ ಪ್ರವಚನ. ಸ್ಥಳ: ಭೀಮನಕಟ್ಟೆ ಶ್ರೀ ರಾಘವೇಂದ್ರ ಸ್ವಾಮಿಗಳ ಮಠ, ದೊಡ್ಡಬೊಮ್ಮಸಂದ್ರ, ವಿದ್ಯಾರಣ್ಯಪುರ ಬೆಂಗಳೂರು-97

## ಪ್ರತಿಯೊಬ್ಬರೂ ಪರಿಸರ ಸ್ನೇಹಿ ಮಣ್ಣಿನ ಗಣಪತಿ ಮೂರ್ತಿಯನ್ನು ಪ್ರತಿಷ್ಠಾಪಿಸಿ ಹಬ್ಬ ಆಚರಣೆ


ಉದಯವಾಹಿನಿ ಚಿತ್ರ

• ಉದಯವಾಹಿನಿ, ಕೆ.ಆರ್.ಪುರ

ಪ್ರತಿಯೊಬ್ಬರೂ ಪರಿಸರ ಸ್ನೇಹಿ ಮಣ್ಣಿನ ಗಣಪತಿ ಮೂರ್ತಿಯನ್ನು ಪ್ರತಿಷ್ಠಾಪಿಸಿ ಹಬ್ಬ ಆಚರಣೆ ಮಾಡುವ ಮೂಲಕ ಪಿಓಪಿ ಸಂಪೂರ್ಣ ನಿಷೇಧ ಮಾಡೋಣ ಎಂದು ಚಲನಚಿತ್ರ ನಟಿ ಅನು ಪ್ರಭಾಕರ್ ಕರೆ ನೀಡಿದ್ದಾರೆ.

ಕ್ಷೇತ್ರದಲ್ಲಿ ಯೂತ್ ಫಾರ್ ಸೇವಾ ಫೌಂಡೇಶನ್ ಆಯೋಜಿಸಿದ ಮಣ್ಣಿನ ಗಣಪನ ಮೂರ್ತಿ ಮಾಡುವ ತರಬೇತಿಯಲ್ಲಿ ಅವರು ಭಾಗಿಯಾಗಿ ಸ್ವತಃ ಅವರೇ ಮಣ್ಣಿನ ಗಣಪತಿ ಮೂರ್ತಿಯನ್ನು ನಿರ್ಮಿಸಿ ಮಾತನಾಡಿದ ಅವರು.

ನಗರದಲ್ಲಿ ಪಿಓಪಿ ಗಣೇಶ ಮೂರ್ತಿ ಸಂಪೂರ್ಣ ನಿಷೇಧವಾಗಬೇಕೆಂದರೆ, ಪ್ರತಿಯೊಬ್ಬರೂ ಪರಿಸರ ಸ್ನೇಹಿ ಹಬ್ಬ ಆಚರಣೆಗೆ ಮುಂದಾಗಿ, ಕಾಗದ, ಬಟ್ಟೆ, ಮಣ್ಣು, ಅರಿಶಿಣದಿಂದ ಮಾಡಿದ ಮೂರ್ತಿಗಳನ್ನು ಬಳಸಿ ಪರಿಸರ ರೀತಿಯಲ್ಲಿ ಹಬ್ಬ ಮಾಡಬೇಕೆಂದು ಪ್ರತಿಯೊಬ್ಬರು ಸಂಕಲ್ಪ ಮಾಡೋಣ ಎಂದರು. ಆಯೋಜಕ ಕಣ್ಣೂರು ಬಲಮುರಿ ಗಣಪತಿ ದೇವಾಲಯದ ಧರ್ಮದರ್ಶಿ ಚಂದ್ರಶೇಖರ ಮಾತನಾಡಿ, ನಟಿ ಅನುಪ್ರಭಾಕರ್ ಅವರೊಂದಿಗೆ ಇಲ್ಲಿನ ವಾಸಿಗಳು, ಮಕ್ಕಳು 101 ಮಣ್ಣಿನ ಗಣಪತಿ ಮೂರ್ತಿಯನ್ನು ತಯಾರಿಸಿದ್ದಾರೆ, ಪಿಓಪಿ ಗಣಪ ಬೇಡ, ಮಣ್ಣಿನ ಗಣಪ ಬೇಕು ಎಂದು ಸಂಕಲ್ಪ ಮಾಡಿದ್ದೇವೆ ಎಂದರು.

ಕಾರ್ಯಕ್ರಮದಲ್ಲಿ ಅಪಾರ್ಟ್ಮೆಂಟ್ ನಿವಾಸಿ ಹಾಗೂ ಶಿಕ್ಷಕಿ ವಂದಾನ, ತರಬೇತುದಾರ ಡಾ. ದೀಲಿಪ್, ಫಾಯಲ್, ಸೇರಿದಂತೆ ಅಪಾರ್ಟ್ಮೆಂಟ್ ಅಸೋಸಿಯೇಷನ್ ಸದಸ್ಯರು ಮತ್ತಿತರರು ಈ ಸಂದರ್ಭದಲ್ಲಿ ಭಾಗಿಯಾಗಿದ್ದರು.

## ಮೊದಲ ದಿನವೇ ಜನರಿಂದ ಉತ್ತಮ ಸ್ಪಂದನೆ, 4.18 ಕೋಟಿ ರೂ ದಂಡ ಸಂಗ್ರಹ..!

• ಉದಯವಾಹಿನಿ, ಬೆಂಗಳೂರು

ಸಂಚಾರ ನಿಯಮ ಉಲ್ಲಂಘನೆಯ ಪ್ರಕರಣಗಳಲ್ಲಿ ಬಾಕಿ ಇರುವ ದಂಡ ಪಾವತಿಗೆ ಶೇ.50 ರಷ್ಟು ರಿಯಾಯಿತಿಗೆ ಮೊದಲ ದಿನವೇ ರಾಜಧಾನಿಯಲ್ಲಿ ಜನರಿಂದ ಉತ್ತಮ ಸ್ಪಂದನೆ ವ್ಯಕ್ತವಾಗಿದೆ. ಒಂದೇ ದಿನದಲ್ಲಿ 1.48 ಲಕ್ಷ ಪ್ರಕರಣಗಳು ವಿಲೇವಾರಿಯಾಗಿದ್ದು, 4.18 ಕೋಟಿ ರೂ.ದಂಡ ವಸೂಲಿ ಆಗಿದೆ. ಸಂಚಾರ ನಿಯಮ ಉಲ್ಲಂಘನೆಯ ಹಳೇ ಪ್ರಕರಣಗಳಲ್ಲಿ ದಂಡ ಪಾವತಿಸಿ ಇತ್ಯರ್ಥಪಡಿಸಿಕೊಳ್ಳಲು ಸೆ.19 ವರೆಗೆ ದಂಡ ಪಾವತಿಗೆ ಸರ್ಕಾರ ಶೇ,50 ರಷ್ಟು ರಿಯಾಯಿತಿ ನೀಡಿದೆ. ಈ ರಿಯಾಯಿತಿ ಅವಧಿ ಶನಿವಾರದಿಂದ ಆರಂಭವಾಗಿದ್ದು, ಮೊದಲ ದಿನವೇ ಜನರಿಂದ ಉತ್ತಮ ಪ್ರತಿಕ್ರಿಯೆ ವ್ಯಕ್ತವಾಗಿದೆ.

ಮೊದಲ ದಿನ 1,48,747 ಪ್ರಕರಣಗಳಲ್ಲಿ 4,18,20,500 ರೂ..ದಂಡ ಸಂಗ್ರಹವಾಗಿದೆ. ದಂಡ ಪಾವತಿಗೆ ನಾಗರಿಕರಿಗೆ ಪೊಲೀಸರು ಅವಕಾಶ ಕಲ್ಪಿಸಿದ್ದು, ಕರ್ನಾಟಕ ಸ್ಟೇಟ್ ಪೊಲೀಸ್ (ಕೆಎಸ್‌ಪಿ) ಆ್ಯಪ್, ಬೆಂಗಳೂರು ಪೊಲೀಸರ ಬಿಟಿಪಿ ಆಸ್ಟ್ರಂ ಆ್ಯಪ್, ಕರ್ನಾಟಕ ಒನ್/ಬೆಂಗಳೂರು ಒನ್ ವೆಬ್ ಸೈಟ್‌ನಲ್ಲಿ ದಂಡ ಪಾವತಿಸಬಹುದು. ಅಲ್ಲದೆ, ಸ್ಥಳೀಯ ಸಂಚಾರ ಠಾಣೆ ಹಾಗೂ ಸಂಚಾರ ನಿರ್ವಹಣಾ ಕೇಂದ್ರ (ಟಿಎಂಸಿದಲ್ಲಿ ಕೂಡ ವಾಹನ ನೋಂದಣಿ ಸಂಖ್ಯೆ ಪರಿಶೀಲಿಸಿ ಮಾಹಿತಿ ಪಡೆದು, ದಂಡ ಪಾವತಿಸಬಹುದಾಗಿದೆ.

## ಹೆಚ್ಚು ಸಮಯ ಡಿಜಿಟಲ್ ಸಾಧನ ಬಳಕೆ: ಮಯೋಪಿಯಾ ಹೆಚ್ಚಳ

• ಉದಯವಾಹಿನಿ, ಬೆಂಗಳೂರು

ಹೆಚ್ಚು ಸಮಯ ಡಿಜಿಟಲ್ ಸಾಧನಗಳ ಮುಂದೆ ಕಳೆಯುವುದರಿಂದ ಮಕ್ಕಳು ಯುವಕರು ಮತ್ತು ಐಟಿ ಉದ್ಯೋಗಿಗಳಲ್ಲಿ ದೃಷ್ಟಿ ಸಮಸ್ಯೆ ಕಾಣಿಸಿಕೊಳ್ಳುತ್ತಿದ್ದು, 'ಮಯೋಪಿಯಾ' ಮತ್ತು 'ಆಸ್ಟಿಗ್ಮಾಟಿಸಂ' ಪ್ರಕರಣಗಳು ಹೆಚ್ಚುತ್ತಿವೆ' ಎಂದು ಡಾ. ಅಗರ್‌ವಾಲ್ ಐ ಆಸ್ಪತ್ರೆ ತಿಳಿಸಿದೆ. ಈ ಸಮಸ್ಯೆಯ ಚಿಕಿತ್ಸೆಗೆ ಸಂಬಂಧಿಸಿದಂತೆ ಆಸ್ಪತ್ರೆಯು ನಗರದಲ್ಲಿ 'ವೇವ್‌ಲೈಟ್ ಇಎಕ್ಸ್ 500 ಕಂಟೋರಾ ಎಕ್ಸಿಮರ್ ಲೇಸರ್' ಎಂಬ ಯಂತ್ರವನ್ನು ಬಿಡುಗಡೆ ಮಾಡಿದೆ. ಇದು ನಿಖರ ಮತ್ತು ಗ್ರಾಹಕೀಕೃತ ಚಿಕಿತ್ಸೆ ಒದಗಿಸಲು ಸಹಕಾರಿಯಾಗಿದೆ.

'ಡಿಜಿಟಲ್ ಪರದೆಯನ್ನು ನೋಡುವ ಸಮಯ ಹೆಚ್ಚುತ್ತಿರುವ ಜತೆಗೆ, ಹೊರಾಂಗಣ ಚಟುವಟಿಕೆ ಕಡಿಮೆ ಆಗುತ್ತಿದೆ. ಶೈಕ್ಷಣಿಕ ಒತ್ತಡವೂ ಮಕ್ಕಳಲ್ಲಿ ಹೆಚ್ಚುತ್ತಿದೆ. ಇದರಿಂದಾಗಿ ಮಯೋಪಿಯಾ ಪ್ರಕರಣಗಳು ಹೆಚ್ಚಳವಾಗುತ್ತಿವೆ. ಈ ಸಮಸ್ಯೆಯನ್ನು ಆರಂಭಿಕ ಹಂತದಲ್ಲಿಯೇ ಪತ್ತೆ ಮಾಡಿ, ಚಿಕಿತ್ಸೆ ಒದಗಿಸಬೇಕು' ಎಂದು ಡಾ. ಅಗರ್ವಾಲ್ಸ್ ಐ ಹಾಸ್ಪಿಟಲ್‌ನ ಕ್ಲಿನಿಕಲ್ ಸೇವೆಗಳ ಮುಖ್ಯಸ್ಥ ಡಾ. ಅಮೋದ್ ನಾಯಕ್ ತಿಳಿಸಿದ್ದಾರೆ.

## ಕಾಂಗ್ರೆಸ್ ಶಾಸಕ ಕೆಸಿ ವೀರೇಂದ್ರ ಪಪ್ಪಿಯನ್ನು ಬೆಂಗಳೂರಿಗೆ ಕರೆತಂದ ಇಡಿ

• ಉದಯವಾಹಿನಿ, ಬೆಂಗಳೂರು

ಅಕ್ರಮವಾಗಿ ಬೆಟ್ಟಿಂಗ್ ಕಂಪನಿ ನಡೆಸುತ್ತಿದ್ದ ಆರೋಪಕ್ಕೆ ಸಂಬಂಧಿಸಿದ ಹಣ ಅಕ್ರಮ ವರ್ಗಾವಣೆ ಪ್ರಕರಣದಲ್ಲಿ ಬಂಧನಕ್ಕೀಡಾಗಿರುವ ಕಾಂಗ್ರೆಸ್ ಶಾಸಕ ಕೆಸಿ ವೀರೇಂದ್ರ 'ಪಪ್ಪಿ' ಅವರನ್ನು ಪ್ರಕರಣದ ಹೆಚ್ಚಿನ ತನಿಖೆಗಾಗಿ ಜಾರಿ ನಿರ್ದೇಶನಾಲಯ (ಇ.ಡಿ) ಅಧಿಕಾರಿಗಳು ಭಾನುವಾರ ಬೆಂಗಳೂರಿಗೆ ಕರೆತಂದಿದ್ದಾರೆ. ಮೂಲಗಳ ಪ್ರಕಾರ, ಇ.ಡಿ ವಶದಲ್ಲಿರುವ ಶಾಸಕರನ್ನು ಬೆಳಿಗ್ಗೆ ಸಿಕ್ಕಿಂನಿಂದ ಕರೆತರಲಾಗಿದೆ. ವಿಮಾನ ನಿಲ್ದಾಣಕ್ಕೆ ಆಗಮಿಸಿದ ಕೂಡಲೇ ಇ.ಡಿ ವಿಶೇಷ ತಂಡ ಅವರನ್ನು ವಶಕ್ಕೆ ತೆಗೆದುಕೊಂಡಿತು. ಕೆಂಪೇಗೌಡ ಅಂತರರಾಷ್ಟ್ರೀಯ ವಿಮಾನ ನಿಲ್ದಾಣದ ಟರ್ಮಿನಲ್-2 ರಲ್ಲಿ ಯಾವುದೇ ಅಹಿತಕರ ಘಟನೆ ನಡೆಯದಂತೆ ಕಟ್ಟುನಿಟ್ಟಿನ ಭದ್ರತೆಯನ್ನು ಕೈಗೊಳ್ಳಲಾಗಿತ್ತು.



ಅಧಿಕಾರಿಗಳು ವೀರೇಂದ್ರ ಅವರನ್ನು ಮಾಧ್ಯಮಗಳಿಂದ ದೂರವಿಟ್ಟು, ವಿಚಾರಣೆಗಾಗಿ ಅಜ್ಞಾತ ಸ್ಥಳಕ್ಕೆ ಕರೆದೊಯ್ದರು. ಪಪ್ಪಿ (50), ಅವರ ಸಹೋದರ ಮತ್ತು ಇತರರ ವಿರುದ್ಧ ಅಕ್ರಮ ಬೆಟ್ಟಿಂಗ್ ಕಂಪನಿ ನಡೆಸುತ್ತಿದ್ದ ಆರೋಪಕ್ಕೆ ಸಂಬಂಧಿಸಿದ ಹಣ ಅಕ್ರಮ ವರ್ಗಾವಣೆ ಪ್ರಕರಣದ ಭಾಗವಾಗಿ ಕೇಂದ್ರದ ತನಿಖಾ ಸಂಸ್ಥೆಯು ಕರ್ನಾಟಕದ ಚಿತ್ರದುರ್ಗ, ಬೆಂಗಳೂರು ಮತ್ತು ಹುಬ್ಬಳ್ಳಿ, ಜೋಧ್‌ಪುರ (ರಾಜಸ್ಥಾನ), ಮುಂಬೈ ಮತ್ತು ಗೋವಾದ ಕನಿಷ್ಠ 30 ಸ್ಥಳಗಳಲ್ಲಿ ಶೋಧಕಾರ್ಯ ನಡೆಸಿದೆ. ಪಪ್ಪೀಸ್ ಕ್ಯಾಸಿನೊ ಗೋಲ್ಡ್, ಓಷನ್ ರಿವರ್ಸ್ ಕ್ಯಾಸಿನೊ, ಪಪ್ಪೀಸ್ ಕ್ಯಾಸಿನೊ ಪ್ರೈಡ್, ಓಷನ್ 7 ಕ್ಯಾಸಿನೊ ಮತ್ತು ಬಿಗ್ ಡ್ಯಾಡಿ ಕ್ಯಾಸಿನೊ ಎಂಬ ಹೆಸರಿನ ಗೋವಾದ ಐದು ಕ್ಯಾಸಿನೊಗಳ ಮೇಲೆಯೂ ದಾಳಿ ನಡೆಸಲಾಗಿದೆ ಎಂದು ಅವರು ತಿಳಿಸಿದ್ದಾರೆ.

# ದುಬಾರಿ ಆಟೋ ದರಕ್ಕೆ ದಂಗಾದ ಪ್ರಯಾಣಿಕ

## ಕೇವಲ ಒಂದು ಕಿಲೋಮೀಟರ್ ದೂರಕ್ಕೆ 415 ರೂ.ಗಳ ಚಾರ್ಜ್ ನಂತೆ ದರ ಫಿಕ್ಸ್ ಆಗಿದೆ

• ಉದಯವಾಹಿನಿ, ಬೆಂಗಳೂರು


ಉದಯವಾಹಿನಿ ಚಿತ್ರ

**3 ವರ್ಷಗಳಲ್ಲಿ ಅಂತಹ 6,952 ಪ್ರಕರಣ ದಾಖಲು**

ಇದೇ ಆ. 24ರಂದು ರೆಡಿಟ್ ಸಾಮಾಜಿಕ ಜಾಲತಾಣದಲ್ಲಿ ಮೂಡಿಬಂದಿರುವ ಪೋಸ್ಟ್ ಒಂದು ಸಂಚಲನ ಸೃಷ್ಟಿಸಿದೆ. ಈಗ ಸದ್ಯಕ್ಕೆ ಬೆಂಗಳೂರಿನಲ್ಲಿ ಮಳೆಯಾಗುತ್ತಿದೆ. ಅಂಥ ಮಳೆಯ ಸಂದರ್ಭದಲ್ಲಿ ವ್ಯಕ್ತಿಯೊಬ್ಬರು ಆಟೋ ಬುಕ್ ಮಾಡಲು ಹೋಗಿದ್ದಾರೆ. ಕ್ಯಾಬ್ ಅಗ್ರಿಕೇಟರ್ (ಓಲಾ, ಉಬರ್ ಮುಂತಾದ ಆ್ಯಪ್) ಮೂಲಕ ಆಟೋ ಬುಕ್ ಮಾಡಲು ಹೋಗಿದ್ದಾರೆ.

ಆ್ಯಪ್ ಒಂದರಲ್ಲಿ ಆಟೋ ಬುಕ್ಕಿಂಗ್ ಆಯ್ತು. ಆದರೆ ರೇಟ್ ನೋಡಿ ಬುಕ್ಕಿಂಗ್ ಮಾಡಿದ ವ್ಯಕ್ತಿ ದಂಗಾಗಿದ್ದಾರೆ. ಕೇವಲ ಒಂದು ಕಿಲೋಮೀಟರ್ ದೂರಕ್ಕೆ 415 ರೂ.ಗಳ ಚಾರ್ಜ್ ನಂತೆ ದರ ಫಿಕ್ಸ್ ಆಗಿದೆ. ಅದನ್ನು ನೋಡಿದ ಆ ವ್ಯಕ್ತಿಯ ಪಕ್ಕದಲ್ಲಿದ್ದ ಅವರ ಗೆಳೆಯನೂ ಗಾಬರಿಯಾಗಿ ಆ ಅನುಭವವನ್ನು ರೆಡಿಟ್ ಎಂಬ ಸಾಮಾಜಿಕ ಜಾಲತಾಣದಲ್ಲಿ ಹಂಚಿಕೊಂಡಿದ್ದಾರೆ.

ಈ ಪೋಸ್ಟ್ ನೋಡನೋಡುತ್ತಲೇ ವೈರಲ್ ಆಗಿದೆ. ಹಲವಾರು ಮಂದಿ ಇದಕ್ಕೆ ಕಮೆಂಟ್ ಹಾಕಿ, ಬೆಂಗಳೂರಿನಲ್ಲಿ ಆ್ಯಪ್ ಆಧಾರಿತ ಕ್ಯಾಬ್ ಅಥವಾ ಆಟೋ ಬುಕ್ಕಿಂಗಳು ದಿನದಿಂದ ದಿನಕ್ಕೆ ದುಬಾರಿಯಾಗುತ್ತಿರುವುದರ ವಿರುದ್ಧ ಅಸಮಾಧಾನ ತೋಡಿಕೊಂಡಿದ್ದಾರೆ. ಅಷ್ಟೇ ಅಲ್ಲದೆ, ಮಳೆ ಮತ್ತಿತರ ಸಂದರ್ಭಗಳಲ್ಲಿ ವಿಧಿಸಲಾಗುವ ಅತ್ಯಂತ ದುಬಾರಿ ಆಟೋ ದರಗಳು ಪ್ರಯಾಣಿಕರ ಜೇಬು ಖಾಲಿ ಮಾಡುತ್ತಿವೆ ಎಂದು ಬೇಸರಿಸಿದ್ದಾರೆ.

**ಜರ್ಮನಿಯಲ್ಲೂ ಇಷ್ಟೇ ಶುಲ್ಕ ವಿಧಿಸುತ್ತಾರೆ ಎಂದ ನೆಟ್ಟಿಗರು!:** ಬೆಂಗಳೂರಿನಲ್ಲಿ ದುಬಾರಿ ಆಟೋ ದರ ಶುಲ್ಕದ ಬಗ್ಗೆ ಹೇಳಿಕೊಂಡಿರುವ ನೆಟ್ಟಿಗರೊಬ್ಬರು ಜರ್ಮನಿಯಲ್ಲಿ ಕ್ಯಾಬ್ ಬುಕ್ಕಿಂಗ್ ವೇಳೆ ಮರ್ಸಿಡಿಸ್ ಬೆಂಝ್ ಕಾರು ಬುಕ್ ಮಾಡಿದಾಗ ಇಷ್ಟೇ ರೇಟು ಕೇಳುತ್ತಾರೆ ಎಂದು ಲೇವಡಿ ಮಾಡಿದ್ದಾರೆ.

**ಹೆಚ್ಚು ದರ ಕೇಳುವ ಆಟೋ ಚಾಲಕರಿಗೆ ಬಿಸಿ ಮುಟ್ಟಿಸಿದ ಸಾರಿಗೆ ಇಲಾಖೆ!**

**ಬೆಂಗಳೂರಿನಲ್ಲಿ ಹೆಚ್ಚುವರಿ ಪ್ರಯಾಣ ದರ ವಸೂಲಿ ಮಾಡುತ್ತಿರುವ ಆಟೋಗಳ ವಿರುದ್ಧ ಸಾರಿಗೆ ಇಲಾಖೆ ಕಠಿಣ ಕ್ರಮ ಕೈಗೊಂಡಿದೆ. ಸಾರಿಗೆ ಸಚಿವರ ಆದೇಶದ ಮೇರೆಗೆ, ಒಂದೇ ದಿನ 22 ತಂಡಗಳು ವಿಶೇಷ ಕಾರ್ಯಾಚರಣೆ ನಡೆಸಿವೆ. ಈ ಕಾರ್ಯಾಚರಣೆಯಲ್ಲಿ, 260 ಪ್ರಕರಣಗಳನ್ನು ದಾಖಲಿಸಲಾಗಿದೆ ಮತ್ತು ನಿಯಮ ಉಲ್ಲಂಘಿಸಿದ 98 ಆಟೋಗಳನ್ನು ವಶಪಡಿಸಿಕೊಳ್ಳಲಾಗಿದೆ. ಇದರಿಂದ ನಿಯಮ ಮೀರಿ ವರ್ತಿಸುವ ಆಟೋ ಚಾಲಕರಿಗೆ ಎಚ್ಚರಿಕೆ ನೀಡಿದಂತಾಗಿದೆ.**

ಮತ್ತೊಬ್ಬರು ಪ್ರತಿಕ್ರಿಯಿಸಿ, ಹೋಗಲಿ?

ಬೆಂಗಳೂರಿನಲ್ಲಿ ಅಷ್ಟು ದುಬಾರಿ ಬಾಡಿಗೆ ಕೊಟ್ಟು ಹೋಗ್ತೀವಿ ಎಂದರೂ ಸರಿಯಾಗ ಸಮಯಕ್ಕೆ ನಿಗದಿತ ಸ್ಥಳ ತಲುಪಲು ಸಾಧ್ಯವಿಲ್ಲ. ಹೆವಿ ಟ್ರಾಫಿಕ್ ಇತ್ಯಾದಿಗಳಿಂದಾಗಿ ಬೆಂಗಳೂರಿನಲ್ಲಿ ರಸ್ತೆ ಮಾರ್ಗಗಳಲ್ಲಿ ಸಾಗುವುದು, ಅದರಲ್ಲೂ ಪೀಕ್ ಹವರ್ಸ್ ನಲ್ಲಿ ಪ್ರಯಾಣಿಸುವುದು ತಮ್ಮ ತಾಳ್ಮೆಯನ್ನು ಪರೀಕ್ಷಿಸುವಂತಿರುತ್ತದೆ ಎಂದಿದ್ದಾರೆ.

**ದುಪ್ಪಟ್ಟು ದರ ವಿಧಿಸುವ ಆಟೋ ಚಾಲಕರ ವಿರುದ್ಧ ದೂರುಗಳು:** ದುಪ್ಪಟ್ಟು ದರ ವಸೂಲಿ ಮಾಡುವ ಆಟೋ ಚಾಲಕರ ವಿರುದ್ಧ ಬೆಂಗಳೂರು ಸಂಚಾರ ಪೊಲೀಸರು ಕಟ್ಟುನಿಟ್ಟಿನ ಕ್ರಮ ಕೈಗೊಂಡಿದ್ದಾರೆ. ಕಳೆದ ಮೂರು ವರ್ಷಗಳಲ್ಲಿ ಅಂತಹ 6,952 ಪ್ರಕರಣಗಳನ್ನು ದಾಖಲಿಸಲಾಗಿದೆ. ಅಲ್ಲದೆ, ಪ್ರಯಾಣಿಕರ ಸುರಕ್ಷತೆಗಾಗಿ ಸಂಚಾರ ವಿಭಾಗವು ಹೊಸ ನಿಯಮವನ್ನು ಜಾರಿಗೆ ತಂದಿದೆ.

ಇನ್ಮುಂದೆ ಬೆಂಗಳೂರಿನಲ್ಲಿ ಸಂಚರಿಸುವ ಎಲ್ಲಾ ಆಟೋಗಳಲ್ಲಿ ಚಾಲಕನ ಸಂಪೂರ್ಣ ಮಾಹಿತಿ, ಹೆಸರು, ವಿಳಾಸ ಮತ್ತು ಸಂಪರ್ಕ ಸಂಖ್ಯೆಯನ್ನು ಕಡ್ಡಾಯವಾಗಿ ಪ್ರದರ್ಶಿಸಬೇಕು. ಇದರಿಂದ ಪ್ರಯಾಣಿಕರು ಚಾಲಕರ ಬಗ್ಗೆ ಯಾವುದೇ ದೂರುಗಳಿದ್ದಲ್ಲಿ, ತಕ್ಷಣವೇ ಸಂಬಂಧಪಟ್ಟ ಇಲಾಖೆಗೆ ಮಾಹಿತಿ ನೀಡಬಹುದು. ಇದಕ್ಕಾಗಿ ಸಹಾಯವಾಣಿ ಸಂಖ್ಯೆಗಳು ಲಭ್ಯವಿದ್ದು, 22868444 ಮತ್ತು 22868550ಕ್ಕೆ ಕರೆ ಮಾಡಿ ದೂರು ದಾಖಲಿಸಬಹುದು.

## ಶಾಲೆಗಳ ಸ್ಥಿತಿಗತಿ, ಅಭಿವೃದ್ಧಿ ಕುರಿತು ವಿಶೇಷ ಚರ್ಚೆ

• ಉದಯವಾಹಿನಿ, ಬೆಂಗಳೂರು


ಉದಯವಾಹಿನಿ ಚಿತ್ರ

ಸರಕಾರಿ ಶಾಲೆಗಳ ಸ್ಥಿತಿಗತಿ ಮತ್ತು ಅಭಿವೃದ್ಧಿ ಕುರಿತು ವಿಶೇಷ ಚರ್ಚೆ ಪ್ರಾರಂಭಿಸಲಾಗಿದ್ದು, ಮುಂದಿನ ಅಧಿವೇಶನದಲ್ಲಿ ಮುಂದುವರೆಸಲಾಗುವುದು ಎಂದು ವಿಧಾನಸಭೆ ಸ್ಪೀಕರ್ ಯು.ಟಿ.ಖಾದರ್ ಅವರು ಹೇಳಿದರು.

ವಿಧಾನಸಭೆ ಅಧಿವೇಶನದ ಕಾರ್ಯಕಲಾಪಗಳ ಸಂಕ್ಷಿಪ್ತ ವರದಿ ಬಿಡುಗಡೆ ಮಾಡಿರುವ ಅವರು, ಇತ್ತೀಚೆಗೆ ನಡೆದ ವಿಧಾನಮಂಡಲದ ಮುಂಗಾರು ಅಧಿವೇಶನದಲ್ಲಿ ಆರಂಭಿಸಲಾದ ರಾಜ್ಯ ಸರ್ಕಾರಿ ಶಾಲೆಗಳ ಸ್ಥಿತಿಗತಿ ಕುರಿತ ವಿಶೇಷ ಚರ್ಚೆ ಮುಂದಿನ ಜಂಟಿ ಅಧಿವೇಶನದಲ್ಲಿ ಮುಂದುವರಿಯಲಿದೆ ಎಂದು ಹೇಳಿದರು. ಅಲ್ಲದೆ, ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವ ಮಧು ಬಂಗಾರಪ್ಪ ಅವರು ವಿರೋಧ ಪಕ್ಷಗಳ ಶಾಸಕರಿಂದ, ವಿಶೇಷವಾಗಿ ಮಾಜಿ ಶಿಕ್ಷಣ ಸಚಿವ ಎಸ್. ಸುರೇಶ್ ಕುಮಾರ್ ಅವರಿಂದ ಸಲಹೆಗಳನ್ನು ಪಡೆಯುವುದಾಗಿ ಹೇಳಿದರು.


18 ಬಿಜೆಪಿ ಸದಸ್ಯರನ್ನು ಆರು ತಿಂಗಳ ಕಾಲ ಸದನಕ್ಕೆ ಬಾರದಂತೆ ತಡೆ ಹಿಡಿದು ಅಮಾನತ್ತುಗೊಳಿಸಿದ್ದ ನಿರ್ಣಯವನ್ನು ಮೇ 25ರಿಂದ ಜಾರಿಗೆ ಬರುವಂತೆ ಹಿಂಪಡೆದಿರುವ ಕುರಿತಾದ ಸ್ಥಿರೀಕರಣ ಪ್ರಸ್ತಾವಕ್ಕೆ ಸದನ ಅನುಮೋದನೆ ನೀಡಿದೆ. ರಾಷ್ಟ್ರಪತಿ, ರಾಜ್ಯಪಾಲರಿಂದ ಒಪ್ಪಿಗೆ ಪಡೆದ ವಿಧೇಯಕಗಳ ಬಗ್ಗೆ ಕಾರ್ಯದರ್ಶಿಯ ವರದಿಯನ್ನು ಮಂಡಿಸಲಾಗಿದೆ.

2025-26ನೆ ಸಾಲಿನ ಪೂರಕ ಅಂದಾಜುಗಳ ಮೊದಲನೆ ಕಂತನ್ನು ಅಂಗೀಕರಿಸಲಾಗಿದೆ. ಭಾರತದ ಲೆಕ್ಕನಿಯಂತ್ರಕರು ಮಹಾ ಲೆಕ್ಕಪರಿಶೋಧಕರು ನೀಡಿರುವ ಆರು ವರದಿಗಳನ್ನು ಮಂಡಿಸಲಾಗಿದೆ. ಧನವಿನಿಯೋಗ ವಿಧೇಯಕವು ಸೇರಿದಂತೆ ಒಟ್ಟು 39 ವಿಧೇಯಕಗಳನ್ನು ಮಂಡಿಸಲಾಗಿದ್ದು, 37 ವಿಧೇಯಕಗಳನ್ನು ಅಂಗೀಕರಿಸಲಾಗಿದೆ.

**ನಡುವೆ ಕಾರ್ಯಕಲಾಪ ಕುರಿತು ಮಾಹಿತಿ ನೀಡಿದ ಸ್ಪೀಕರ್ ಯುಟಿ.ಖಾದರ್ ಅವರು, ಅಧಿವೇಶನದಲ್ಲಿ ಇತ್ತೀಚೆಗೆ ನಿಧನ ಹೊಂದಿದ ಗಣ್ಯರಿಗೆ, ಆರ್‌ಸಿಬಿ ಸಂಭ್ರಮಾಚಾರಣೆಯ ಕಾಲ್ತುಳಿತದಲ್ಲಿ ನಿಧನ ಹೊಂದಿದವರಿಗೆ, ಪೆಹಲ್ಗಾಮ್‌ನಲ್ಲಿ ಉಗ್ರರ ದಾಳಿಯಲ್ಲಿ ನಿಧನ ಹೊಂದಿದವರಿಗೆ ಹಾಗೂ ಏರ್ ಇಂಡಿಯಾ ವಿಮಾನ ದುರಂತದಲ್ಲಿ ನಿಧನ ಹೊಂದಿದವರಿಗೆ ಸಂತಾಪ ಸೂಚನಾ ನಿರ್ಣಯವನ್ನು ಮಂಡಿಸಿ, ಅಂಗೀಕರಿಸಲಾಗಿದೆ ಎಂದು ಹೇಳಿದರು.**

## ಷೇರು ಮಾರುಕಟ್ಟೆಯಲ್ಲಿ ಲಾಭಗಳಿಕೆ ಆಮಿಷವೊಡ್ಡಿ ಕುಟುಂಬಕ್ಕೆ 4.25 ಕೋಟಿ ರೂ. ವಂಚನೆ!

• ಉದಯವಾಹಿನಿ, ಬೆಂಗಳೂರು



ಷೇರು ಮಾರುಕಟ್ಟೆಯಲ್ಲಿ ಹೂಡಿಕೆ ಮಾಡಿದರೆ ಭಾರಿ ಲಾಭಗಳಿಸಬಹುದೆಂಬ ಆಮಿಷವೊಡ್ಡಿ ಕುಟುಂಬವೊಂದಕ್ಕೆ 4.25 ಕೋಟಿ ರೂ. ವಂಚಿಸಿರುವ ಘಟನೆ ಬೆಂಗಳೂರಿನಲ್ಲಿ ನಡೆದಿದೆ.

ಕುಟುಂಬದ ಸ್ನೇಹಿತರೊಬ್ಬರು ಶೇ. 35 ರಷ್ಟು ಲಾಭದ ಆಸೆ ತೋರಿಸಿ 48 ವರ್ಷದ ವ್ಯಕ್ತಿ ಮತ್ತು ಅವರ ಕುಟುಂಬಕ್ಕೆ ಷೇರು ಮಾರುಕಟ್ಟೆಯಲ್ಲಿ ಹಣ ಹೂಡುವಂತೆ ಹೇಳಿ ಸುಮಾರು 4.25 ಕೋಟಿ ಹಣವನ್ನು ವಂಚಿಸಿದ್ದಾರೆ.

ಶಂಕರ್ (ಹೆಸರು ಬದಲಾಯಿಸಲಾಗಿದೆ) ಸಲ್ಲಿಸಿದ ದೂರಿನ ಪ್ರಕಾರ, ಕುಟುಂಬಕ್ಕೆ ಪರಿಚಿತರಾಗಿರುವ ಹರಿ ಸುಬ್ರಮಣ್ಯಂ ಅವರು ತಮ್ಮೊಂದಿಗೆ ಷೇರು ಮಾರುಕಟ್ಟೆ ಹೂಡಿಕೆಗಳ ಬಗ್ಗೆ ಆಗಾಗ್ಗೆ ಚರ್ಚಿಸುತ್ತಿದ್ದರು. ಅವರು ದೂರುದಾರರನ್ನು ಗ್ಲೋಬ್ ಕ್ಯಾಪಿಟಲ್ ಇನ್ವೆಸ್ಟ್ಮೆಂಟ್ ಪ್ರೈವೇಟ್ ಲಿಮಿಟೆಡ್‌ನಲ್ಲಿ ಹೂಡಿಕೆ ಮಾಡುವಂತೆ ಮನವೊಲಿಸಿದರು. ದೆಹಲಿ ಮೂಲದ ಬ್ರೋಕರೇಜ್ ಸಂಸ್ಥೆಗೆ ಸಂಬಂಧಿಸಿದ ಸಬ್-ಬ್ರೋಕರ್ ಎಂದು ಹೇಳಿಕೊಂಡ ರಾಂಪ್ರಸಾದ್ ಅಶ್ವಿನ್ ಎಂಬುವರನ್ನು ಪರಿಚಯಿಸಿದರು. ಈ ಇಬ್ಬರು ವಾರ್ಷಿಕವಾಗಿ ಅಥವಾ ಮಾಸಿಕವಾಗಿ ಶೇ. 35?36 ರಷ್ಟು ಸ್ಥಿರ ಆದಾಯದ ಭರವಸೆ ನೀಡಿ ಶಂಕರ್ ಕುಟುಂಬಕ್ಕೆ ಹೂಡಿಕೆ ಮಾಡುವಂತೆ ಆಮಿಷವೊಡ್ಡಿದರು. ಶಂಕರ್ ಮೊದಲು ಗ್ಲೋಬ್ ಕ್ಯಾಪಿಟಲ್ ಮಾರ್ಕೆಟ್ ಲಿಮಿಟೆಡ್‌ನ ಖಾತೆಗೆ 1.25 ಕೋಟಿ ರೂ.ಗಳನ್ನು ವರ್ಗಾಯಿಸಿದರು, ನಂತರ ಅವರ ಕುಟುಂಬ ಸದಸ್ಯರು ಹೆಚ್ಚುವರಿಯಾಗಿ 3 ಕೋಟಿ ರೂ.ಗಳನ್ನು ಹೂಡಿಕೆ ಮಾಡಿದರು.

**ಆರೋಪಿಗಳು ತಮ್ಮ ಡಿಮ್ಯಾಟ್ ಖಾತೆಗಳು, ಲಾಗಿನ್ ರುಜುವಾತುಗಳು ಮತ್ತು ಒಟಿಪಿಗಳ ವಿವರಗಳನ್ನು ಸಂಗ್ರಹಿಸಿ, ಅವರಿಗೆ ತಿಳಿಯದೆ ಅನಧಿಕೃತ ವಹಿವಾಟುಗಳನ್ನು ನಡೆಸಿದ್ದಾರೆ ಎಂದು ಆರೋಪಿಸಲಾಗಿದೆ. ಐಟಿ ಕಾಯ್ದೆಯಡಿ ಪ್ರಕರಣ ದಾಖಲಿಸಲಾಗಿದೆ. ಈ ವಂಚನೆ 2021ರಲ್ಲಿ ನಡೆದಿದ್ದು, ಸತ್ಯಾಸತ್ಯತೆ ಪರಿಶೀಲಿಸಲಾಗುತ್ತಿದೆ ಎಂದು ಪೊಲೀಸ್ ಅಧಿಕಾರಿಯೊಬ್ಬರು ತಿಳಿಸಿದ್ದಾರೆ.**

## ನೇಣು ಬಿಗಿದು 16 ವರ್ಷದ ಬಾಲಕಿ ಆತ್ಮಹತ್ಯೆ

• ಉದಯವಾಹಿನಿ, ಬೆಂಗಳೂರು

ನೇಣು ಬಿಗಿದು 16 ವರ್ಷದ ಬಾಲಕಿಯೊಬ್ಬಳು ಆತ್ಮಹತ್ಯೆಗೆ ಶರಣಾಗಿರುವ ಘಟನೆ ಬೆಂಗಳೂರಿನ ಮಾದನಾಯಕನಹಳ್ಳಿ ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ ನಡೆದಿದೆ. ಆತ್ಮಹತ್ಯೆ ಮಾಡಿಕೊಂಡ ಬಾಲಕಿಯನ್ನು ಕುಸುಮಾ (16) ಎಂದು ಗುರುತಿಸಲಾಗಿದೆ. ಮನೆಯಲ್ಲೇ ಈಕೆ ನೇಣು ಬಿಗಿದುಕೊಂಡು ಆತ್ಮಹತ್ಯೆ ಮಾಡಿಕೊಂಡಿದ್ದಾಳೆ. ಬಾಲಕಿ ಖಾಸಗಿ ಶಾಲೆಯ ವಿದ್ಯಾರ್ಥಿನಿಯಾಗಿದ್ದು, ಶುಕ್ರವಾರ ಸಂಜೆ 6.30ರ ಸುಮಾರಿಗೆ ಆತ್ಮಹತ್ಯೆಗೆ ಶರಣಾಗಿದ್ದಾಳೆಂದು ತಿಳಿದುಬಂದಿದೆ. ಶಾಲೆಯಲ್ಲಿ ಅತೀವ್ರ ಕೆಲಸ ಕೊಡುತ್ತಿದ್ದು, ಇದರಿಂದಾಗಿ ಬಾಲಕಿ ಆತ್ಮಹತ್ಯೆಗೆ ಶರಣಾಗಿದ್ದಾಳೆಂದು ಕುಟುಂಬಸ್ಥರು ಆರೋಪಿಸಿದ್ದಾರೆ.

**ಶಾಲೆಯ ಮುಖ್ಯೋಪಾಧ್ಯಾಯ ಅಶೋಕ್ ಅವರು ಆರೋಪವನ್ನು ನಿರಾಕರಿಸಿದ್ದಾರೆ. ನಾವು 10 ನೇ ತರಗತಿಯ ವಿದ್ಯಾರ್ಥಿಗಳಿಗೆ ಹೆಚ್ಚುವರಿ ತರಗತಿಗಳನ್ನು ನಡೆಸುತ್ತಿದ್ದೇವೆ. ಹೋಂವರ್ಕ್ ಕುರಿತು ಶಿಕ್ಷಕರಿಂದ ಯಾವುದೇ ಬಲವಂತ ಅಥವಾ ಕಿರುಕುಳವಿಲ್ಲ. ಕುಸುಮಾ ಒಳ್ಳೆಯ ವಿದ್ಯಾರ್ಥಿನಿಯಾಗಿದ್ದು, ಸಮಯಕ್ಕೆ ಸರಿಯಾಗಿ ಹೇಳಿದ್ದ ಕೆಲಸವನ್ನು ಮಾಡುತ್ತಿದ್ದಳು, ಶೈಕ್ಷಣಿಕವಾಗಿ ಉತ್ತಮವಾಗಿದ್ದಳು ಎಂದು ಹೇಳಿದ್ದಾರೆ. ಪ್ರಕರಣ ಸಂಬಂಧ ಮದನಾಯಕನಹಳ್ಳಿ ಪೊಲೀಸರು ಅಸಹಜ ಸಾವಿನ ಪ್ರಕರಣ ದಾಖಲಿಸಿಕೊಂಡಿದ್ದು, ತನಿಖೆ ನಡೆಸುತ್ತಿದ್ದಾರೆ.**

## ಅನಾಮಿಕ ವ್ಯಕ್ತಿಯ ಹಿಂದೆ ಯಾರಿದ್ದಾರೆ ಹೊರಬರುತ್ತೆ: ರಾಮಲಿಂಗಾ ರೆಡ್ಡಿ

• ಉದಯವಾಹಿನಿ, ಬೆಂಗಳೂರು

ಅನಾಮಿಕ ವ್ಯಕ್ತಿಯ ಹಿಂದೆ ಯಾರಿದ್ದಾರೆ ಹೊರಬರುತ್ತೆ. ಬಿಜೆಪಿ ಅವರು ಅಧಿಕಾರದಲ್ಲಿದ್ದಾಗ ಮಾಡಲಿಲ್ಲ, ಈಗ ಅವರು ಅಧಿಕಾರದಲ್ಲಿ ಇಲ್ಲ ಎಂದು ಮಾತನಾಡುತ್ತಾರೆ ಎಂದು ಸಚಿವ ರಾಮಲಿಂಗಾ ರೆಡ್ಡಿ ಹೇಳಿದ್ದಾರೆ.ಧರ್ಮಸ್ಥಳ ಪ್ರಕರಣದಲ್ಲಿ ಮಾಸ್ಕ್ ಮ್ಯಾನ್ ಚಿನ್ನಯ್ಯನನ್ನು ಬಂಧಿಸಿರುವ ಕುರಿತು ಬೆಂಗಳೂರಲ್ಲಿ ಮಾಧ್ಯಮದವರೊಂದಿಗೆ ಮಾತನಾಡಿದ ಅವರು, ಧರ್ಮಕ್ಷೇತ್ರದ ಬಗ್ಗೆ, ಧರ್ಮಾಧಿಕಾರಿಗಳ ಬಗ್ಗೆ ಬಹಳ ವರ್ಷಗಳಿಂದ ಸಾಕಷ್ಟು ಚರ್ಚೆಯಾಗುತ್ತಿತ್ತು. ಯೂಟ್ಯೂಬರ್ಸ್ ಕೂಡ ಮಾತನಾಡುತ್ತಿದ್ದರು, ಎಲ್ಲರೂ ಧರ್ಮಕ್ಕೆ ಸೇರಿದ್ದವರೇ ಆಗಿದ್ದಾರೆ. ಬಿಜೆಪಿ ಧರ್ಮ ರಕ್ಷಣೆ ಕರೆ ಕೊಟ್ಟಿದ್ದಾರೆ. ನಾಲ್ಕು ವರ್ಷ ನಿಮ್ಮದೇ ಸರ್ಕಾರ ಇತ್ತು. ಅರಗ ಜ್ಞಾನೇಂದ್ರ, ಗೃಹ ಮಂತ್ರಿಗಳಾಗಿದ್ದರು, ಯಡಿಯೂರಪ್ಪ ಅವರು ಸಿಎಂ ಆಗಿದ್ದರು, ಆಗ ಇದನ್ನೆಲ್ಲಾ ನಿಲ್ಲಿಸಬಹುದಿತ್ತು ಅಲ್ವಾ? ನಮ್ಮ ಸರ್ಕಾರ ಇದರ ಬಗ್ಗೆ ನಿರ್ಧಾರ ಮಾಡಿದೆ. ಎಸ್‌ಐಟಿ ರಚನೆ ಮಾಡಿದ್ವಿ, ಈಗ ಕ್ಲಾರಿಟಿ ಬಂತು. ಇದು ಬಿಜೆಪಿ ಅವರಿಗೆ ಸಹಿಸಲಾಗುತ್ತಿಲ್ಲ ಎಂದು ಕಿಡಿಕಾರಿದರು.



ಏನೇ ಇದ್ದರೂ ಸತ್ಯಾಂಶ ಹೊರಬರಲಿದೆ. ಷಡ್ಯಂತ್ರ ಏನೇ ಇದ್ದರೂ ಕೂಡ ಹೊರಬರುತ್ತೆ. ನಮ್ಮ ಕಡೆ ಷಡ್ಯಂತ್ರ ಇದ್ರೆ, ಯಾಕೆ ತನಿಖೆ ಮಾಡ್ತಿದ್ವಿ? ಇವರದ್ದೇ ಸರ್ಕಾರ ಇದ್ದಾಗ ಯಾಕೆ ಮಾತನಾಡಿಲ್ಲ? ಯಡಿಯೂರಪ್ಪ, ಅಶೋಕ್ ಯಾಕೆ ಮಾತನಾಡಿಲ್ಲ? ಈಗ ಒಂದು ತಾರ್ಕಿಕ ಅಂತ್ಯಕ್ಕೆ ಬರುತ್ತಿದೆ. 15 ಸ್ಥಳದಲ್ಲಿ ಶೋಧ ಮಾಡದೇ ಇದ್ದರೆ ನಮಗೆ ಏನು ಗೊತ್ತಾಗುತ್ತಿರಲಿಲ್ಲ ತಾನೇ? ಏನೋ ಒಂದು ಕಡೆ ಮೂಳೆ ಸಿಕ್ಕಿದೆ ಅಷ್ಟೇ. ಎಸ್‌ಐಟಿ ತನಿಖೆ ಮಾಡದಿದ್ರೆ ಕಳಂಕ ಇರೋದು. ಬಿಜೆಪಿ ಅವರಿಗೆ ಅಸೂಯೆ ಜಾಸ್ತಿ ಇದೆ ಎಂದು ಹರಿಹಾಯ್ದರು.

## ಮಗುವಿಗೆ ಅನಾರೋಗ್ಯ: ಲಾಲ್‌ಬಾಗ್ ಕೆರೆಗೆ ಹಾರಿ ಬಾಣಂತಿ ಆತ್ಮಹತ್ಯೆ

• ಉದಯವಾಹಿನಿ, ಬೆಂಗಳೂರು

4 ದಿನಗಳ ಹಿಂದಷ್ಟೇ ಜನ್ಮ ನೀಡಿದ್ದ ಮಗುವಿನಲ್ಲಿ ಅನಾರೋಗ್ಯ ಕಾಣಿಸಿಕೊಂಡಿದ್ದ ಹಿನ್ನೆಲೆಯಲ್ಲಿನೊಂದ ಮಹಿಳೆಯೊಬ್ಬರು ಲಾಲ್ ಬಾಗ್ ಕೆರೆಗೆ ಹಾರಿ ಆತ್ಮಹತ್ಯೆಗೆ ಶರಣಾಗಿರುವ ಘಟನೆ ನಡೆದಿದೆ.

ಮೃತ ಮಹಿಳೆಯನ್ನು ಮೃತರನ್ನು ಜೆನಿಶಾ ನಾಥ್ (22) ಎಂದು ಗುರುತಿಸಲಾಗಿದೆ. ಈಕೆ ನಾಲ್ಕು ವರ್ಷಗಳ ಹಿಂದೆ ನವನಾಥ್ ರಾಜ್ ಎಂಬುವವರನ್ನು ವಿವಾಹವಾಗಿದ್ದರು. ದಂಪತಿಗಳು ಕಳೆದ ಮೂರು ವರ್ಷಗಳಿಂದ ಸರ್ಜಾಪುರ ಪ್ರದೇಶದಲ್ಲಿ ವಾಸಿಸುತ್ತಿದ್ದರು. ರಾಜ್ ಅಪಾರ್ಟ್‌ಮೆಂಟ್‌ನಲ್ಲಿ ಮಹಿಳೆಯ ಪತಿ ಭದ್ರತಾ ಸಿಬ್ಬಂದಿಯಾಗಿ ಕೆಲಸ ಮಾಡುತ್ತಿದ್ದಾರೆ.



ಬೆಳಿಗ್ಗೆ 6.30 ರ ಸುಮಾರಿಗೆ, ಲಾಲ್‌ಬಾಗ್ ಭದ್ರತಾ ಸಿಬ್ಬಂದಿಯೊಬ್ಬರು ಕೆರೆಯಲ್ಲಿ ಶವವನ್ನು ಗಮನಿಸಿ ಪೊಲೀಸರಿಗೆ ಮಾಹಿತಿ ನೀಡಿದ್ದಾರೆ. ಆರಂಭದಲ್ಲಿ, ಮಹಿಳೆಯ ಗುರುತು ಪತ್ತೆಯಾಗಿರಲಿಲ್ಲ, ಆದರೆ. ಅವರು ವಿಕ್ಟೋರಿಯಾ ಆಸ್ಪತ್ರೆ ಆವರಣದಲ್ಲಿ ವಾಣಿ ವಿಲಾಸ್ ಆಸ್ಪತ್ರೆಯಿಂದ ಬೆಳಿಗ್ಗೆ 4 ಗಂಟೆ ಸುಮಾರಿಗೆ ಮಹಿಳೆಯೊಬ್ಬರು ನಾಪತ್ತೆಯಾಗಿದ್ದಾರೆಂಬುದು ತಿಳಿದುಬಂದಿದೆ. ಜೆನಿಷಾ ಆಸ್ಪತ್ರೆಯಲ್ಲಿ ಕಾಣೆಯಾಗಿರುವುದನ್ನುಗಮನಿಸಿ ಕುಟುಂಬ ಸದಸ್ಯರು ದೂರು ದಾಖಲಿಸಲು ಪೊಲೀಸ್ ಠಾಣೆಗೆ ಹೋಗಿದ್ದಾರೆ. ಈ ವೇಳೆ ಅನುಮಾನಗೊಂಡ ಪೊಲೀಸರು ವಿಕ್ಟೋರಿಯಾ ಆಸ್ಪತ್ರೆಯ ಶವಾಗಾರಕ್ಕೆ ಕರೆದೊಯ್ದಿದ್ದಾರೆ. ಬಳಿಕ ಕುಟುಂಬಸ್ಥರು ಮೃತದೇಹವನ್ನು ಪತ್ತೆ ಮಾಡಿದ್ದಾರೆ. ಆಸ್ಪತ್ರೆಯು ಲಾಲ್‌ಬಾಗ್‌ನಿಂದ ಸುಮಾರು 3 ಕಿ.ಮೀ ದೂರದಲ್ಲಿದೆ.

ಮಹಿಳೆ ಉದ್ಯಾನವನಕ್ಕೆ ಬಂದಾಗ ಭದ್ರತಾ ಸಿಬ್ಬಂದಿಗಳು ಬೆಳಗಿನ ನಡಿಗೆಗೆ ಬಂದಿದ್ದಾರೆಂದು ಭಾವಿಸಿ ಒಳಗೆ ಬಿಟ್ಟಿದ್ದಾರೆ. ನಂತರ ಈಕೆ ಕೆರೆಗೆ ಹಾರಿ ಆತ್ಮಹತ್ಯೆಗೆ ಶರಣಾಗಿದ್ದಾಳೆಂದು ವರದಿಗಳು ತಿಳಿಸಿವೆ.

# ಗಣೇಶ ಕೂರಿಸಲು ಇದೆ ಪೊಲೀಸರ ಹಲವು ಷರತ್ತು

## ಲಘು ಸಂಗೀತ ಮತ್ತು ಸಾಂಸ್ಕೃತಿಕ ಕಲಾವಿದರ ಸಂಘಟನೆಯಿಂದ ಕೋರ್ಟ್‌ನಲ್ಲಿ ಪ್ರಶ್ನೆ

• ಉದಯವಾಹಿನಿ, ಬೆಂಗಳೂರು

ಸಾರ್ವಜನಿಕ ಸ್ಥಳಗಳಲ್ಲಿ ವಿನಾಯಕನ ಮೂರ್ತಿ ಪ್ರತಿಷ್ಠಾಪನೆಗೆ ಬೆಂಗಳೂರು ಪೊಲೀಸರು ಹಲವು ಷರತ್ತುಗಳನ್ನು ಜಾರಿ ಮಾಡಿದ್ದಾರೆ. ಜೊತೆಗೆ ಡಿಜೆ ಬಳಕೆಗೂ ಬ್ರೇಕ್ ಹಾಕಲಾಗಿದೆ. ಗಣೇಶ ಕೂರಿಸುವ ಮುನ್ನ ಆಯೋಜಕರು ಪಾಲಿಸಬೇಕಾದ ನಿಯಮಳೇನು ಎಂಬುದರ ಬಗ್ಗೆ ಮಾಹಿತಿ ಈ ಲೇಖನದಲ್ಲಿ ಇದೆ.

**ಪೊಲೀಸರ ಷರತ್ತುಗಳೇನು**

- ಸಂಘ-ಸಂಸ್ಥೆಗಳು ಗಣಪತಿ ವಿಗ್ರಹ ಪ್ರತಿಷ್ಠಾಪಿಸುವ ಸ್ಥಳ, ದಿನ ಸೇರಿದಂತೆ ಇತರೆ ಮಾಹಿತಿ ಸಂಗ್ರಹಿಸಿ ಏಕಗವಾಕ್ಷಿ ಕೇಂದ್ರಗಳಲ್ಲಿಅನುಮತಿ ಪಡೆಯಬೇಕು.
- ವಾಹನ, ಸಾರ್ವಜನಿಕರು ಓಡಾಡುವ ರಸ್ತೆ, ಪಾದಚಾರಿ ಮಾರ್ಗಗಳಲ್ಲಿ ಪೆಂಡಾಲ್ ಹಾಕಿ ಗಣಪತಿ ಮೂರ್ತಿ ಪ್ರತಿಷ್ಠಾಪಿಸಲು ಅನುಮತಿ ನೀಡುವುದಿಲ್ಲ
- ಸಾರ್ವಜನಿಕ ಸ್ಥಳಗಳಲ್ಲಿ ಪೆಂಡಾಲ್ ಹಾಕಿ ಮೂರ್ತಿ ಪ್ರತಿಷ್ಠಾಪಿಸುವ ಆಯೋಜಕರು ಬಿಬಿಎಂಪಿ, ಸಂಚಾರ ಪೊಲೀಸ್, ಬೆಸ್ಕಾಂ, ಅಗ್ನಿಶಾಮಕ ಇಲಾಖೆಯಿಂದ ನಿರಾಕ್ಷೇಪಣಾ ಪತ್ರ ಪಡೆದು ಏಕಗವಾಕ್ಷಿ ಕೇಂದ್ರದಲ್ಲಿ ಅನುಮತಿ ಪಡೆಯಬೇಕು.
- ಧ್ವನಿವರ್ಧಕಗಳ ಬಳಕೆಗೆ ಬೆಳಗ್ಗೆ 6 ರಿಂದ ರಾತ್ರಿ 10ರವರೆಗೆ ಮಾತ್ರ ಅವಕಾಶ.
- ರಾತ್ರಿ 10ರಿಂದ ಬೆಳಗ್ಗೆ 6ರ ಅವಧಿಯಲ್ಲಿ ಧ್ವನಿವರ್ಧಕಗಳನ್ನು ಬಳಸುವವರ ವಿರುದ್ಧ ಕ್ರಮ ಸಾರ್ವಜನಿಕರಿಗೆ ತೊಂದರೆಯಾಗದಂತೆ ರಾತ್ರಿ 10ರ ನಂತರ ಪಟಾಕಿ ಸಿಡಿಸುವಂತಿಲ್ಲ.
- ಉತ್ಸವದ ಆಚರಣೆಗೆ ಸಂಘ-ಸಂಸ್ಥೆಗಳ ಹೆಸರಿನಲ್ಲಿ ಬಲವಂತವಾಗಿ ಹಣ ವಸೂಲಿ ಮಾಡುವವರ ಮಾಹಿತಿ ಸಂಗ್ರಹಿಸಿ ತಕ್ಷಣವೇ ಕ್ರಮ
- ಗಣಪತಿ ಉತ್ಸವಕ್ಕೆ ಹಣ ಕೇಳುವ ನೆಪದಲ್ಲಿ ದರೋಡೆಕೋರರು ಮನೆಗೆ ನುಗ್ಗುವ ಸಾಧ್ಯತೆಗಳಿದ್ದು, ಸಾರ್ವಜನಿಕರು ಎಚ್ಚರಿಕೆಯಿಂದ ಇರಬೇಕು
- ನಾಗರಿಕ ಸಮಿತಿ, ಮೊಹಲ್ಲಾಸಮಿತಿ, ಕಾವಲು ಸಮಿತಿ ಸೇರಿದಂತೆ ಎಲ್ಲಾ ಸಮುದಾಯದ ಸಂಘ-ಸಂಸ್ಥೆಗಳ ಮುಖ್ಯಸ್ಥರ ಸೌಹಾರ್ದ ಸಭೆ ಆಯೋಜನೆ
- ಮೂರ್ತಿ ಪ್ರತಿಷ್ಠಾಪಿಸುವ ಸಂಘ-ಸಂಸ್ಥೆಗಳ ಮುಖ್ಯಸ್ಥರಿಂದ ಲಿಖಿತ ಕೋರಿಕೆ ಸ್ವೀಕರಿಸಿ ಸೂಕ್ತ ಭದ್ರತೆ ಒದಗಿಸಲಾಗುವುದು
- ಮೂರ್ತಿ ಪ್ರತಿಷ್ಠಾಪನಾ ಸ್ಥಳದಲ್ಲಿ ಹಾಕುವ ಪೆಂಡಾಲ್‌ಗಳಲ್ಲಿ ಕಡ್ಡಾಯವಾಗಿ ಅಗ್ನಿನಂದಕ ಉಪಕರಣಗಳನ್ನು ಅಳವಡಿಸಿಕೊಳ್ಳಬೇಕು.
- ಗಣಪತಿ ಮೂರ್ತಿ ಪ್ರತಿಷ್ಠಾಪಿಸಿದ ಸ್ಥಳಗಳಲ್ಲಿ ಕಡ್ಡಾಯವಾಗಿ ಕನಿಷ್ಠ 5 ಸಿಸಿಟಿವಿ ಕ್ಯಾಮರಾಗಳನ್ನು ಅಳವಡಿಸುವುದು ಕಡ್ಡಾಯ
- ಮೂರ್ತಿ ವಿಸರ್ಜನೆಯ ಸಮಯ, ಮಾರ್ಗದಲ್ಲಿಪೊಲೀಸ್ ಭದ್ರತೆ
- ರಾತ್ರಿ 10ರ ನಂತರ ಮೂರ್ತಿ ವಿಸರ್ಜನಾ ಮೆರವಣಿಗೆಗೆ ಅವಕಾಶವಿಲ್ಲ
- ಮೆರವಣಿಗೆ ಮಾರ್ಗ ಮತ್ತು ಅಕ್ಕಪಕ್ಕದ ರಸ್ತೆಗಳಲ್ಲಿ ವಿಡಿಯೋಗ್ರಫಿ ಮೂಲಕ ಆಗುಹೋಗುಗಳನ್ನು ಪೊಲೀಸರು ಚಿತ್ರೀಕರಿಸಲಿದ್ದಾರೆ.


ಉದಯವಾಹಿನಿ ಚಿತ್ರ

**ಡಿಜೆ ನಿರ್ಬಂಧ**

ಗೌರಿ, ಗಣೇಶ ಹಬ್ಬ, ಈದ್ ಮಿಲಾದ್ ಮೆರವಣಿಗೆ ಸಾರ್ವಜನಿಕ ಸಮಾರಂಭಗಳಲ್ಲಿ ಡಿಜೆ, ಧ್ವನಿವರ್ಧಕ ಬಳಕೆಯನ್ನು ನಿಷೇಧಿಸಿ ಬೆಂಗಳೂರು ನಗರ ಪೊಲೀಸರು ಹೊರಡಿಸಿದ್ದ ಸುತ್ತೋಲೆಯನ್ನು ಪ್ರಶ್ನಿಸಿ ಸಲ್ಲಿಸಿದ್ದ ಅರ್ಜಿಯನ್ನು ಹೈಕೋರ್ಟ್ ವಜಾಗೊಳಿಸಿದೆ. ಬೆಂಗಳೂರು ಪಶ್ಚಿಮ ವಿಭಾಗದ ಜಂಟಿ ಆಯುಕ್ತರು ಆ.14 ರಂದು ಹೊರಡಿಸಿದ್ದ ಸುತ್ತೋಲೆ ಪ್ರಶ್ನಿಸಿ ಕರ್ನಾಟಕ ಲಘು ಸಂಗೀತ, ಸಾಂಸ್ಕೃತಿಕ ಕಲಾವಿದರ ಸಂಘಟನೆಯ ಪದಾಧಿಕಾರಿಗಳು ಸಲ್ಲಿಸಿದ್ದ ಅರ್ಜಿ ವಿಚಾರಣೆ ನಡೆಸಿದ ಮುಖ್ಯ ನ್ಯಾಯಮೂರ್ತಿ ವಿಭು ಬಖ್ರು, ನ್ಯಾ. ಸಿ.ಎಂ. ಜೋಷಿ ಅವರಿದ್ದ ವಿಭಾಗೀಯಪೀಠ ಈ ಆದೇಶ ಮಾಡಿದೆ. ವಾದ-ಪ್ರತಿವಾದ ಆಲಿಸಿದ ನ್ಯಾಯಪೀಠ, ಸೌಂಡ್ ಸಿಸ್ಟಮ್ ಮತ್ತು ಡಿಜೆಯನ್ನು ಸಾರ್ವಜನಿಕ ಕಾರ್ಯಕ್ರಮದಲ್ಲಿನಿರ್ಬಂಧಿಸಿ ಪೊಲೀಸರು ಹೊರಡಿಸಿರುವ ಸುತ್ತೋಲೆಯಲ್ಲಿಯಾವುದೇ ಕಾನೂನಾತ್ಮಕ ಲೋಪಗಳಿಲ್ಲ ಎಂದು ಹೇಳಿದೆ.

# ಸಿಎಂ ತವರು ಜಿಲ್ಲೆಯಲ್ಲಿ ವಸತಿ ನಿವೇಶನ ರಹಿತರು ಅಧಿಕ!

## ಮೈಸೂರಿನಲ್ಲಿ ಅರ್ಧ ಲಕ್ಷಕ್ಕೂ ಅಧಿಕ ಕುಟುಂಬಗಳಿಗೆ ಸ್ವಂತ ಮನೆಯಿರಲಿ, ನಿವೇಶನ ಕೂಡ ಇಲ್ಲ

• **ಉದಯವಾಹಿನಿ, ಮೈಸೂರು**

ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ತವರು ಜಿಲ್ಲೆಯಲ್ಲಿ ಅರ್ಧ ಲಕ್ಷಕ್ಕೂ ಅಧಿಕ ಕುಟುಂಬಗಳಿಗೆ ಸ್ವಂತ ಮನೆಯಿರಲಿ, ನಿವೇಶನ ಕೂಡ ಇಲ್ಲ.

ಗುಡಿಸಲು ಮತ್ತು ಬಾಡಿಗೆ ಮನೆಯಲ್ಲಿ ವಾಸ ಮಾಡುವ ಮೂಲಕ ನಮಗೂ ಸಹ ಸರಕಾರದ ವಸತಿ ಭಾಗ್ಯ ಸಿಗುವುದೇ ಎಂಬ ನಿರೀಕ್ಷೆಯಲ್ಲಿ ನಿವೇಶನಾಕಾಂಕ್ಷಿಗಳು ಕಾಯುತ್ತಿದ್ದಾರೆ. 2024-25 ರಲ್ಲಿ ಮೈಸೂರು ಜಿಲ್ಲಾ ಪಂಚಾಯಿತಿ ಮೈಸೂರು ಮಹಾನಗರ ಪಾಲಿಕೆ ವ್ಯಾಪ್ತಿಯನ್ನು ಹೊರತುಪಡಿಸಿ ನಡೆಸಿದ ವಸತಿ ಮತ್ತು ನಿವೇಶನ ರಹಿತರ ಸಮೀಕ್ಷೆಯಲ್ಲಿ ಈ ಅಂಶ ಬಹಿರಂಗಗೊಂಡಿದೆ.

**ಜಿಪಂ ಸಮೀಕ್ಷೆಯಿಂದ ಬಹಿರಂಗ**

ಯಾವುದೇ ವಸತಿ ಯೋಜನೆಯಡಿ ಮನೆ ಪಡೆಯದ ಬಿಪಿಎಲ್ ಕುಟುಂಬಗಳು ಹಾಗೂ ಒಂದೇ ಸೂರಿನಲ್ಲಿ ಎರಡು-ಮೂರು ಕುಟುಂಬಗಳು ವಾಸಿಸುತ್ತಿರುವುದನ್ನೇ ಮಾನದಂಡವನ್ನಾಗಿ



ಉದಯವಾಹಿನಿ ಚಿತ್ರ

ಸಿಕೊಂಡು ಜಿಲ್ಲಾ ಪಂಚಾಯಿತಿ ನಡೆಸಿದ ಸರ್ವೇಯಲ್ಲಿ ಜಿಲ್ಲೆಯಲ್ಲಿ ಬರೋಬ್ಬರಿ 50,206 ಕುಟುಂಬಗಳಿಗೆ ಸ್ವಂತ ಸೂರು ಇರದೇ ಇರುವುದು ಗೊತ್ತಾಗಿದೆ.

ಸಮೀಕ್ಷೆಯಲ್ಲಿ ನಂಜನಗೂಡಿನಲ್ಲಿ ಅತಿ ಹೆಚ್ಚು ವಸತಿ ಮತ್ತು ನಿವೇಶನ ರಹಿತರು ಇರುವುದು ಪತ್ತೆಯಾಗಿದ್ದು, ಸಾಲಿಗ್ರಾಮದಲ್ಲಿ ಅತಿ ಕಡಿಮೆ ಮಂದಿ ಇದ್ದಾರೆ. ನಂಜನಗೂಡಿನಲ್ಲಿ 12,493 ಮಂದಿ ಇದ್ದರೆ, ಸಾಲಿಗ್ರಾಮದಲ್ಲಿ 724 ಮಂದಿ ಇದ್ದಾರೆ.

ವಸತಿ ರಹಿತರಿಗಾಗಿಯೇ ಕೇಂದ್ರ ಮತ್ತು ರಾಜ್ಯ ಸರಕಾರದಿಂದ ಬಸವ ವಸತಿ ಯೋಜನೆ , ಡಾ.ಬಿ.ಆರ್.ಅಂಬೇಡ್ಕರ್ ನಿವಾಸ್ ಯೋಜನೆ, ಪ್ರಧಾನ ಮಂತ್ರಿ ಆವಾಸ್ ಸೇರಿದಂತೆ ನಾನಾ ಯೋಜನೆಗಳಿವೆ. ಆದರೆ, ಇದುವರೆವಿಗೂ ಈ ಯೋಜನೆಗಳಡಿ ಯಾರಿಗೂ ಪೂರ್ಣ ಪ್ರಮಾಣದಲ್ಲಿ ನಿವೇಶನ ದೊರಕಿಲ್ಲ.

ಪ್ರತಿಯೊಬ್ಬರು ಸ್ವಂತ ಸೂರು, ನಿವೇಶನ ಹೊಂದಬೇಕೆಂಬ ಬಯಕೆ ಹೊಂದಿರುತ್ತಾರೆ. ಹೀಗಾಗಿ ಇದನ್ನೆ ಲಾಭವನ್ನಾಗಿ ಸಿಕೊಂಡು ಚುನಾವಣಾ ಪ್ರಚಾರ ಪಡೆಯುವ ಜನಪ್ರತಿನಿಗಳು, ನಿವೇಶನ ಹಂಚಿಕೆ ಮಾಡಿರುವುದೇ ಅಪರೂಪ.

ನಿವೇಶನ ಹಂಚಿಕೆ ನಡೆದಿರುವುದು ಬೆರಳೆಣಿಕೆಯಷ್ಟು ಮಾತ್ರವೇ ಎಂಬುದು ವಿಪರ್ಯಾಸವಾಗಿದೆ. ಮೈಸೂರು ಅಭಿವೃದ್ಧಿ ಪ್ರಾಧಿಕಾರ ಸೇರಿದಂತೆ ಸ್ಥಳೀಯ ಸಂಸ್ಥೆಗಳಿಂದ ನಿವೇಶನ ಹಂಚಿಕೆ ಕಾರ್ಯ ನಡೆದು ವರ್ಷಗಳೇ ಕಳೆದಿದೆ. ಹೀಗಾಗಿ ಸ್ವಂತ ಸೂರು ಕಟ್ಟಿಕೊಳ್ಳಬೇಕೆಂಬ ಕನಸು ಕನಸಾಗಿಯೇ ಉಳಿದಿದೆ. ಸರಕಾರಿ ವಸತಿ ಯೋಜನೆಗಳಲ್ಲಿ ಅನುದಾನ ಬಿಡುಗಡೆಗೆ ನೂರೆಂಟು ತಗಾದೆಗಳಿವೆ. ಈ ಎಲ್ಲಾ ಕಾರಣಗಳಿಂದಾಗಿ ಮನೆ, ನಿವೇಶನ ಕನಸು ಕಂಡವರು ನನಸಾಗಿಸಿಕೊಳ್ಳಲು ಸಾಧ್ಯವಾಗುತ್ತಲೇ ಇಲ್ಲ.

**ಖಾಸಗಿ ಬಡಾವಣೆ ಲಾಬಿ**

**ಸರಕಾರಿ ಸವಲತ್ತು ಪಡೆಯಲು ವರ್ಷಾನುಗಟ್ಟಲೇ ಕಾದು ಸುಸ್ತಾಗಿರುವ ಸಾರ್ವಜನಿಕರು ಸಾಲ-ಸೋಲ ಮಾಡಿ ಖಾಸಗಿ ಬಡಾವಣೆಗಳಲ್ಲಿ ನಿವೇಶನ ಖರೀದಿಸುತ್ತಿದ್ದಾರೆ. ಇದರಲ್ಲಿಬಹುತೇಕ ನಿವೇಶನಗಳು ಅಕ್ರಮಗಳಿಂದಲೇ ಕೂಡಿದೆ. ಹೂಡಿಕೆ ಮಾಡಿರುವ ಹಣ ಕಳೆದುಕೊಂಡು ಕೋರ್ಟ್ ಮೆಟ್ಟಿಲು ಅಲೆಯುತ್ತಿರುವ ಅನೇಕ ಪ್ರಕರಣಗಳಿವೆ.**


# ರಸ್ತೆ ಗುಂಡಿ ಮುಚ್ಚದವರು ದೇಗುಲ ಅಭಿವೃದ್ಧಿ ಮಾಡುತ್ತಾರಾ?

• **ಉದಯವಾಹಿನಿ, ಮಾಗಡಿ**

ತಾಲ್ಲೂಕಿನ ರಸ್ತೆ ಗುಂಡಿ ಮುಚ್ಚಲಾಗದವರು ಮಾಗಡಿ ಶ್ರೀರಂಗನಾಥ ಸ್ವಾಮಿ ದೇವಸ್ಥಾನ ಅಭಿವೃದ್ಧಿ ಮಾಡುತ್ತಾರಾ ಎಂದು ಶಾಸಕ ಬಾಲಕೃಷ್ಣ ವಿರುದ್ಧ ಮಾಜಿ ಶಾಸಕ ಎ.ಮಂಜುನಾಥ್ ಕಿಡಿ ಕಾರಿದರು. ಪಟ್ಟಣದ ತಿರುಮಲೆ ಶ್ರೀರಂಗನಾಥ ಸ್ವಾಮಿ ದೇವಸ್ಥಾನಕ್ಕೆ ಕೊನೆಯ ಶ್ರಾವಣ ಶನಿವಾರ ಶಾಸಕ ಎ.ಮಂಜುನಾಥ್ ದಂಪತಿ ಭೇಟಿ ನೀಡಿ ಪೂಜೆ ಸಲ್ಲಿಸಿ ಸುದ್ದಿಗಾರರೊಂದಿಗೆ ಮಾತನಾಡಿದರು.

'ನಾನು ಶಾಸಕನಾಗಿದ್ದ ಅವಧಿಯಲ್ಲಿ ಶ್ರೀರಂಗನಾಥ ಸ್ವಾಮಿ ದೇವಸ್ಥಾನ ಅಭಿವೃದ್ಧಿಗೆ 5 ಕೋಟಿ ಅನುದಾನ ಮಂಜೂರಾಗಿತ್ತು.

ಚುನಾವಣೆ ಹಿನ್ನೆಲೆ ಅನುದಾನ ಬಳಕೆ ಮಾಡಿಕೊಳ್ಳಲು ಆಗಲಿಲ್ಲ. ಶಾಸಕ ಎಚ್.ಸಿ.ಬಾಲಕೃಷ್ಣರವರು ಸದನದಲ್ಲಿ ಪ್ರವಾಸೋದ್ಯಮ ಇಲಾಖೆಯಿಂದ ಬಿಡುಗಡೆಯಾಗಿದ್ದ ಅನುದಾನವನ್ನು ಮುಜರಾಯಿ ಇಲಾಖೆ ಎಂದು ತಪ್ಪಾಗಿ ಪ್ರಶ್ನಿಸಿದ್ದರಿಂದ



ಸಂಬಂಧಪಟ್ಟ ಸಚಿವರಿಂದ ಸರಿಯಾದ ಉತ್ತರ ಬರಲಿಲ್ಲ. ಎರಡೂವರೆ ವರ್ಷವಾದರೂ ಕೂಡ ದೇವಸ್ಥಾನಕ್ಕೆ ಹಣ ಬಿಡುಗಡೆಯಾಗಿಲ್ಲ. ಮಾಗಡಿ ಪಟ್ಟಣದ ರಸ್ತೆ ಗುಂಡಿ ಮುಚ್ಚದ ಸರ್ಕಾರ ದೇವಸ್ಥಾನ ಅಭಿವೃದ್ಧಿ ಮಾಡುತ್ತಾರಾ? ಮುಂದೆ ಶಾಸಕರಾಗಿ ಅವಕಾಶ ಸಿಕ್ಕರೆ ದೇವಸ್ಥಾನ ಅಭಿವೃದ್ಧಿ ಮೊದಲ ಆದ್ಯತೆ ಎಂದರು. ಲಕ್ಷ್ಮಿ ಎ.ಮಂಜುನಾಥ್, ತಮ್ಮಣ್ಣಗೌಡ, ವಿಜಯಕುಮಾರ್ ಬೆಳಗುಂಬ, ಹೊಸಹಳ್ಳಿ ರಂಗಣಿ ಪಂಚೆ ರಾಮಣ್ಣ, ಕೋಟಪ್ಪ, ಕೆಂಪಸಾಗರ ಮಂಜುನಾಥ್, ಕೆ.ವಿ.ಬಾಲು, ಕದಂಬ ಗಂಗರಾಜು, ವಿಶ್ವನಾಥ್, ಕೆಂಪೇಗೌಡ, ಶಿವಕುಮಾರ್, ಕರಡಿ ನಾಗರಾಜು, ಚಕ್ರಬಾವಿ ನಟೇಶ್ ರು ಭಾಗವಹಿಸಿದ್ದರು.

**ಆಗಸ್ಟ್ 29 ರಂದು ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರು ಮಾಗಡಿಯಲ್ಲಿ ವಿವಿಧ ಅಭಿವೃದ್ಧಿ ಕಾಮಗಾರಿ ಉದ್ಘಾಟನೆಗೆ ಆಗಮಿಸುತ್ತಿದ್ದು, ಅವರನ್ನು ಸ್ವಾಗತಿಸುತ್ತೇವೆ ಎಂದರು. ಜೆಡಿಎಸ್ ರಾಜ್ಯ ಯುವ ಘಟಕದ ಅಧ್ಯಕ್ಷ ನಿಖಿಲ್ ಕುಮಾರಸ್ವಾಮಿ ಅವರನ್ನು ಶೀಘ್ರ ಮಾಗಡಿಗೆ ಕರೆಸಿ ಜೆಡಿಎಸ್ ಬೃಹತ್ ಸಮಾವೇಶ ನಡೆಸಲಾಗುತ್ತದೆ ಎಂದು ತಿಳಿಸಿದರು.**

# 650 ಗ್ರಾಂ ತೂಕದ ಶಿಶು ಬದುಕಿಸಿದ ವೈದ್ಯರು

• **ಉದಯವಾಹಿನಿ, ಕೋಲಾರ**

ಅವಧಿ ಪೂರ್ವವಾಗಿ ಜನಿಸಿದ 650 ಗ್ರಾಂ ತೂಕವಿದ್ದ ನವಜಾತ ಶಿಶುವಿಗೆ ವೈದ್ಯರು ಸಕಾಲಕ್ಕೆ ಚಿಕಿತ್ಸೆ ನೀಡಿ ಬದುಕಿಸುವಲ್ಲಿ ಯಶಸ್ವಿಯಾಗಿದ್ದಾರೆ. ವಂಶೋದಯ ಅಡ್ವಾನ್ಸ್ ಮಲ್ಟಿಸ್ಪೆಷಾಲಿಟಿ ಆಸ್ಪತ್ರೆ ಮಕ್ಕಳ ತಜ್ಞರ ತಂಡ ಸತತ 77 ದಿನ ನಿತ್ಯ 24 ಗಂಟೆ ಆರೈಕೆ ಮಾಡಿ ಮಗುವನ್ನು ಪೋಷಕರಿಗೆ ಹಸ್ತಾಂತರಿಸಿದೆ. ಈ ವೇಳೆಗೆ ಮಗು 1.66 ಕೆ.ಜಿ. ತೂಕ ಹೊಂದಿದೆ ಎಂದು ನವಜಾತ ಶಿಶುಗಳ ತಜ್ಞ ವೈದ್ಯ ಡಾ.ಮನೋಜ್ ಕುಮಾರ್ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.



ಮಗು ಜನಿಸಿದಾಗ ಕೇವಲ 650 ಗ್ರಾಂ ತೂಕ ಇತ್ತು.

ಶಿಶುವನ್ನು ಆಸ್ಪತ್ರೆಯ ನವಜಾತ ಶಿಶುಗಳ ತೀವ್ರ ನಿಘಾ ಘಟಕದಲ್ಲಿ ಇರಿಸಿ ಆರೈಕೆ ಮಾಡಲಾಯಿತು. ಮೊದಲ 50 ದಿನ ಕೃತಕ ಉಸಿರಾಟದ ಯಂತ್ರದಲ್ಲಿ ಆರೈಕೆ ಮಾಡಲಾಯಿತು. ನಂತರ ಆಮ್ಲಜನಕದ ಸಹಾಯದೊಂದಿದೆ ತೀವ್ರ ನಿಗಾ ಘಟಕದಲ್ಲಿ ಚಿಕಿತ್ಸೆ ನೀಡಲಾಯಿತು. ಬಳಿಕ ಆಮ್ಲಜನಕ ತೆಗೆದು ಸಾಮಾನ್ಯ ವಾರ್ಡ್‌ನಲ್ಲಿ ಚಿಕಿತ್ಸೆ ನೀಡಲಾಯಿತು. ವಿಶೇಷ ಆರೈಕೆಯ ಜೊತೆಗೆ ಉತ್ತಮ ಚಿಕಿತ್ಸೆ ನೀಡಿದ ಪರಿಣಾಮ ತಾಯಿ ಮಗು ಇಬ್ಬರೂ ಆರೋಗ್ಯವಾಗಿದ್ದಾರೆ ಎಂದಿದ್ದಾರೆ.

**ಸಾಮಾನ್ಯವಾಗಿ ಈ ರೀತಿಯ ಶಿಶುಗಳು ಬದುಕುವುದೇ ಕಷ್ಟ, ವೈದ್ಯರು, ನರ್ಸಿಂಗ್ ಸಿಬ್ಬಂದಿ ಹಾಗೂ ಪೋಷಕರು ಆರೈಕೆ ಇದಕ್ಕೆ ಕಾರಣ. ಅವಧಿ ಪೂರ್ಣವಾಗುವ ಮುನ್ನವೇ ಜನಿಸಿದ ಶಿಶುಗಳಲ್ಲಿ ಕಡಿಮೆ ತೂಕ, ಉಸಿರಾಟದ ತೊಂದರೆ, ಹಾಲಿನ ಅಜೀರ್ಣತೆ, ನಂಜು, ಮೆದುಳಿನಲ್ಲಿ ರಕ್ತಸ್ರಾವ, ಹೃದಯ ತೊಂದರೆ ಇರುತ್ತವೆ. ಈ ಎಲ್ಲಾ ಸವಾಲುಗಳನ್ನು ಎದುರಿಸಿ ಮಗುವನ್ನು ಆರೈಕೆ ಮಾಡಲಾಗಿದೆ ಎಂದು ತಿಳಿಸಿದ್ದಾರೆ.**

# ವಿವಿಗೆ ಶಿವಕುಮಾರ ಸ್ವಾಮೀಜಿ ಹೆಸರು ಮರುನಾಮಕರಣ; ಸರ್ಕಾರಕ್ಕೆ ಸೋಮಣ್ಣ ಪತ್ರ

• **ಉದಯವಾಹಿನಿ, ತುಮಕೂರು**

ವಿಶ್ವವಿದ್ಯಾಲಯಕ್ಕೆ ಡಾ. ಶಿವಕುಮಾರ ಸ್ವಾಮೀಜಿ ಹೆಸರು ಮರುನಾಮಕರಣ ಮಾಡುವಂತೆ ಕೇಂದ್ರ ಸಚಿವ ವಿ. ಸೋಮಣ್ಣ ಅವರು ರಾಜ್ಯ ಸರ್ಕಾರಕ್ಕೆ ಪತ್ರ ಬರೆದಿದ್ದಾರೆ. ಮುಖ್ಯಮಂತ್ರಿ ಸಿದ್ದರಾಮಯ್ಯ ಮತ್ತು ತುಮಕೂರು ಜಿಲ್ಲಾ ಉಸ್ತುವಾರಿ ಸಚಿವ ಡಾ. ಜಿ. ಪರಮೇಶ್ವರ್ ಅವರಿಗೆ ಪತ್ರ ಬರೆದು ಮನವಿ ಮಾಡಿದ್ದಾರೆ. ಹಲವು ದಿನಗಳಿಂದ ತುಮಕೂರಿನಾದ್ಯಂತ ಈ ಕೂಗು ಕೇಳಿಬರುತ್ತಿತ್ತು. ಇದೀಗ ಕೇಂದ್ರ ಸಚಿವರು ರಾಜ್ಯ ಸರ್ಕಾರಕ್ಕೆ ಮನವಿ ಸಲ್ಲಿಸಿದ್ದಾರೆ. ಕರ್ನಾಟಕ ರತ್ನ, ತ್ರಿವಿಧ ದಾಸೋಹಿಗಳು, ನಡೆದಾಡುವ ದೇವರು ಎಂದೆನಿಸಿದ ಸಿದ್ಧಗಂಗಾ ಮಠದ ಪರಮಪೂಜ್ಯ ಶ್ರೀ ಡಾ. ಶಿವಕುಮಾರ ಮಹಾಸ್ವಾಮಿಗಳು



ರಾಜ್ಯದ ಮೂಲೆ ಮೂಲೆಗಳಿಂದ ಬರುವ ಎಲ್ಲಾ ವರ್ಗದ ಸಹಸ್ರಾರು ಕುಟುಂಬಗಳಿಗೆ ನೆರವಾಗಿ ಉಚಿತ ಶಿಕ್ಷಣ, ವಸತಿ ಮತ್ತು ದಾಸೋಹ ಕಲ್ಪಿಸುವುದರೊಂದಿಗೆ ಅವರೆಲ್ಲರೂ ಶೈಕ್ಷಣಿಕವಾಗಿ ಪ್ರಗತಿ ಹೊಂದಲು ಕಾರಣೀಭೂತರಾಗಿದ್ದಾರೆ. ಇಂತಹ ಶ್ರೇಷ್ಠ ಸಂತರ ಹೆಸರನ್ನು ತುಮಕೂರು ವಿಶ್ವವಿದ್ಯಾಲಯಕ್ಕೆ ನಾಮಕರಣ ಮಾಡುವುದರ ಮೂಲಕ ಪೂಜ್ಯರಿಗೆ ಗೌರವ ಸಲ್ಲಿಸಬೇಕಾಗಿದೆ.

ಚುನಾವಣಾ ರಾಜಕೀಯದಿಂದ ನಿವೃತ್ತಿ ಕೇಂದ್ರ ಸಚಿವ ವಿ.ಸೋಮಣ್ಣ ಅವರು ಚುನಾವಣಾ ರಾಜಕೀಯದಿಂದ ನಿವೃತ್ತಿ ಹೊಂದುವ ಮಾತುಗಳನ್ನು ಆಡಿದ್ದಾರೆ.

''ದೇವರೇ ಬಂದು ಮತ್ತೆ ಚುನಾವಣೆಗೆ ನಿಲ್ಲು ಅಂದ್ರೂ ಕೇಳಲ್ಲ. ತುಮಕೂರಿನಲ್ಲಿ ಸುದ್ದಿಗೋಷ್ಠಿಯಲ್ಲಿ ನಡೆಸಿ ಮಾತನಾಡಿದ ಅವರು, ತುಮಕೂರು-ಬೆಂಗಳೂರು ನಾಲ್ಕು ಪಥದ ರೈಲ್ವೆ ಮಾರ್ಗಕ್ಕೆ ಸರ್ವೆ ಆಯ್ತು, BPS ಶುರು ಮಾಡಿಸಿದ್ದೇನೆ. ಇನ್ನೊಂದು ಐವತ್ತು ವರ್ಷಕ್ಕೆ ತೊಂದರೆಯಾಗಬಾರದು. ನಾನು ಇನ್ನು 50 ವರ್ಷ ಇರ್ತೀನೇನಪ್ಪ? ದೇವರೇ ಬಂದು ಮತ್ತೆ ಚುನಾವಣೆಗೆ ನಿಲ್ಲು ಅಂದ್ರೂ ಕೇಳಲ್ಲ. ನನ್ನ ಭಾವನೆ ಹಾಗಿದೆ ಎಂದು ನಿವೃತ್ತಿಯ ಮಾತುಗಳನ್ನು ಆಡಿದ್ದಾರೆ.

**ಆದುದರಿಂದ ತಾವುಗಳು ದಯಮಾಡಿ ತುಮಕೂರು ವಿಶ್ವವಿದ್ಯಾಲಯಕ್ಕೆ ''ಪರಮಪೂಜ್ಯ ಡಾ. ಶ್ರೀ ಶಿವಕುಮಾರ ಮಹಾಸ್ವಾಮೀಜಿ'' ವಿಶ್ವವಿದ್ಯಾಲಯ ಎಂದಯ ಮರುನಾಮಕರಣ ಮಾಡುವ ಬಗ್ಗೆ ಅಗತ್ಯ ಕ್ರಮ ಕೈಗೊಳ್ಳುವಂತೆ ತುಮಕೂರು ಜಿಲ್ಲೆಯ ಮಹಾಜನತೆಯ ಪರವಾಗಿ ತಮ್ಮಲ್ಲಿ ಮನವಿ ಮಾಡುತ್ತೇನೆ ಎಂದು ಪತ್ರ ಬರೆದಿದ್ದಾರೆ.**

# ಆಂಧ್ರದಲ್ಲಿ ಬುದ್ಧನ ವಿಗ್ರಹ ಶಿರಚ್ಛೇದ: ಆಕ್ರೋಶ

• **ಉದಯವಾಹಿನಿ, ಶ್ರೀನಿವಾಸಪುರ**

ತಾಲೂಕಿನ ಪಕ್ಕದ ಮದನಪಲ್ಲಿ ಬಳಿ ಬುದ್ಧನ ಬೆಟ್ಟದಲ್ಲಿ ಬುದ್ಧನ ವಿಗ್ರಹದ ಶಿರಚ್ಛೇದ ಮಾಡಿರುವ ಆರೋಪಿಗಳನ್ನು ಅಂಧ್ರ ಪ್ರದೇಶದ ಸರ್ಕಾರ ಕೂಡಲೇ ಬಂಧಿಸಬೇಕೆಂದು ದಲಿತ ಮುಖಂಡರು ಅಗ್ರಹಿಸಿದ್ದಾರೆ.

ಪಟ್ಟಣದ ತಹಶೀಲ್ದಾರ್ ಕಚೇರಿ ಮುಂಭಾಗ ದಲಿತ ಸಂಘರ್ಷ ಸಮಿತಿ (ಡಿಎಸ್‌ಎಸ್) ಆಶ್ರಯದಲ್ಲಿ ನಡೆದ ಸಭೆಯಲ್ಲಿ ಈ ಆಗ್ರಹ ವ್ಯಕ್ತವಾಗಿದೆ.

ಸಭೆಗೆ ಚಾಲನೆ ನೀಡಿ ಮಾತನಾಡಿದ ಕರ್ನಾಟಕ ಜಾನಪದ ಅಕಾಡೆಮಿ ಅಧ್ಯಕ್ಷ ಗೊಲ್ಲಹಳ್ಳಿ, ಶಿವಪ್ರಸಾದ್, 'ಈ ಹೇಯ ಕೃತ್ಯ ಎಸಗಿರುವವರನ್ನು ಬಂಧಿಸುವವರೆಗೆ ಹೋರಾಟಕ್ಕೆ ಕೈ ಜೋಡಿಸುತ್ತೇವೆ. ಈ ಹಿಂದೆ ಕೆಲ ಸಂಘಟನೆಗಳ ವಿರುದ್ಧ 2 ಸಾವಿರ ಜನ ಸೇರಿ ಹೋರಾಟ ಮಾಡಿದ್ದೆವು.

ಆಂಧ್ರ ಸರ್ಕಾರ ಈ ಪ್ರಕರಣದಲ್ಲಿ ಆರೋಪಿಗಳನ್ನು ಬಂಧಿಸದ ಪಕ್ಷದಲ್ಲಿ 20 ಸಾವಿರ ಜನ ಸೇರಿ ಹೋರಾಟ ಮಾಡಲಾಗುವುದು' ಎಂದು ಎಚ್ಚರಿಸಿದರು.

ಮುಂದಿನ ದಿನಗಳಲ್ಲಿ ಆಂಧ್ರ ಮುಖ್ಯಮಂತ್ರಿ ಚಂದ್ರಬಾಬು ನಾಯ್ಡು ಅವರೇ ಬುದ್ಧನ ವಿಗ್ರಹ ಪುನರ್ ಪ್ರತಿಷ್ಠಾಪಿಸಬೇಕು ಎಂದು ಒತ್ತಾಯಿಸಿದರು. ಬುದ್ಧನ ವಿಗ್ರಹ ಹಾಗೂ ಅಂಬೇಡ್ಕರ್ ಭಾವಚಿತ್ರಕ್ಕೆ ಗಣ್ಯರು ಪುಷ್ಪನಮನ ಸಲ್ಲಿಸಿದರು. ಹಿಂದುಳಿದ



**ಭಾರತೀಯ ಅಂಬೇಡ್ಕರ್ ಸೇನಾ ಆಂಧ್ರಪ್ರದೇಶದ ರಾಜ್ಯಾಧ್ಯಕ್ಷ ಪಿಟಿಎಂ ಶಿವಪ್ರಸಾದ್ ಮಾತನಾಡಿ, 'ಆಂಧ್ರ ಸರ್ಕಾರ ಸಂವಿಧಾನ ಬದ್ಧ ಮಾನವ ಹಕ್ಕುಗಳನ್ನು ದಮನ ಮಾಡುತ್ತಿದೆ. ಬುದ್ಧನ ಶಿರಚ್ಛೇದ ಮಾಡಿರುವವರನ್ನು ಬಂಧಿಸುವಲ್ಲಿ ಆಂಧ್ರ ಪೊಲೀಸರು ವಿಫಲವಾಗಿದ್ದಾರೆ. ಕಿಡಿಗೇಡಿಗಳ ವಿರುದ್ಧ ಕ್ರಮಕೈಗೊಳ್ಳದಿದ್ದರೆ ಮುಂದಿನ ದಿನಗಳಲ್ಲಿ ದೇಶದಾದ್ಯಂತ ದಲಿತ ಸಂಘಟನೆಗಳು ಹೋರಾಟ ಮಾಡಲಿವೆ' ಎಂದರು.**

ವಿಭಾಗದ ರಾಜ್ಯ ಸಂಘಟನಾ ಸಂಚಾಲಕ ಇಂದೂಧರ ಹೊನ್ನಾಪುರ, ರಾಜ್ಯ ಪದಾಧಿಕಾರಿಗಳಾದ ಎನ್.ವೆಂಕಟೇಶ್ ಗುರುಪ್ರಸಾದ್ ಕೆರಗೋಡು, ಮರಿಯಪ್ಪಹಳ್ಳಿ, ಜಿಲ್ಲಾ ಪದಾಧಿಕಾರಿಗಳಾದ ಹಾರೋಹಳ್ಳಿ ರವಿ. ಸಿ.ಜಿ.ನಾಗರಾಜು, ಜಿಲ್ಲಾ ಸಂಘಟನಾ ಸಂಚಾಲಕ ಚಲ್ದಿಗಾನಹಳ್ಳಿ ಸಿ.ವಿ.ಮುನಿವೆಂಕಟಪ್ಪ, ತಾಲ್ಲೂಕು ಪದಾಧಿಕಾರಿಗಳಾದ ವಿ.ಮುನಿಯಪ್ಪ, ಟಿ.ಎಂ. ಮುಳವಾಗಲಪ್ಪ, ನಾಗದೇವಹಳ್ಳಿ ಎಂ.ಶ್ರೀನಿವಾಸ್, ಪಿ.ವಾಸು, ಎನ್.ನಾರಾಯಣಸ್ವಾಮಿ ಇದ್ದರು.

**ದೇಶವು ಸಂವಿಧಾನದ ಅಡಿಯಲ್ಲಿ ನಡೆಯುತ್ತಿದೆ. ಮತದಾರರಿಂದ ರಚನೆಯಾದ ಯಾವುದೇ ಸರ್ಕಾರವಾಗಲಿ ಎಲ್ಲಾ ಸಮುದಾಯದ ಏಳಿಗೆಗಾಗಿ ದುಡಿಯಬೇಕಾಗಿದೆ. ಅನ್ನಮಯ್ಯ ಜಿಲ್ಲೆಯ ಪೊಲೀಸ್ ವರಿಷ್ಠಾಧಿಕಾರಿಗೆ ಯಾವುದೋ ಕಾಣದ ಕೈಗಳ ಒತ್ತಡ ಇರಬೇಕು. ಇಲ್ಲವಾದರೆ ಕಾನೂನಿನ ಅರಿವಿಲ್ಲವೋ ಗೊತ್ತಾಗುತ್ತಿಲ್ಲ. ಅವರು ಬುದ್ಧನ ಜೀವನ ಚರಿತ್ರೆ ಓದುಬೇಕು' ಎಂದು ಸಲಹೆ ನೀಡಿದರು.**

**ಅಂತರರಾಜ್ಯ ಸಂಘಟನಾ ಸಂಚಾಲಕ ಎನ್.ಮುನಿಸ್ವಾಮಿ**

# ಕರ್ತವ್ಯಲೋಪ: ನಾಲ್ವರು ಪೊಲೀಸರ ಅಮಾನತು

• **ಉದಯವಾಹಿನಿ, ಚನ್ನಪಟ್ಟಣ**

ತಾಲ್ಲೂಕಿನ ಎಂ.ಕೆ. ದೊಡ್ಡಿ ಪೊಲೀಸ್ ಠಾಣೆಯಲ್ಲಿ ಕಳ್ಳತನ ಪ್ರಕರಣದ ಆರೋಪಿಯ ಲಾಕಪ್ ಡೆತ್ ಆರೋಪಕ್ಕೆ ಸಂಬಂಧಿಸಿದಂತೆ ಕರ್ತವ್ಯ ಲೋಪದ ಆರೋಪದ ಮೇಲೆ ಠಾಣೆಯ ಎಎಸ್ಐ ನಾಗರಾಜು, ಕಾನ್‌ಸ್ಟೆಬಲ್‌ಗಳಾದ ಲಕ್ಷ್ಮಿನಾರಾಯಾಣ, ಪ್ರತಾಪ್ ಹಾಗೂ ಸೋಮನಾಥ್ ಅವರನ್ನು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಆರ್. ಶ್ರೀನಿವಾಸ ಗೌಡ ಅಮಾನತುಗೊಳಿಸಿದ್ದಾರೆ.

ದೇವಸ್ಥಾನದಲ್ಲಿ ನಡೆದಿದ್ದ ಕಳ್ಳತನಕ್ಕೆ ಸಂಬಂಧಿಸಿದಂತೆ ಬಂಧಿತನಾಗಿದ್ದ ಮದ್ದೂರು ತಾಲ್ಲೂಕಿನ ದುಂಡನಹಳ್ಳಿಯ ರಮೇಶ್ (59) ಶವ ಠಾಣೆಯ ಶೌಚಾಲಯದಲ್ಲಿ ಅ. 20ರಂದು ಬೆಳಗ್ಗಿನ ಜಾವ ನೇಣು ಬಿಗಿದ ಸ್ಥಿತಿಯಲ್ಲಿ ಪತ್ತೆಯಾತ್ತು. 'ಪೊಲೀಸರೇ ಹೊಡೆದು ಸಾಯಿಸಿ ನೇಣು ಹಾಕಿದ್ದಾರೆ. ಇದು ಲಾಕಪ್‌ಡೆತ್' ಎಂದು ರಮೇಶ್ ಕುಟುಂಬದವರು ಪೊಲೀಸರ ವಿರುದ್ಧ ನೇರ ಆರೋಪ ಮಾಡಿದ್ದರು.

ಠಾಣೆಯಲ್ಲೇ ಸಂಭವಿಸಿದ್ದ ಸಾವಿನ ಪ್ರಕರಣದ ತನಿಖೆ ಸಿಐಡಿಗೆ ವರ್ಗಾವಣೆಯಾಗಿತ್ತು.

ಅದರ ಬೆನ್ನಲ್ಲೇ, ಘಟನೆ ನಡೆದ ದಿನದಂದು ಕರ್ತವ್ಯದಲ್ಲಿದ್ದ ನಾಲ್ವರು ಸಿಬ್ಬಂದಿಯನ್ನು ಕರ್ತವ್ಯ ಲೋಪದ ಆರೋಪದ ಮೇಲೆ ಅಮಾನತು ಮಾಡಿ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಅವರು ಆದೇಶ ಹೊರಡಿಸಿದ್ದಾರೆ. ಆತ್ಮಹತ್ಯೆ ವಿಷಯ ತಿಳಿಯುತ್ತಿದ್ದಂತೆ ಘಟನಾ ಸ್ಥಳಕ್ಕೆ ಭೇಟಿ ನೀಡಿ ಪರಿಶೀಲನೆ ನಡೆಸಲಾಗಿದೆ. ಸಿಬ್ಬಂದಿಯನ್ನು ವಿಚಾರಣೆ ನಡೆಸಲಾಗಿದೆ.

ಶವದ ಮೇಲೆ ಯಾವುದೇ ಗಾಯದ ಗುರುತುಗಳಿಲ್ಲ. ಈ ವಿಷಯದಲ್ಲಿ ಸಿಬ್ಬಂದಿಯ ನಿರ್ಲಕ್ಷ್ಯ ಕಂಡುಬಂದಿಲ್ಲ. ಶೌಚಾಲಯದಲ್ಲಿ ರಮೇಶ್ ನರಳಾಟದ ಶಬ್ದ ಕೇಳಿದಾಗ, ಆತನನ್ನು ಆಸ್ಪತ್ರೆಗೆ ಕರೆದೊಯ್ದು ಬದುಕಿಸಲು ಪ್ರಯತ್ನಿಸಿದ್ದಾರೆ'

**ನಿರ್ಲಕ್ಷ್ಯವಿಲ್ಲ ಎಂದಿದ್ದ ಎಸ್‌ಪಿ**

**ಆರೋಪಿ ರಮೇಶ್ ಸಾವಿಗೆ ಸಂಬಂಧಿಸಿದಂತೆ ಕುಟುಂಬದವರ ಲಾಕ್ ಅಪ್ ಡೆತ್ ಆರೋಪ ಅಲ್ಲಗಳೆದಿದ್ದ ಎಸ್‌ಪಿ ಶ್ರೀನಿವಾಸ ಗೌಡ ಅವರು, ಘಟನೆಯಲ್ಲಿ ಕರ್ತವ್ಯದಲ್ಲಿದ್ದ ಠಾಣೆ ಸಿಬ್ಬಂದಿಯ ನಿರ್ಲಕ್ಷ್ಯ ಕಂಡುಬಂದಿಲ್ಲ ಎಂದು ಸಮರ್ಥಿಸಿಕೊಂಡಿದ್ದರು.**



# ಗಣೇಶನ ಸ್ವಾಗತಕ್ಕೆ ಸಡಗರದ ತಯಾರಿ

## ಬಡಾವಣೆಗಳಲ್ಲಿ ಸಿದ್ಧಗೊಳ್ಳುತ್ತಿವೆ ಪೆಂಡಲ್‌ಗಳು: ಬಿಬಿ ರಸ್ತೆಯಲ್ಲಿ ಮಾರಾಟಕ್ಕೆ ಬಂದ ಮೂರ್ತಿಗಳು

• **ಉದಯವಾಹಿನಿ, ಚಿಕ್ಕಬಳ್ಳಾಪುರ**

ಗಣೇಶೋತ್ಸವಕ್ಕೆ ಮೂರೇ ದಿನಗಳು ಬಾಕಿ ಇದೆ. ಹಬ್ಬಕ್ಕಾಗಿ ಪ್ರತಿ ವರ್ಷದಂತೆ ಈ ಬಾರಿಯೂ ಕೂಡ ನಗರದಲ್ಲಿ ವಿಘ್ನ ನಿವಾರಕ ಮೂರ್ತಿಗಳು ಮಾರುಕಟ್ಟೆಯಲ್ಲಿ ಗ್ರಾಹಕರ ಅಭಿರುಚಿಗೆ ತಕ್ಕಂತೆ ಮಾರಾಟಕ್ಕೆ ಸಜ್ಜಾಗಿವೆ. ಶಂಖ ಗಣಪ, ಕೃಷ್ಣ ಗಣಪ ದರ್ಬಾರ್, ಸಾಯಿಬಾಬಾ, ಸಿಂಹಾರೂಢ, ಗಜವಾಹನ, ಅಂಜನೇಯ, ನಾಗರಹಾವು, ಮಯೂರ ವಾಹನ, ಕಮಲಾರೂಢ. ನೃತ್ಯಪಟು, ವೀಣಾ, ಆಕಳು ಅಶ್ವ, ಇಲಿ, ರಥ, ಮರದ ಕೊಂಬೆಯ ಮೇಲೆ ಕುಳಿತ ಗಣಪ ಹೀಗೆ ನಾನಾ ಬಗೆ ಬಗೆಯ ಭಂಗಿಗಳಲ್ಲಿ ಕುಳಿತಿರುವ ಮೂರ್ತಿಗಳು ಮಾರುಕಟ್ಟೆಗೆ ಬರುತ್ತಿವೆ.

ಮನೆಗಳಲ್ಲಿ ಮೂರ್ತಿಗಳನ್ನು ಕೂರಿಸುವವರು ಹಾಗೂ ಬೀದಿಯಲ್ಲಿ ಪ್ರತಿಷ್ಠಾಪಿಸುವ ಗಣೇಶ ಮಂಡಳಿಯವರು, ಮುಂಚೆಯೇ ತಮಗೆ ಬೇಕಾದ ಆಕಾರದ ಮೂರ್ತಿಯನ್ನು ಮುಂಗಡವಾಗಿ ಕಾಯ್ದಿರಿಸುವರು. ಗಣೇಶ ಚತುರ್ಥಿ ಅಥವಾ ಹಬ್ಬದ ಹಿಂದಿನ ದಿನ ಮೂರ್ತಿಗಳನ್ನು ತರುವರು. ಹೀಗೆ ಚಿಕ್ಕಬಳ್ಳಾಪುರ ನಗರ ಹಾಗೂ ಗ್ರಾಮೀಣ ಭಾಗಗಳಲ್ಲಿ ಹಬ್ಬದ ತಯಾರಿಗಳು ಹೆಚ್ಚುತ್ತದೆ. ಗಣೇಶನಿಗೆ ಸ್ವಾಗತ ಕೋರಲು ಜನರು ಸಜ್ಜಾಗಿದ್ದಾರೆ. ಎಂ.ಜಿ ರಸ್ತೆ, ಬಿಬಿ ರಸ್ತೆಯಲ್ಲಿ ಮಾರಾಟಕ್ಕೆ ಇಟ್ಟಿರುವ ವೈವಿಧ್ಯಮಯ ಗಣೇಶ



**ಸುಮಾರು ರೂ 3 ಸಾವಿರದಿಂದ ಮೌಲ್ಯ ಆರಂಭ**

ಮತ್ತು ಗೌರಿ ಮೂರ್ತಿಗಳು ಗಮನ ಸೆಳೆಯುತ್ತಿವೆ. ಸಣ್ಣ ಮೂರ್ತಿಗಳಿಂದ ಹಿಡಿದು ಆಳೆತ್ತರದ ಗಣೇಶ ಮೂರ್ತಿಗಳು ಮಾರುಕಟ್ಟೆಗೆ ಬಂದಿವೆ. ಗಾತ್ರ ಮತ್ತು ವೈವಿಧ್ಯದ ಆಧಾರದಲ್ಲಿ ಬೆಲೆಯು ನಿರ್ಧಾರವಾಗುತ್ತದೆ.

**ಕೊಲ್ಕತ್ತಾ ತಂಡ:** ನಗರದ ಹೊರವಲಯದ ಅಗಲಗುರ್ಕಿ ರೈಲ್ವೆ ಗೇಟ್ ಬಳಿಯ ರಸ್ತೆ ಬದಿಯಲ್ಲಿ ತಾತ್ಕಾಲಿಕವಾಗಿ ನಿರ್ಮಿಸಿಕೊಂಡಿರುವ ಟೆಂಟ್‌ನಲ್ಲಿ ಕೊಲ್ಕತ್ತಾದ ಕೃಷ್ಣಾನಗರದ ಲಕ್ಷ್ಮಿಕಾಂತ್ ನೇತೃತ್ವದ ಕಲಾವಿದರ ತಂಡ ಕಳೆದ ಎರಡು ತಿಂಗಳಿನಿಂದ ಮೂರ್ತಿಗಳ ತಯಾರಿಕೆಯಲ್ಲಿ ತೊಡಗಿಸಿಕೊಂಡಿದೆ. ಗ್ರಾಹಕರ ಅಭಿರುಚಿಗೆ ತಕ್ಕಂತೆ ಮೂರ್ತಿಗಳನ್ನು ಸಿದ್ಧಪಡಿಸಿದ್ದಾರೆ. ಪರಿಸರದ ಬಗ್ಗೆ ಅತೀವ ಕಾಳಜಿ ಹೊಂದಿರುವ ಈ ಕಲಾವಿದರು ಗಣೇಶ ಮೂರ್ತಿಗಳ ತಯಾರಿಕೆಯಲ್ಲಿ ಜಲಮಾಲಿನ್ಯವಾಗಲಿ ಅಥವಾ ಜಲಚರಗಳಿಗೆ ತೊಂದರೆ ಉಂಟು ಮಾಡದಂತಹ ವಸ್ತುಗಳನ್ನು ಬಳಕೆ ಮಾಡುತ್ತಿರುವುದು ವಿಶೇಷವಾಗಿದೆ.

ಇದೀಗ ಕೊನೆಯ ಹಂತವಾಗಿ ಮೂರ್ತಿಗಳು ಅಕರ್ಷಕವಾಗಿ ಗ್ರಾಹಕರ ಗಮನ ಸೆಳೆಯುವ ರೀತಿಯಲ್ಲಿ ವಾಟರ್ ಪೇಯಿಂಟ್ ಮಾಡುವ ಮೂಲಕ ಮೂರ್ತಿಗಳಿಗೆ ಪಂಚೆ, ಶಲ್ಯಗಳನ್ನು ಬಳಸಿ ಅಲಂಕರಿಸಿ ಮಾರಾಟಕ್ಕೆ ಇಟ್ಟಿದ್ದಾರೆ.'

ವಿವಿಧ ಭಂಗಿಯ ಗಣಪ ಮೂರ್ತಿಗಳು 3 ರಿಂದ 12 ಅಡಿವರೆಗೆ ತಯಾರಿಸಲಾಗಿದೆ. ಇನ್ನೂ ಮೂರ್ತಿಯ ಗಾತ್ರದ ಆಧಾರದ ಮೇಲೆ ಸುಮಾರು 3 ಸಾವಿರದಿಂದ ಮೌಲ್ಯ ಆರಂಭವಾಗಲಿದೆ. ಹಬ್ಬಕ್ಕೆ ಮುಂಚಿತವಾಗಿ ಗ್ರಾಹಕರು ಇಂತಹದೇ ವಿನ್ಯಾಸದ ಮೂರ್ತಿಬೇಕೆಂದು ಕೇಳಿದರೂ ತಯಾರಿಸಿಕೊಡುತ್ತೇವೆ' ಎಂದು ಕಲಾವಿದರ ತಂಡದ ಮೂರ್ತಿ ತಯಾರಕ ಲಕ್ಷ್ಮಿಕಾಂತ್ ಹೇಳುತ್ತಾರೆ.

**ಬಡಾವಣೆಗಳಲ್ಲಿ ಸಿದ್ಧತೆ ಹಳ್ಳಿಗಳಲ್ಲಿ ಸಾಮಾನ್ಯವಾಗಿ ಇಡೀ ಗ್ರಾಮಕ್ಕೆ ಒಂದೇ ಗಣಪತಿಯನ್ನು ಪ್ರತಿಷ್ಠಾಪಿಸಲಾಗುತ್ತದೆ. ಆದರೆ ನಗರ ಪ್ರದೇಶಗಳಲ್ಲಿ ವಾರ್ಡಗಳಿಗೆ ಎರಡು ಮೂರು ಅಥವಾ ಬಡಾವಣೆ ಬೀದಿಗೆ ಒಂದು ಗಣೇಶನನ್ನು ಪ್ರತಿಷ್ಠಾಪಿಸಲಾಗುತ್ತದೆ. ನಗರದ ವಾರ್ಡ್‌ಗಳಲ್ಲಿ ಗಣೇಶ ಪ್ರತಿಷ್ಠಾಪನೆಗೆ ಪೆಂಡಲ್‌ಗಳ ನಿರ್ಮಾಣ ಹಣ ವಸೂಲಿ ಸೇರಿದಂತೆ ಕಾರ್ಯಕ್ರಮಗಳನ್ನು ವೇಳಾ ಪಟ್ಟಿಗಳನ್ನು ಗಣೇಶೋತ್ಸವ ಸಂಘಟಕರು ಸಿದ್ಧ ಮಾಡಿಕೊಳ್ಳುತ್ತಿದ್ದಾರೆ. ಮೂರ್ತಿ ಪ್ರತಿಷ್ಠಾಪಿಸಲು ಮೂರ್ತಿಗಳ ಖರೀದಿ ಜೊತೆಗೆ ಬೀದಿಗಳಲ್ಲಿ ಮಕ್ಕಳಿಂದ ಹಬ್ಬದ ಕಲೆಕ್ಷನ್ ಸಹ ಶುರುವಾಗಿದೆ.**

**2300ರಿಂದ 30 ಸಾವಿರವರೆಗೆ ಬೆಲೆ' ಅರ್ಧ ಅಡಿಯಿಂದ 13 ಅಡಿಯವರೆಗೂ ನಮ್ಮಲ್ಲಿ ಗಣಪತಿಗಳು ಇವೆ. 300ರಿಂದ 30 ಸಾವಿರವರೆಗೂ ಬೆಲೆ ಇದೆ. ವಿನ್ಯಾಸ ಗುಣಮಟ್ಟಕ್ಕೆ ತಕ್ಕಂತೆ ಬೆಲೆ ಇದೆ' ಎಂದು ಚಿಕ್ಕಬಳ್ಳಾಪುರದ ಗಣೇಶ ವ್ಯಾಪಾರಿ ಪವನ್ ತಿಳಿಸಿದರು. 10 ವರ್ಷದಿಂದ ಗಣಪತಿ ತಯಾರಿಕೆ ಕೋಲ್ಕತ್ತಾದಿಂದ ಕಳೆದ 10 ವರ್ಷದಿಂದ ಇಲ್ಲಿಗೆ ಬಂದು ಗಣಪತಿ ತಯಾರಿಸುತ್ತಿದ್ದೇವೆ. ಐದರಿಂದ 10 ಜನರು ತಂಡ ನಮ್ಮದು.**

**ಈ ಬಾರಿ ಹೊಸ ಹೊಸ ಡಿಸೈನ್ ಗಣೇಶಗಳು ಇವೆ. 80 ಮೂರ್ತಿಗಳನ್ನು ಮಾಡಿದ್ದೇವೆ ಎಂದು ಕೋಲ್ಕತ್ತದ ಲಕ್ಷ್ಮಿಕಾಂತ್ ತಿಳಿಸಿದರು.**


**ಉದಯವಾಹಿನಿ**

**ಪ್ರಾದೇಶಿಕ**

ಸೋಮವಾರ 25 ಆಗಸ್ಟ್ 2025




## ಮಿನಿ ನ್ಯೂಸ್

### ಜರ್ಮನಿಯಲ್ಲಿ ಜಿ-ಸಿಎಪಿ ಸಭೆ; ಸಂಸದ ಸುಧಾಕರ್ ಭಾಗಿ

• **ಉದಯವಾಹಿನಿ, ಚಿಕ್ಕಬಳ್ಳಾಪುರ**

ಜರ್ಮನಿಯ ಬಾನ್‌ನಲ್ಲಿ ಅ.24 ರಿಂದ 29 ರವರೆಗೆ ನಡೆಯಲಿರುವ ಪ್ರತಿಷ್ಠಿತ ಗ್ಲೋಬಲ್ ಚೇಂಜ್ ಮೇಕರ್ ಅಕಾಡೆಮಿ ಫಾರ್ ಪಾರ್ಲಿಮೆಂಟೇರಿಯನ್ಸ್ (ಜಿ-ಸಿಎಪಿ) ಸಮಾವೇಶದಲ್ಲಿ ಸಂಸದ ಡಾ.ಕೆ.ಸುಧಾಕರ್ ಪಾಲ್ಗೊಳ್ಳಲಿದ್ದಾರೆ.

ಯುನೈಟೆಡ್ ನೇಷನ್ಸ್ ಸಿಸ್ಟಮ್ ಸ್ಟಾಫ್ ಕಾಲೇಜು. ಯುನೈಟೆಡ್ ನೇಷನ್ಸ್ ಕನ್ವೆನ್ಷನ್ ಟು ಕಾಂಬ್ಯಾಟ್ ಡೆಸರ್ಟಿಫಿಕೇಶನ್ (ಯುಎನ್ ಸಿಸಿಡಿ) ಮತ್ತು ಜಿ-20 ಗ್ಲೋಬಲ್ ಲ್ಯಾಂಡ್ ಇನಿಶಿಯೇಟಿವ್ ಆಶ್ರಯದಲ್ಲಿ ಈ ಜಾಗತಿಕ ಸಮಾವೇಶ ಆಯೋಜಿಸಲಾಗಿದೆ. ಇಲ್ಲಿ ವಿವಿಧ ದೇಶಗಳ ಕಾನೂನು ರೂಪಿಸುವವರನ್ನು ಒಂದುಗೂಡಿಸಲಿದೆ. ಸುಸ್ಥಿರ ಅಭಿವೃದ್ಧಿ, ಭೂ ರಕ್ಷಣೆ, ಹವಾಮಾನ ನಿರ್ವಹಣೆ ಮತ್ತು ನೀತಿಗಳ ಅವಿಷ್ಕಾರದಂತಹ ವಿಷಯಗಳ ಕುರಿತು ಚರ್ಚೆಯಾಗಲಿದೆ. ಪರಿಸರ ಸಂರಕ್ಷಣೆ, ಆರೋಗ್ಯ ಕ್ಷೇತ್ರದಲ್ಲಿ ಸುಧಾರಣೆ, ಗ್ರಾಮೀಣಾಭಿವೃದ್ಧಿ ಮತ್ತು ಸುಸ್ಥಿರ ಕೃಷಿಯಂತಹ ಕ್ಷೇತ್ರಗಳಿಗೆ ನೀಡಿರುವ ಕೊಡುಗೆಗಳನ್ನು ಪರಿಗಣಿಸಿ ಸಂಸದ ಡಾ.ಕೆ.ಸುಧಾಕರ್ ಅವರನ್ನು ಈ ಅಂತರರಾಷ್ಟ್ರೀಯ ಸಮಾವೇಶಕ್ಕೆ ಆಹ್ವಾನಿಸಲಾಗಿದೆ.

ಡಾ.ಕೆ.ಸುಧಾಕರ್ ಅವರು. ಈ ಆಹ್ವಾನ ಪಡೆದ ಭಾರತದ ಏಕೈಕ ಸಂಸದರಾಗಿದ್ದಾರೆ. ಜಾಗತಿಕ ವೇದಿಕೆಯಲ್ಲಿ ಭಾರತವನ್ನು ಪ್ರತಿನಿಧಿಸುವುದು ಬಹಳ ಹೆಮ್ಮೆಯ ಸಂಗತಿ. ಪ್ರಧಾನಿ ಮೋದಿ ಅವರ ನಾಯಕತ್ವದಲ್ಲಿ, ಭಾರತವು ಹವಾಮಾನ ನಿರ್ವಹಣೆ, ಭೂ ರಕ್ಷಣೆ ಮತ್ತು ಸುಸ್ಥಿರ ಅಭಿವೃದ್ಧಿ ವಿಷಯ ಗಳಲ್ಲಿ ಮಹತ್ವಕಾಂಕ್ಷೆಯ ಗುರಿಗಳನ್ನು ಹೊಂದಿದೆ' ಎಂದು ಡಾ.ಕೆ.ಸುಧಾಕರ್ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

### ಧರ್ಮಸ್ಥಳ ಪ್ರಕರಣ: ತನಿಖೆಯ ಪ್ರಾರಂಭಿಕ ಹಂತದಲ್ಲಿ ಎಲ್ಲರೂ ಎಡವಿದ್ದಾರೆ

• **ಉದಯವಾಹಿನಿ, ತುಮಕೂರು**

ಧರ್ಮಸ್ಥಳದ ಅನಾಮಿಕ ತಲೆಬುರುಡೆ ತಂದುಕೊಟ್ಟ ತಕ್ಷಣ ಆತನ ಬಗ್ಗೆ ಪೂರ್ವಪರ ವಿಚಾರಿಸದೆ, 164 ಹೇಳಿಕೆ ಪಡೆದು ಎಸ್‌ಐಟಿ ರಚಿಸಲಾಯಿತು. ತನಿಖೆಯ ಪ್ರಾರಂಭಿಕ ಹಂತದಲ್ಲಿ ಎಲ್ಲರೂ ಎಡವಿದ್ದಾರೆ ಎಂದು ಮಾಜಿ ಸಚಿವ ಕೆ.ಎನ್.ರಾಜಣ್ಣ ಹೇಳಿದರು. ನಗರದಲ್ಲಿ ಭಾನುವಾರ ಸುದ್ದಿಗಾರರ ಜತೆ ಮಾತನಾಡಿದ ಅವರು, ಎಲ್ಲಿಂದ ಬುರುಡೆ ತಂದಿದ್ದರು.

ಕಾನೂನು ಪ್ರಕಾರವೇ ಗುಂಡಿಯಿಂದ ಬುರುಡೆ ಹೊರ ತೆಗೆಯಲಾಗಿದೆಯೇ? ಎಂಬು ವುದನ್ನು ಪರಿಶೀಲಿಸಿದ್ದರೆ ಇಷ್ಟೆಲ್ಲಾ ರಾದ್ಧಾಂತ ಆಗುತ್ತಿರಲಿಲ್ಲ'. ಧರ್ಮಸ್ಥಳಕ್ಕೆ ಅಪಕೀರ್ತಿ ತರುವ ಪ್ರಯತ್ನ ನಡೆಯಿತು. ಕೆಲ ಏಜೆನ್ಸಿಗಳು ವಿನಾಕಾರಣ ಈ ವಿಚಾರವನ್ನು ಬಹಳ ದೊಡ್ಡಮಟ್ಟಕ್ಕೆ ತೆಗೆದುಕೊಂಡು ಹೋದವು. ಕಂಡಲ್ಲಿ ಗುಂಡಿ ತೆಗೆದು ಅಲ್ಲಿನ ನಿವಾಸಿಗಳಿಗೆ ತೊಂದರೆ ನೀಡಲಾಯಿತು. ಪ್ರಾರಂಭದಲ್ಲಿ ಸಾಮಾನ್ಯ ಜ್ಞಾನ ಬಳಸಿದ್ದರೆ ಇದೆಲ್ಲ ಆಗುತ್ತಿರಲಿಲ್ಲ' ಎಂದರು.

### ಗುಡುಗು ಸಹಿತ ಬಿರುಸಿನ ಮಳೆ

• **ಉದಯವಾಹಿನಿ, ಕೋಲಾರ**

ನಗರ ಹಾಗೂ ಗ್ರಾಮಾಂತರ ಭಾಗದ ವಿವಿಧೆಡೆ ರಾತ್ರಿ ಬಿರುಸಿನ ಮಳೆಯಾಗಿದೆ. ಬೆಳಿಗ್ಗೆಯಿಂದ ಬಿಸಿಲಿನ ವಾತಾವರಣವಿತ್ತು. ಆದರೆ, ಸಂಜೆ ವೇಳೆಗೆ ಮೋಡ ಕವಿಯಿತು.

ಸುಮಾರು 7 ಗಂಟೆಗೆ ಮಳೆ ಆರಂಭವಾಯಿತು. ಜೊತೆಗೆ ಗುಡುಗು ಸಿಡಿಲಿನ ಅಬ್ಬರವೂ ಇತ್ತು. ತಡ ರಾತ್ರಿವರೆಗೆ ಮಳೆ ಬರುತ್ತಲೇ ಇತ್ತು. ಹಲವು ಬಡಾವಣೆಗಳಲ್ಲಿ ಗುಂಡಿಗಳಲ್ಲಿ ನೀರು ತುಂಬಿದ್ದು, ಕೆಸರು ಗದ್ದೆಯಾಗಿವೆ. ಪ್ರಮುಖ ರಸ್ತೆಗಳ ಗುಂಡಿಗಳಲ್ಲಿ ನೀರು ತುಂಬಿಕೊಂಡು, ವಾಹನ ಸವಾರರು ಪರದಾಡಿದರು.

### ಮಾದೇಶ್ವರ ಸ್ವಾಮಿಗೆ ಅಮಾವಾಸ್ಯೆಯ ವಿಶೇಷ ಪೂಜೆ, ಕುಂಭಾಭಿಷೇಕ



• **ಉದಯವಾಹಿನಿ, ಮಹದೇಶ್ವರ ಬೆಟ್ಟ**

ಇಲ್ಲಿನ ಮಲೆ ಮಹದೇಶ್ವರ ಸ್ವಾಮಿಗೆ ಬೆನಕನ ಅಮಾವಾಸ್ಯೆಯ ಪ್ರಯುಕ್ತ ವಿಜೃಂಭಣೆಯ ಕುಂಭಾಭಿಷೇಕ ಹಾಗೂ ವಿಶೇಷ ಪೂಜೆ ನೆರವೇರಿತು. ಬೇಡಗಂಪಣ ಸರದಿ ಅರ್ಚಕರು ನುಸುಕಿನ ವೇಳೆಯಲ್ಲಿ ಮಾದೇಶ್ವರ ಸ್ವಾಮಿಗೆ ವಿಶೇಷ ಅಲಂಕಾರ ಮಾಡಿ ಗಂದಾಭಿಷೇಕ, ಪುಷ್ಪಭಿಷೇಕ, ಮಹಾ ಮಂಗಳಾರತಿ ಸೇವೆಯನ್ನು ನೆರವೇರಿಸಿದ ಬಳಿಕ ಭಕ್ತರ ದರ್ಶನಕ್ಕೆ ಅನುವು ಮಾಡಿಕೊಡಲಾಯಿತು.

ಬೇಡಗಂಪಣ ಸಮುದಾಯದ 101 ಅರ್ಚಕರು ಶ್ರಾವಣ ಮಾಸದ ಮೊದಲ ಕುಂಬಾಭಿಷೇಕ ನೆರವೇರಿತು.

ಮಹದೇಶ್ವರ ಸ್ವಾಮಿಯ ಸನ್ನಿಧಿಯಲ್ಲಿ ಶ್ರಾವಣ ಮಾಸದ ಕೊನೆಯ ದಿನ ಮಾದೇಶ್ವರ ಸ್ವಾಮಿಗೆ ಕುಂಭಾಭಿಷೇಕ ನೆರವೇರಿಸುವುದು ಹಿಂದಿನಿಂದ ವಾಡಿಕೆಯಾಗಿ ಬಂದಿದೆ. ಬೇಡಗಂಪಣ ಸಮುದಾಯದ 101 ಅರ್ಚಕರು ಉಪ ವಾಸವಿದ್ದು, ಮಜ್ಜನದ ಬಾವಿ ಬಳಿ ಬಿಂದಿಗೆಗಳನ್ನು ಒಂದೆಡೆ ಇರಿಸಿ, ಜೊತೆಯಲ್ಲಿ ಎಳನೀರನ್ನು ಒಂದೆಡೆ ಇರಿಸಿ. ಮಂತ್ರ ಘೋಷ ಸಮೇತ ಪೂಜೆ ನೆರವೇರಿಸಿದರು. ನಂತರ ಮಜ್ಜನರ ಬಾವಿಗೆ ಗಂಗಾ ಪೂಜೆ ನೆರವೇರಿಸಿ. 101 ಬಿಂದಿಗೆಗೂ ಜಲ ತುಂಬಿಸಿದರು. ಬಳಿಕ ಅಲ್ಲಿಂದ ಛತ್ರಿ ಚಾಮರಗಳನ್ನು ಒಳಗೊಂಡು, ಮಂಗಳ ವಾದ್ಯಗಳ ಸಮೇತ ಮೆರವಣಿಗೆಯಲ್ಲಿ ಎಳನೀರು ಹಾಗೂ ಜಲವನ್ನು ಹೊತ್ತು ತಂದು. ದೇವಾಲಯದ ಹೊರ ಆವರಣದಲ್ಲಿ ಪ್ರದಕ್ಷಿಣೆ ಹಾಕಿ, ದೇವಾಲಯದ ಒಳಭಾಗದಲ್ಲಿ ಒಂದೆಡೆ ಇರಿಸಿದರು. ಮತ್ತೆ ಪೂಜೆ ನೆರವೇರಿಸಿದ ಬಳಿಕ ಮಾದೇಶ್ವರ ಸ್ವಾಮಿಗೆ ಎಳನೀರು ಅಭಿಷೇಕ ಹಾಗೂ ಜಲಾಭಿಷೇಕ ಮಾಡಲಾಯಿತು. ಶ್ರಾವಣ ಮಾಸದ ಮೊದಲನೇ ದಿನ ಹಾಗೂ ಶ್ರಾವಣ ಮಾಸದ ಕೊನೆಯ ದಿನ ಈ ಕುಂಭಾಭಿಷೇಕ ನಡೆಯುತ್ತದೆ. ಈ ಒಂದು ತಿಂಗಳು ಮಾದೇಶ್ವರ ಸ್ವಾಮಿಗೆ ತ್ರಿಕಾಲ ಪೂಜೆಯೂ ನಡೆಯುತ್ತದೆ.

ಅಂತರಾಳದಿಂದ.. EDITORIAL

# ಮೈಕ್ರೋ ಫೈನಾನ್ಸ್ ಸಾಲ, ಆತ್ಮಹತ್ಯೆ: ಪರಿಹಾರ ಸಮಸ್ಯೆ ಪರಿಹರಿಸುವುದೇ?



ಈ ಸಂದರ್ಭದಲ್ಲಿ ಬೆಳೆ ನಷ್ಟದ ಕಾರಣದಿಂದ ಆತ್ಮಹತ್ಯೆ ಮಾಡಿಕೊಂಡಿರುವ ಬಗ್ಗೆ ಅನುಮಾನಗಳಿರುವ ಪ್ರಕರಣಗಳಲ್ಲಿ ಪರಿಹಾರವನ್ನು ತಡೆಹಿಡಿದ ಉದಾಹರಣೆಗಳೂ ಇವೆ. ರೈತ ವೈಯಕ್ತಿಕ ಕಾರಣಗಳಿಗಾಗಿ ಆತ್ಮಹತ್ಯೆ ಮಾಡಿಕೊಂಡಿದ್ದಾನೆಯೋ ಅಥವಾ ಬೆಳೆ ನಷ್ಟ ಕಾರಣದಿಂದ ಆತ್ಮಹತ್ಯೆ ಮಾಡಿಕೊಂಡಿದ್ದಾನೆಯೋ ಎನ್ನುವುದನ್ನು ಸಾಬೀತು ಮಾಡಿದ ಬಳಿಕ ಪರಿಹಾರ ವಿತರಿಸಲಾಗುತ್ತದೆ. ಕೆಲವೊಮ್ಮೆ ರೈತ ಕುಡಿತದ ಚಟದಿಂದ ಅಥವಾ ಇನ್ನಿತರ ಕಾರಣಗಳಿಂದ ಆರ್ಥಿಕ, ಮಾನಸಿಕ ಸಮಸ್ಯೆಗಳನ್ನು ಎದುರಿಸಿ ಆತ್ಮಹತ್ಯೆ ಮಾಡುವುದಿದೆ. ಆಗ ಪರಿಹಾರವನ್ನು ತಡೆ ಹಿಡಿಯಲಾಗುತ್ತದೆ. ಈ ಪರಿಹಾರವನ್ನು ನೀಡುವುದಕ್ಕೆ ಕೃಷಿಯ ಮೇಲಿನ ಕಾಳಜಿಯೇ ಮುಖ್ಯ ಕಾರಣ.


**ಮೈಕ್ರೋ ಫೈನಾನ್ಸಿಯರ್‌ಗಳ ಕಾಟದಿಂದ ಮೃತಪಟ್ಟ ಅಥವಾ ಆತ್ಮಹತ್ಯೆ ಮಾಡಿಕೊಂಡ ಕುಟುಂಬಗಳಿಗೆ 5 ಲಕ್ಷ ರೂಪಾಯಿ ಪರಿಹಾರ ನೀಡುವುದಾಗಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಘೋಷಿಸಿದ್ದಾರೆ. ಮೇಲ್ನೋಟಕ್ಕೆ ಈ ಕೊಡುಗೆ ಸಂತ್ರಸ್ತ ಕುಟುಂಬಗಳಿಗೆ ಸರಕಾರ ನೀಡುವ ಸಾಂತ್ವನದಂತೆ ಕಂಡರೂ, ಪರೋಕ್ಷವಾಗಿ ಇದು ಸಮಸ್ಯೆಯನ್ನು ಪರಿಹರಿಸದೆ ಇನ್ನಷ್ಟು ಬಿಗಡಾಯಿಸಬಹುದು ಎಂದು ತಜ್ಞರು ಅಭಿಪ್ರಾಯಪಡುತ್ತಿದ್ದಾರೆ. ಈಗಾಗಲೇ ಸಾಲ ತೀರಿಸಲಾಗದೆ ಆತ್ಮಹತ್ಯೆಗೈಯುತ್ತಿರುವ ರೈತರಿಗೆ ಸರಕಾರ ಪರಿಹಾರವನ್ನು ನೀಡುತ್ತಾ ಬರುತ್ತಿದೆ.**

ಇಂದಿನ ಸಂದರ್ಭದಲ್ಲಿ ಕೃಷಿ ಎದುರಿಸುವ ಸವಾಲುಗಳಿಗೆ ರೈತ ಬಲಿಪಶುವಾಗಬಾರದು ಎನ್ನುವ ಕಾರಣದಿಂದ ರೈತನ ಸಂಕಟಗಳಿಗೆ ಸರಕಾರ ಸ್ಪಂದಿಸಲು ಮುಂದಾಗುತ್ತದೆ. ಆದರೆ ಮೈಕ್ರೋ ಫೈನಾನ್ಸಿಯರ್‌ಗಳ ಕಾಟದಿಂದ ಆತ್ಮಹತ್ಯೆ ಪ್ರಕರಣ ಭಿನ್ನವಾದುದು. ಮೈಕ್ರೋ ಫೈನಾನ್ಸ್‌ಗಳು ಸಾಲಕೊಟ್ಟು ಅದರ ಮೇಲೆ ಅತಿ ಬಡ್ಡಿ ಚಕ್ರಬಡ್ಡಿಗಳನ್ನು ವಿಧಿಸುತ್ತಿರುವುದು ಮಾಧ್ಯಮಗಳಲ್ಲಿ ಸುದ್ದಿಯಾಗುತ್ತಲೇ ಇವೆ.

ಇಂತಹ ಫೈನಾನ್ಸ್‌ಗಳ ನಿಯಂತ್ರಣ ಬಹುತೇಕ ಅಪರಾಧ ಹಿನ್ನೆಲೆಯಿರುವ ಜನರ ಕೈಯಲ್ಲಿರುತ್ತವೆ. ಸಾಲ ವಸೂಲಿಗಾಗಿಯೇ ಇವರು ರೌಡಿಗಳನ್ನು ಕ್ರಿಮಿನಲ್ ಹಿನ್ನೆಲೆಯಿರುವವರನ್ನು ಸಾಕುತ್ತಿರುತ್ತಾರೆ. ರೈತರೇನಾದರೂ ಇಂತಹ ಮೈಕ್ರೋ ಫೈನಾನ್ಸ್ ಬಲೆಗೆ ಬಿದ್ದರೆ ಅದರಿಂದ ಬಿಡುಗಡೆ ಕಷ್ಟ ಜೀವ ಬೆದರಿಕೆ, ಮಾನ ಹಾನಿ ಇತ್ಯಾದಿಗಳಿಗೆ ಅಂಜಿ ಆತ್ಮಹತ್ಯೆಯನ್ನೇ ಅಂತಿಮ ಆಯ್ಕೆಯಾಗಿಸಿಕೊಳ್ಳುತ್ತಾರೆ.

ಇತ್ತೀಚಿನ ದಿನಗಳಲ್ಲಿ ಮೈಕ್ರೋ ಫೈನಾನ್ಸ್ ಕಿರುಕುಳದ ಬಗ್ಗೆ ತೀವ್ರ ಆಕ್ರೋಶ ಕೇಳಿ ಬಂದ ಹಿನ್ನೆಲೆಯಲ್ಲಿ ಇದರ ವಿರುದ್ಧ ರಾಜ್ಯ ಸರಕಾರವು ಕರ್ನಾಟಕ ಕಿರು ಸಾಲ ಮತ್ತು ಸಣ್ಣ ಸಾಲ ಅಧ್ಯಾದೇಶವನ್ನು ಹೊರಡಿಸಿತು. ಈ ಸುಗ್ರೀವಾಜ್ಞೆಯು ರಿಸರ್ವ್ ಬ್ಯಾಂಕ್ ನೋಂದಾಯಿತವಲ್ಲದ ಮೈಕ್ರೋ ಫೈನಾನ್ಸ್ ಸಂಸ್ಥೆಗಳಿಂದ ಜನಸಾಮಾನ್ಯರಿಗೆ ಮುಕ್ತಿ ಕೊಡುವ ಉದ್ದೇಶವನ್ನು ಹೊಂದಿದೆ. ಬಲವಂತದ ವಸೂಲಾತಿ ಕಿರುಕುಳದಿಂದ ಇದು ಜನರನ್ನು ರಕ್ಷಿಸುತ್ತದೆ. ಆರೋಪಿಗಳ ಅಪರಾಧ ಸಾಬೀತಾದರೆ 10 ವರ್ಷ ಜೈಲು, 5 ಲಕ್ಷ ರೂಪಾಯಿಯವರೆಗೆ ದಂಡವನ್ನು ವಿಧಿಸುವ ಅವಕಾಶವಿದೆ. ಸುಗ್ರೀವಾಜ್ಞೆಯ ನಿಯಮಗಳೆಲ್ಲವೂ ರಿಸರ್ವ್ ಬ್ಯಾಂಕ್ ಜೊತೆಗೆ ನೋಂದಾಯಿತವಲ್ಲದ ಮೈಕ್ರೋ ಫೈನಾನ್ಸ್‌ಗೆ ಮಾತ್ರ ಅನ್ವಯವಾಗುವುದರಿಂದ, ನೋಂದಾಯಿತ ಫೈನಾನ್ಸ್‌ಗಳಿಗೆ ಕಡಿವಾಣ ಹಾಕುವವರು ಯಾರು ಎನ್ನುವ ಪ್ರಶ್ನೆಯೂ ಏಳುತ್ತದೆ. ಎಲ್ಲಕ್ಕಿಂತ ಮುಖ್ಯವಾಗಿ ಈ ಸುಗ್ರೀವಾಜ್ಞೆ ಜಾರಿಗೊಂಡ ಬಳಿಕವೂ ಅಲ್ಲಲ್ಲಿ ಮೈಕ್ರೋ ಫೈನಾನ್ಸ್‌ನ ಸಾಲಗಳನ್ನು ಕಟ್ಟಲಾಗದೆ ಆತ್ಮಹತ್ಯೆ ಮಾಡಿಕೊಳ್ಳುತ್ತಿರುವುದು ವರದಿಯಾಗುತ್ತಿವೆ. ಈ ಹಿನ್ನೆಲೆಯಲ್ಲಿ ಸರಕಾರ ನೀಡುವ ಪರಿಹಾರ ಆತ್ಮಹತ್ಯೆಯನ್ನು ತಡೆಯಲು ಯಾವ ರೀತಿಯಲ್ಲಿ ಸಹಕಾರ ನೀಡಬಹುದು ಎನ್ನುವುದು ಚರ್ಚೆಯ ವಿಷಯವಾಗಬೇಕು. ಕೇಂದ್ರ ಮತ್ತು ರಾಜ್ಯ ಸರಕಾರಗಳಿಂದ ನೋಂದಾಯಿತ ಮೈಕ್ರೋ ಫೈನಾನ್ಸ್ ಸಂಸ್ಥೆಗಳಿಂದ ಅಂದಾಜು 60 ಸಾವಿರ ಕೋಟಿ ರೂ ಸುಮಾರು 1.09 ಕೋಟಿ ಸಾಲಗಾರರು ಪಡೆದಿದ್ದಾರೆ ಎನ್ನಲಾಗುತ್ತದೆ. ಇದೇ ಸಂದರ್ಭದಲ್ಲಿ ನೋಂದಣಿಯಾಗದ ಸಂಸ್ಥೆಗಳಿಂದ ಸಾಲ ಪಡೆದವರ ಮಾಹಿತಿ, ವಿವರ ಸ್ಪಷ್ಟವಾಗಿ ಇಲ್ಲವಾದರೂ, 40,000 ಕೋಟಿ ರೂಪಾಯಿ ಸಾಲಗಳನ್ನು ಪಡೆದಿದ್ದಾರೆ ಎಂದು ಅಂದಾಜು ಮಾಡಲಾಗಿದೆ. ಇಲ್ಲಿ ಮೈಕ್ರೋ ಫೈನಾನ್ಸ್ ಅತ್ಯಧಿಕ ಬಡ್ಡಿಯನ್ನು ವಿಧಿಸುತ್ತದೆ ಎನ್ನುವುದು ಗೊತ್ತಿದ್ದೂ ಜನರು ಯಾಕೆ ಇಲ್ಲಿಂದ ಸಾಲ ಪಡೆಯುತ್ತಾರೆ ಯಾಕೆ ಅವರ ಬಲೆಗೆ ಬೀಳುತ್ತಾರೆ ಎನ್ನುವುದು ಬಹುಮುಖ್ಯ ಪ್ರಶ್ನೆ. ಕೃಷಿಕರು ಸಹಕಾರಿ ಸಂಘ ಮತ್ತು ಇನ್ನಿತರ ಸಣ್ಣ ಪುಟ್ಟ ಬ್ಯಾಂಕ್‌ಗಳಲ್ಲಿ ಸುಲಭದಲ್ಲಿ ಸಾಲ ಸಿಗುವುದಾದರೆ ಖಂಡಿತವಾಗಿಯೂ ಫೈನಾನ್ಸ್ ಬಾಗಿಲನ್ನು ತಟ್ಟುವುದಿಲ್ಲ. ಬ್ಯಾಂಕ್‌ಗಳಲ್ಲಿ ಸಾಲ ಪಡೆಯಬೇಕಾದರೆ ಹತ್ತು ಹಲವು ನಿಯಮಗಳು, ನಿಬಂಧನೆಗಳನ್ನು ದಾಟಿ ಹೋಗಬೇಕು.

# ರಾತ್ರಿ ಊಟ ಮಾಡಿ ಮಲಗಿದ ಬಳಿಕ ಮಧುಮೇಹ ಕಾಯಿಲೆಯ ಲಕ್ಷಣಗಳಿವು, ಲೈಟಾಗಿ ತಗೋಬೇಡಿ!



ರಕ್ತದಲ್ಲಿನ ಸಕ್ಕರೆ ಮಟ್ಟ ಹೆಚ್ಚಾಗಲು ಯಾವುದೇ ನಿರ್ದಿಷ್ಟ ಸಮಯವಿಲ್ಲ! ರಾತ್ರಿಯ ಸಮಯದಲ್ಲಿಯೂ ಕೂಡ ಇದರ ರೋಗಲಕ್ಷಣಗಳು ಕಾಣಿಸಿಕೊಳ್ಳಬಹುದು, ಇಂದಿನ ಲೇಖನದಲ್ಲಿ, ರಕ್ತದಲ್ಲಿನ ಸಕ್ಕರೆ ಹೆಚ್ಚಳದಿಂದಾಗಿ ರಾತ್ರಿಯಲ್ಲಿ ಕಂಡುಬರುವ ರೋಗಲಕ್ಷಣಗಳು ಯಾವುದು ಎನ್ನುವುದನ್ನು ನೋಡೋಣ

ರಕ್ತದೊತ್ತಡ ಅಥವಾ ಬಿಪಿ ಕಾಯಿಲೆಗೆ ಹೋಲಿಸಿದರೆ ಮಧುಮೇಹ ಸ್ವಲ್ಪ ಅಪಾಯಕಾರಿ ಕಾಯಿಲೆ ಎನ್ನಬಹುದು! ಈ ಕಾಯಿಲೆಯ ಬಗ್ಗೆ ಹೇಳುವುದಾದರೆ ಆರೋಗ್ಯಕರವಾಗಿ ಹಾಗೂ ಸರಿಯಾದ ಜೀವನಶೈಲಿಯನ್ನು, (ದಿನನಿತ್ಯದ ಆಹಾರಪದ್ಧತಿಯನ್ನು ಸೇರಿಸಿ) ಅಭ್ಯಾಸ ಮಾಡಿಕೊಂಡು ಹೋಗುವ ಜನರಲ್ಲಿ ಹತ್ತಿರನೂ ಸುಳಿಯುವುದಿಲ್ಲ.

ಆದರೆ ಅನಾರೋಗ್ಯ ಆಹಾರ ಪದ್ಧತಿ ಮತ್ತು ಜಡ ಜೀವನಶೈಲಿ ಅನುಸರಿಸಿ ಕೊಂಡು ಹೋಗುವ ಜನರಲ್ಲಿ ಒಮ್ಮೆ ಸಕ್ಕರೆ ಕಾಯಿಲೆಯ ರೂಪದಲ್ಲಿ ಕಾಣಿಸಿಕೊಂಡರೆ ಆಬಳಿಕ ಸಾಯುವವರೆಗೂ ಹೋಗುವುದಿಲ್ಲ! ಕೊನೆಗೆ ಈ ಕಾಯಿಲೆಯ ಜೊತೆಗೆಯೇ ಜೀವನ ನಡೆಸುವ ಪರಿಸ್ಥಿತಿ ಬಂದೊದಗುತ್ತದೆ. ಪ್ರಸ್ತುತ ಇಂದಿನ ಲೇಖನದಲ್ಲಿ ರಾತ್ರಿ ಸಮಯದಲ್ಲಿ ಮಧುಮೇಹ ಕಾಯಿಲೆಯ ಕೆಲವೊಂದು ರೋಗಲಕ್ಷಣಗಳ ಬಗ್ಗೆ ಮಾಹಿತಿಯನ್ನು ಹಂಚಿಕೊಂಡಿದ್ದೇವೆ.

**ರಾತ್ರಿಯಲ್ಲಿ ಆಗಾಗ್ಗೆ ಮೂತ್ರ ವಿಸರ್ಜನೆಗೆ ಅರ್ಜೆಂಟಾಗುವುದು! :** ರಕ್ತದಲ್ಲಿನ ಸಕ್ಕರೆ ಮಟ್ಟ ಹೆಚ್ಚಾದಾಗ, ಮೂತ್ರಪಿಂಡಗಳು ಮೂತ್ರದ ಮೂಲಕ ಹೆಚ್ಚುವರಿ ಗ್ಲೂಕೋಸ್ ಅನ್ನು ಹೊರಹಾಕಲು ಪ್ರಯತ್ನಿಸುತ್ತವೆ. ರಾತ್ರಿಯಲ್ಲಿ ಆಗಾಗ್ಗೆ ಮೂತ್ರ ವಿಸರ್ಜನೆ ಮಾಡುವುದು ಮಧುಮೇಹದ ಪ್ರಮುಖ ಲಕ್ಷಣವಾಗಿದೆ.

**ಮಧುಮೇಹದ ಲಕ್ಷಣಗಳು ರಾತ್ರಿಯಲ್ಲಿ ಏಕೆ ಕಾಣಿಸಿಕೊಳ್ಳುತ್ತವೆ**

**ನಾವು ನಿದ್ದೆ ಮಾಡುವಾಗ, ನಮ್ಮ ದೇಹವು ವಿಶ್ರಾಂತಿ ಪಡೆಯುತ್ತದೆ ಮತ್ತು ಹಾರ್ಮೋನುಗಳ ಮಟ್ಟಗಳು ಬದಲಾಗುತ್ತಲೇ ಇರುತ್ತವೆ. ಒಂದು ವೇಳೆ ಮಧುಮೇಹ ಕಾಣಿಸಿಕೊಂಡರೆ, ದೇಹವು ಸರಿಯಾದ ಪ್ರಮಾಣದ ಇನ್ಸುಲಿನ್ ಅನ್ನು ಪಡೆಯುವುದಿಲ್ಲ ಅಥವಾ ಅದನ್ನು ಸರಿಯಾಗಿ ಬಳಸಲು ಸಾಧ್ಯವಾಗುವುದಿಲ್ಲ. ಅದಕ್ಕಾಗಿಯೇ ರಾತ್ರಿಯಲ್ಲಿ ರಕ್ತದಲ್ಲಿನ ಸಕ್ಕರೆ ಮಟ್ಟವು ಇದ್ದಕ್ಕಿದ್ದಂತೆ ಏರಬಹುದು ಅಥವಾ ಕಡಿಮೆಯಾಗಬಹುದು.**

**ಅತಿಯಾದ ಬಾಯಾರಿಕೆ :** ಪದೇ ಪದೇ ಮೂತ್ರ ವಿಸರ್ಜನೆ ಮಾಡುವುದರಿಂದ ದೇಹದಲ್ಲಿ ನೀರಿನ ಕೊರತೆ ಉಂಟಾಗುತ್ತದೆ, ಇದು ಅತಿಯಾದ ಬಾಯಾರಿಕೆಗೆ ಕಾರಣವಾಗುತ್ತದೆ. ರಾತ್ರಿಯೂ ಸಹ ಪದೇ ಪದೇ ನೀರು ಕುಡಿಯುವ ಬಯಕೆ ಮಧುಮೇಹದ ಲಕ್ಷಣವಾಗಿರಬಹುದು.

**ಆಯಾಸ ಮತ್ತು ನಿಶ್ಯಕ್ತಿ:** ಅಧಿಕ ರಕ್ತದ ಸಕ್ಕರೆ ಮಟ್ಟವು ಜೀವಕೋಶಗಳಿಗೆ ಸಾಕಷ್ಟು ಶಕ್ತಿಯನ್ನು ಒದಗಿಸುವುದಿಲ್ಲ, ಇದು ಆಯಾಸ ಮತ್ತು ನಿಶ್ಯಕ್ತಿಗೆ ಕಾರಣವಾಗುತ್ತದೆ. ರಾತ್ರಿಯ ಉತ್ತಮ ನಿದ್ರೆಯ ನಂತರವೂ ಬೆಳಗ್ಗೆ ದಣಿದಂತೆ ಎಚ್ಚರಗೊಳ್ಳುವುದು ಮಧುಮೇಹದ ಸಂಕೇತವಾಗಿರಬಹುದು.

**ದೇಹದ ತೂಕ ಕಡಿಮೆ ಆಗುವುದು :** ಮಧುಮೇಹದಲ್ಲಿ, ದೇಹವು ಗ್ಲೂಕೋಸ್ ಅನ್ನು ಶಕ್ತಿಯನ್ನಾಗಿ ಪರಿವರ್ತಿಸಲು ಸಾಧ್ಯವಾಗುವುದಿಲ್ಲ. ಇದರಿಂದಾಗಿ, ದೇಹವು ಶಕ್ತಿಗಾಗಿ ಕೊಬ್ಬನ್ನು ಸುಡಲು ಪ್ರಾರಂಭಿಸುತ್ತದೆ, ಇದು ತೂಕ ಇಳಿಕೆಗೆ ಕಾರಣವಾಗಬಹುದು.

**ಹೈಪೊಗ್ಲಿಸಿಮಿಯಾ:** ಕಡಿಮೆ ರಕ್ತದ ಸಕ್ಕರೆ ಮಟ್ಟಗಳು ಹೈಪೊಗ್ಲಿಸಿಮಿಯಾ ರಾತ್ರಿ ಬೆವರುವಿಕೆಗೆ ಕಾರಣವಾಗಬಹುದು. ಇತರ ಲಕ್ಷಣಗಳು ನಡುಕ, ತ್ವರಿತ ಹೃದಯ ಬಡಿತ, ಭ್ರಮೆಗಳನ್ನು ಒಳಗೊಂಡಿರಬಹುದು.

**ದೃಷ್ಟಿ ಮಂದವಾಗುವುದು :** ಅಧಿಕ ರಕ್ತದ ಸಕ್ಕರೆ ಮಟ್ಟಗಳು ಕಣ್ಣಿನ ಮಸೂರ ಮತ್ತು ರೆಟಿನಾವನ್ನು ಹಾನಿಗೊಳಿಸಬಹುದು, ಇದು ದೃಷ್ಟಿ ಮಂದವಾಗುವಂತಹ ಸಮಸ್ಯೆಗಳನ್ನು ಉಂಟುಮಾಡುತ್ತದೆ.

**ರೆಸ್ಟ್‌ಲೆಸ್ ಲೆಗ್ಸ್ ಸಿಂಡ್ರೋಮ್:** ಮಧುಮೇಹ ಇರುವವರು ರೆಸ್ಟ್‌ಲೆಸ್ ಲೆಗ್ಸ್ ಸಿಂಡ್ರೋಮ್‌ಗೆ ಒಳಗಾಗುವ ಅಪಾಯವನ್ನು ಹೆಚ್ಚಿಸಬಹುದು, ಈ ಸ್ಥಿತಿಯು ವಿಶೇಷವಾಗಿ ರಾತ್ರಿಯಲ್ಲಿ ಕಾಲುಗಳನ್ನು ಚಲಿಸಲು ತೀವ್ರವಾದ ಪ್ರಚೋದನೆಯನ್ನು ಉಂಟುಮಾಡುತ್ತದೆ. ಇದು ನಿದ್ರಿಸಲು ಮತ್ತು ನಿದ್ರಿಸಲು ಕಷ್ಟವಾಗ ಬಹುದು.

# ಕಿಡ್ನಿ ,ಲಿವರ್‌ನಲ್ಲಿ ಜಮೆಯಾಗಿರುವ ವಿಷಾಂಶ ಹೊರಹಾಕುವ ಆಯುರ್ವೇದ ಗಿಡಮೂಲಿಕೆ ಇದು

ಪುನರ್ನವವನ್ನು ಶತಮಾನಗಳಿಂದ ಆಯುರ್ವೇದ ಔಷಧದಲ್ಲಿ ಬಳಸಲಾಗುತ್ತಿದೆ. ಇದು ಆರೋಗ್ಯಕ್ಕೆ ತುಂಬಾ ಪ್ರಯೋಜನಕಾರಿ. ಯಕೃತ್ತು , ಮೂತ್ರಪಿಂಡಗಳಿಗೆ ಸಂಬಂಧಿಸಿದ ಅನೇಕ ಕಾಯಿಲೆಗಳ ಚಿಕಿತ್ಸೆಯಲ್ಲಿ ಇದನ್ನು ಬಳಸಲಾಗುತ್ತದೆ. ಆಯುರ್ವೇದದಲ್ಲಿ ಔಷಧೀಯ ಗುಣಗಳಿಂದ ತುಂಬಿರುವ ಅನೇಕ ಗಿಡಮೂಲಿಕೆಗಳು ಮತ್ತು ಸಸ್ಯಗಳಿವೆ. ಯಕೃತ್ತು ಮತ್ತು ಮೂತ್ರಪಿಂಡವನ್ನು ನಿರ್ವಿಷಗೊಳಿಸುವುದರಿಂದ ಹಿಡಿದು ಕೀಲುಗಳ ಕಾಯಿಲೆಗಳನ್ನು ಗುಣಪಡಿಸುವವರೆಗೆ, ಈ ಆಯುರ್ವೇದ ವಸ್ತುಗಳನ್ನು ದುಬಾರಿ ಔಷಧಿಗಳಲ್ಲಿ ಬಳಸಲಾಗುತ್ತದೆ, ಅವುಗಳಲ್ಲಿ ಪುನರ್ನವವು ಎನ್ನುವ ಗಿಡ ಕೂಡ ಒಂದು. ಪುನರ್ನವವು ಒಂದು ಕಾಡು ಸಸ್ಯವಾಗಿದ್ದು, ಇದು ಅನೇಕ ರೋಗಗಳಿಗೆ ಸಂಜೀವಿನಿ ಗಿಡಮೂಲಿಕೆಗಿಂತ ಕಡಿಮೆಯಿಲ್ಲ. ಈ ಸಸ್ಯವನ್ನು ಮೂತ್ರಪಿಂಡ, ಯಕೃತ್ತಿಗೆ ಸಂಬಂಧಿಸಿದ ಔಷಧಿಗಳಲ್ಲಿ ಹೆಚ್ಚಾಗಿ ಬಳಸಲಾಗುತ್ತದೆ. ಈ ಸಸ್ಯವು ಮೂತ್ರಪಿಂಡ, ಯಕೃತ್ತನ್ನು ನಿರ್ವಿಷಗೊಳಿಸುವಲ್ಲಿ ಬಹಳ ಪರಿಣಾಮಕಾರಿಯಾಗಿದೆ. ಇದರ ಜೊತೆಗೆ, ಇದರ ಬಳಕೆಯು ಇತರ ಆರೋಗ್ಯ ಪ್ರಯೋಜನಗಳನ್ನು ಸಹ ಒದಗಿಸುತ್ತದೆ. ಆದ್ದರಿಂದ, ಅದರ ಪ್ರಯೋಜನಗಳು ಮತ್ತು ಅದನ್ನು ಹೇಗೆ ಬಳಸುವುದು ಎಂಬುದರ ಕುರಿತು ತಿಳಿದುಕೊಳ್ಳೋಣ.



**ದೇಹದ ತೂಕ ಇಳಿಸಲು ನೆರವಿಗೆ ಬರುತ್ತದೆ**

**ಪುನರ್ನವ ಸೇವಿಸುವುದರಿಂದ ತೂಕ ಇಳಿಸಿಕೊಳ್ಳಲು ಸಹಾಯವಾಗುತ್ತದೆ. ಪುನರ್ನವದಲ್ಲಿ ಫೈಬರ್ ಸಮೃದ್ಧವಾಗಿದೆ. ಫೈಬರ್ ದೇಹದ ಚಯಾ ಪಚಯ ಕ್ರಿಯೆಯನ್ನು ಹೆಚ್ಚಿಸಲು ಸಹಾಯ ಮಾಡುತ್ತದೆ ಮತ್ತು ತೂಕ ಇಳಿಸಿಕೊಳ್ಳಲು ಸಹಾಯ ಮಾಡುತ್ತದೆ. ಪುನರ್ನವವು ಬೊಜ್ಜು ವಿರೋಧಿ ಗುಣಗಳನ್ನು ಹೊಂದಿದೆ ಎಂದು ವೈದ್ಯರು ಹೇಳುತ್ತಾರೆ, ಇದು ದೇಹದಿಂದ ಹೆಚ್ಚುವರಿ ಕೊಬ್ಬು ಮತ್ತು ತೂಕವನ್ನು ಕಡಿಮೆ ಮಾಡುತ್ತದೆ. ತೂಕ ಇಳಿಸಿಕೊಳ್ಳಲು ಬಯಸುವ ಜನರು ಸೀಮಿತ ಪ್ರಮಾಣದಲ್ಲಿ ಪುನರ್ನವ ವನ್ನು ಸೇವಿಸಬಹುದು.**

**ಪುನರ್ನವ ಸಸ್ಯ :** ಪುನರ್ನವವು ಔಷಧೀಯ ಸಸ್ಯವಾಗಿದ್ದು ಅಗತ್ಯ ಪೋಷಕಾಂಶ ಗಳಾದ ವಿಟಮಿನ್ ಸಿ ನಂತಹ ಜೀವಸತ್ವಗಳು ಮತ್ತು ಇತರ ಪೋಷ ಕಾಂಶಗಳಿಂದ ಸಮೃದ್ಧವಾಗಿದೆ. ಈ ಸಸ್ಯವು ಭಾರತ, ಶ್ರೀಲಂಕಾ ಮತ್ತು ದಕ್ಷಿಣ ಅಮೆರಿಕಾ ಸೇರಿದಂತೆ ಪ್ರಪಂಚದ ಅನೇಕ ಪ್ರದೇಶಗಳಲ್ಲಿ ಕಂಡುಬರುತ್ತದೆ. ಇದು ವಿಶೇಷವಾಗಿ ಮಳೆಗಾಲದಲ್ಲಿ ಕಾಡಿನಲ್ಲಿ ಬೆಳೆಯುತ್ತದೆ. ಭಾರತದಲ್ಲಿ, ಇದು ದೇಶಾದ್ಯಂತ ಕಳೆಯಾಗಿ ಕಂಡುಬರುತ್ತದೆ. ಯಕೃತ್ತು ಮತ್ತು ಮೂತ್ರಪಿಂಡಗಳನ್ನು ನಿರ್ವಿಷಗೊಳಿಸಲು ಪುನರ್ನವ ವನ್ನು ಬಳಸಲಾಗುತ್ತದೆ. ಆಯುರ್ವೇದದ ಪ್ರಕಾರ, ಯಕೃತ್ತು ಸರಿಯಾಗಿ ಕಾರ್ಯನಿರ್ವಹಿಸಲು ಸಾಧ್ಯವಾಗದಿದ್ದಾಗ, ಅದು ವಾತ-ಪಿತ್ತ-ಕಫ ದೋಷ ಗಳಲ್ಲಿ ಅಸಮತೋಲನವನ್ನು ಉಂಟುಮಾಡುತ್ತದೆ. ಪುನರ್ನವವನ್ನು ಸೇವಿಸುವುದರಿಂದ ಯಕೃತ್ತಿನ ಕೋಶಗಳಿಂದ ವಿಷ ವನ್ನು ತೆಗೆದುಹಾಕುವ ಮೂಲಕ ಯಕೃತ್ತಿನ ಕಾರ್ಯವನ್ನು ಸರಿಪಡಿಸಲು ಸಹಾಯ ಮಾಡುತ್ತದೆ. ಇದು ಶಕ್ತಿಶಾಲಿ ಮೂತ್ರ ವರ್ಧಕ ವಾಗಿದ್ದು, ದೇಹದಿಂದ ಹೆಚ್ಚುವರಿ ನೀರು ಮತ್ತು ವಿಷ ವನ್ನು ತೆಗೆದು ಹಾಕಲು ಸಹಾಯ ಮಾಡುತ್ತದೆ. ಮೂತ್ರಪಿಂಡ ಗಳನ್ನು ಸ್ವಚ್ಛವಾಗಿಡಲು ಮತ್ತು ಕಲ್ಲುಗಳಂತಹ ಸಮಸ್ಯೆಗಳನ್ನು ತಡೆಗಟ್ಟಲು ಸಹ ಇದು ಸಹಾ ಯಕವಾಗಿರುತ್ತದೆ.



**ಗ್ಯಾಸ್ಟ್ರಿಕ್ ಕೀಲು ನೋವು ಹೊಟ್ಟೆ ನೋವಿಗೂ ಒಳ್ಳೆಯದು :** ಪುನರ್ನವ ಗ್ಯಾಸ್ಟ್ರಿಕ್ ಹಾಗೂ ಹೊಟ್ಟೆ ನೋವಿನ ಸಮಸ್ಯೆಗೂ ಕೂಡ ಪರಿಹಾರ ನೀಡುತ್ತದೆ. ಪುನರ್ನವ ಪೇಸ್ಟ್ ಅನ್ನು ಹಚ್ಚುವುದರಿಂದ ಗಾಯಗಳನ್ನು ತ್ವರಿತವಾಗಿ ಗುಣಪಡಿಸುವ ಸಾಮರ್ಥ್ಯ ಇರುವುದರಿಂದ ಚರ್ಮವು ಆರೋಗ್ಯಕರವಾಗಿರುತ್ತದೆ.


ಇದಲ್ಲದೆ, ಪುನರ್ನವ ಎಣ್ಣೆಯಿಂದ ಮಸಾಜ್ ಮಾಡುವುದರಿಂದ ಕೀಲು ನೋವು ಕಡಿಮೆಯಾಗುತ್ತದೆ.

**ಒತ್ತಡದಿಂದ ಹೊರಬರಲು:** ತಮ್ಮ ಕಾರ್ಯನಿರತ ಜೀವನದಿಂದಾಗಿ ಒತ್ತಡದಲ್ಲಿರುವವರಿಗೆ ಪುನರ್ನವವು ತುಂಬಾ ಪ್ರಯೋಜನಕಾರಿಯಾಗಿದೆ.

ಪುನರ್ನವದ ಬೇರು ಒತ್ತಡ ವಿರೋಧಿ ಮತ್ತು ಖಿನ್ನತೆ ನಿವಾರಕ ಗುಣಗಳನ್ನು ಹೊಂದಿದ್ದು ಅದು ದೇಹದಲ್ಲಿನ ಒತ್ತಡದ ಮಟ್ಟವನ್ನು ಕಡಿಮೆ ಮಾಡುತ್ತದೆ. ಇದು ಒತ್ತಡದ ಮಟ್ಟವನ್ನು ಕಡಿಮೆ ಮಾಡುವ ಮೂಲಕ, ಒತ್ತಡ, ಖಿನ್ನತೆ, ಇತರ ರೀತಿಯ ಮಾನಸಿಕ ಸಮಸ್ಯೆಗಳನ್ನು ತಪ್ಪಿಸಬಹುದು. ಪುನರ್ನವವನ್ನು ಸೀಮಿತ ಪ್ರಮಾಣದಲ್ಲಿ ಸೇವಿಸುವುದರಿಂದ ಮನಸ್ಥಿತಿಯನ್ನು ಸುಧಾರಿಸಲು ಸಹಾಯ ಮಾಡುತ್ತದೆ.

**ಶುಗರ್ ನಿಯಂತ್ರಣದಲ್ಲಿಯೂ ಕೂಡ ನೆರವಿಗೆ ಬರುತ್ತದೆ!** ಪುನರ್ನವವು ದೇಹದ ರಕ್ತದಲ್ಲಿನ ಸಕ್ಕರೆಯನ್ನು ನಿಯಂತ್ರಿಸುವಲ್ಲಿಯೂ ಸಹ ಬಹಳ ಪ್ರಯೋಜನಕಾರಿಯಾಗಿದೆ. ಪುನರ್ನವದ ಬಳಕೆಯು ರಕ್ತದಲ್ಲಿನ ಗ್ಲೂಕೋಸ್ ಮಟ್ಟವನ್ನು ನಿಯಂತ್ರಿಸಬಹುದು, ಇದು ಮಧುಮೇಹದಂತಹ ಸಮಸ್ಯೆಗಳನ್ನು ತಡೆಯಬಹುದು. ಈ ಔಷಧವು ಮಧುಮೇಹ ವಿರೋಧಿ ಗುಣಗಳನ್ನು ಹೊಂದಿದೆ, ಇದು ರಕ್ತದಲ್ಲಿನ ಸಕ್ಕರೆಯ ಏರಿಕೆಯನ್ನು ಕಡಿಮೆ ಮಾಡಲು ಸಹಾಯ ಮಾಡುತ್ತದೆ.

**ದೇಸಿ ತುಪ್ಪ ಸೇವನೆ ಆರೋಗ್ಯಕ್ಕೆ ತುಂಬಾ ಪ್ರಯೋಜನಕಾರಿ. ದೇಸಿ ತುಪ್ಪವನ್ನು ಪ್ರತಿದಿನ ಸೇವಿಸುವುದರಿಂದ ದೌರ್ಬಲ್ಯ ಮತ್ತು ಆಯಾಸ ವನ್ನು ನಿವಾರಿಸಬಹುದು. ದೇಸಿ ತುಪ್ಪವನ್ನು ಸೇವಿಸುವುದರಿಂದ ದೇಹದ ರೋಗನಿರೋಧಕ ಶಕ್ತಿಯೂ ಹೆಚ್ಚಾಗುತ್ತದೆ.**



# ವೀಕ್ ನೆಸ್ ಆಗ್ತಾ ಇದ್ಯಾ, ಹಾಗಾದ್ರೆ ಇಂತಹ ಹುಳಿಸಿಹಿಯಾಗಿರುವ ಹಣ್ಣುಗಳನ್ನು ತಿನ್ನಿ!

ಇಂದಿನಕಾರ್ಯನಿರತಜೀವನದಲ್ಲಿ ಆರೋಗ್ಯಕ್ಕೆ ಬೇಕಾಗುವಷ್ಟು ಪೋಷಕಾಂಶಗಳು ಸರಿಯಾಗಿ ಸಿಗುತ್ತಿಲ್ಲ! ಇದರಿಂದಾಗಿ ಬಹುತೇಕ ಜನರಲ್ಲಿ ವೀಕ್ ನೆಸ್, ಸುಸ್ತು, ಆಯಾಸ ಮತ್ತು ಸೋಮಾರಿತನದಂತಹ ಸಮಸ್ಯೆಗಳು ಹೆಚ್ಚಾಗ ತೊಡಗುತ್ತವೆ! ಪೌಷ್ಟಿಕಾಂಶ ಮತ್ತು ದೇಹಕ್ಕೆ ಶಕ್ತಿ ನೀಡುವ ಗುಣಲಕ್ಷಣಗಳಿಗೆ ಹೆಸರುವಾಸಿಯಾದ ಕೆಲವೊಂದು ಬಗೆಯ ಆಹಾರ ಪದಾರ್ಥಗಳ ಬಗ್ಗೆ ಮಾಹಿತಿಯನ್ನು ಇಂದಿನ ಲೇಖನದಲ್ಲಿ ನೋಡೋಣ ವಯಸ್ಸಾದಂತೆ ನಿಶ್ಯಕ್ತಿ ಸಮಸ್ಯೆ, ಅಂದರೆ ದೇಹದಲ್ಲಿ ವೀಕ್ ನೆಸ್ ಸಮಸ್ಯೆ ಕಾಣಿಸಿಕೊಳ್ಳುವುದು ಸಾಮಾನ್ಯ! ಆದರೆ ಇತ್ತೀಚಿನ ದಿನಗಳಲ್ಲಿ ಈ ಸಮಸ್ಯೆ ಯುವಜನರು ಮತ್ತು ಮಕ್ಕಳಲ್ಲಿಯೂ ಕೂಡ ಕಾಣಿಸಿಕೊಳ್ಳುತ್ತಿದೆ. ಯಾಕೆ ಹೀಗೆ ಎಂದು ಮೇಲ್ನೋಟಕ್ಕೆ ನೋಡುವುದಾದರೆ ಸರಿಯಾಗಿ ನಿದ್ದೆ ಮಾಡದೇ ಇರುವುದು, ಅನಾರೋಗ್ಯಕಾರಿ ಆಹಾರಪದ್ಧತಿ ಹಾಗೂ ಜಡ ಜೀವನಶೈಲಿ, ಜಿಡ್ಡಿನಾಂಶ ಇರುವ ಆಹಾರ ಹಾಗೂ ಎಣ್ಣೆ ಪದಾರ್ಥಗಳ ಆಹಾರಗಳ ಸೇವನೆಯಿಂದ ದೇಹದಲ್ಲಿ ಶಕ್ತಿ ಕಡಿಮೆ ಆಗುವುದರ ಜೊತೆಗೆ ದೇಹದಲ್ಲಿ ರಕ್ತದ ಅಂಶದಲ್ಲಿಯೂ ಕೂಡ ಕೊರತೆ ಕಾಣಿಸಿಕೊಳ್ಳುತ್ತದೆ. ಕೊನೆಗೆ ಇದೇ ಕಾರಣಕ್ಕೆ ದೇಹದಲ್ಲಿ ವೀಕ್ ನೆಸ್ ಸಮಸ್ಯೆ ಕಾಣಿಸಿಕೊಳ್ಳಲು ಶುರುವಾಗುತ್ತದೆ. ಪ್ರಸ್ತುತ ಇಂದಿನ ಲೇಖನದಲ್ಲಿ ನಿಶ್ಯಕ್ತಿಯನ್ನು ನಿವಾರಿಸಿ, ದೇಹಕ್ಕೆ ಎನರ್ಜಿ ನೀಡುವ ಆಹಾರಗಳ ಬಗ್ಗೆ ಮಾಹಿತಿ.

**ವೀಕ್ ನೆಸ್ ದೂರ ಮಾಡುವ ಆಹಾರಗಳು:** ದೈನಂದಿನ ಆಹಾರ ಪದ್ಧತಿಯಲ್ಲಿ ದೇಹಕ್ಕೆ ಶಕ್ತಿಯನ್ನು ನೀಡುವ ವಿವಿಧ ಬಗೆ ವಿಟಮಿನ್ಸ್, ಕಬ್ಬಿಣ್ಣಾಂಶ ಮತ್ತು ಖನಿಜಗಳಂತಹ ಪೋಷಕಾಂಶಗಳನ್ನು ಒಳಗೊಂಡಿರುವ ಆಹಾರ ಪದಾರ್ಥಗಳನ್ನು ಸೇರಿಸಿಕೊಳ್ಳಬೇಕು. ಹಸಿರು ಎಲೆಗಳ ತರಕಾರಿಗಳು, ಹಣ್ಣುಗಳು, ಕೆಂಪು-ಹಳದಿ-ಹಸಿರು ಕ್ಯಾಪ್ಸಿಕಂನಂತಹ ವರ್ಣರಂಜಿತ ತರಕಾರಿಗಳು, ಕ್ಯಾರೆಟ್, ಬದನೆಕಾಯಿ, ಬೀಟ್ರೂಟ್, ಎಲ್ಲಾ ರೀತಿಯ ದ್ವಿದಳ ಧಾನ್ಯಗಳು ಮತ್ತು ಧಾನ್ಯಗಳನ್ನು ತಮ್ಮ ಪ್ರತಿದಿನದ ಆಹಾರ ಪದ್ಧತಿಯಲ್ಲಿ ಸೇರಿಸಿಕೊಳ್ಳಬೇಕು. ಇದರ ಜೊತೆಗೆ ಪ್ರತಿದಿನ ಒಣಬೀಜಗಳು ಹಾಗೂ ಡ್ರೈ ಫ್ರೂಟ್ಸ್ ಗಳನ್ನು ಸೇವನೆ ಮಾಡುವ ಅಭ್ಯಾಸ ಮಾಡಿಕೊಳ್ಳಬೇಕು. ಇವೆಲ್ಲಾದರ ಜೊತೆಗೆ ಕೆಲವೊಂದು ಬಗೆಯ ಹಣ್ಣುಗಳ ಜೊತೆಗೆ ಕೆಲವೊಂದು ಬಗೆಯ ಆಹಾರಗಳನ್ನು ಕೂಡ ಸೇವನೆ ಮಾಡುವ ಅಭ್ಯಾಸ ಮಾಡಿಕೊಂಡರೆ, ದೇಹದ ಆರೋಗ್ಯ ವೃದ್ಧಿಯಾಗುವುದರ ಜೊತೆಗೆ ವೀಕ್ ನೆಸ್ ಅಥವಾ ದೇಹದಲ್ಲಿ ಕಾಣಿಸಿಕೊಳ್ಳುವ ನಿಶ್ಯಕ್ತಿ ಬಹಳ ಬೇಗನೇ ದೂರವಾಗುತ್ತದೆ.

**ದಾಳಿಂಬೆ :** ದಾಳಿಂಬೆ ಸೇವನೆಯಿಂದ ದೇಹದ ನಿಶ್ಯಕ್ತಿ ಮತ್ತು ಆಯಾಸವನ್ನು ನಿವಾರಿಸಬಹುದು. ಪ್ರತಿದಿನ ದಾಳಿಂಬೆ ಸೇವಿಸುವುದು ಆರೋಗ್ಯಕ್ಕೆ ತುಂಬಾ ಪ್ರಯೋಜನಕಾರಿ. ದೇಹದಲ್ಲಿ ರಕ್ತದ ಕೊರತೆಯಿಂದಾಗಿ ಆಯಾಸ ಮತ್ತು ದೌರ್ಬಲ್ಯವೂ ಉಂಟಾಗಬಹುದು. ದಾಳಿಂಬೆ ಸೇವನೆಯಿಂದ ದೇಹದಲ್ಲಿ ರಕ್ತದ ಕೊರತೆಯನ್ನು ನಿವಾರಿಸಬಹುದು.

# ರಾಮಾಯಣ



**ವಿರಾಧನು ರಾಮಲಕ್ಷ್ಮಣರನ್ನು ಎತ್ತಿಕೊಂಡು ಹೋದದ್ದು:**

• ಹಿಂದಿನ ಸಂಚಿಕೆಯಿಂದ

**116 ನೆಯ ಅಧ್ಯಾಯ**

ಆಮೇಲೆ ಶ್ರೀರಾಮನು ಕಾಡಾನೆಯಂತೆ ಭಯಂಕರನಾದ ಆ ರಾಕ್ಷಸನ ದೇಹಕ್ಕನುಗುಣವಾದ ಹಳ್ಳವೊಂದನ್ನು ವನಪ್ರದೇಶದಲ್ಲಿ ತೋಡುವಂತೆ ಲಕ್ಷ್ಮಣನಿಗೆ ಆಜ್ಞಾಪಿಸಿ ತಾನು ವಿರಾಧನ ಕೊರಳನ್ನು ಪುಟ್ಟಿಕೊಂಡು ನಿಂತನು. ಲಕ್ಷ್ಮಣನು ಹಾರೆಯಿಂದ ಮಹತ್ತಾದ ಹಳ್ಳವನ್ನು ತೆಗೆದು ಅತಿಭಯಂಕರವಾಗಿ ಕೂಗುತ್ತಿದ್ದ ಆ ಶರೀರವನ್ನು ಅದರಲ್ಲಿ ಹಾಕಿ ಹೂಳಿದನು. ಈ ರೀತಿಯಲ್ಲಿ ಮಹಾಬಲಪರಾಕ್ರಮಿಗಳಾದ ರಾಮಲಕ್ಷ್ಮಣರು ತಪೋವನದಲ್ಲಿ ಸಮಸ್ತ ಋಷಿಗಳಿಗೂ ವಿಘ್ನ ಮಾಡುತ್ತಿದ್ದ ವಿರಾಧನನ್ನು ಕೊಂದು ಅವನ ಶರೀರವನ್ನು ಆಳವಾದ ಹಳ್ಳದಲ್ಲಿ ಹೂಳಿ ಅದರ ಮೇಲೆ ದೊಡ್ಡ ಕಲ್ಲರೆಗಳನ್ನು ಅಡಿಸಿದರು. ಅನಂತರ ಸೀತಾದೇವಿಯ ಭಯವನ್ನು ಪರಿಹರಿಸಿ, ಆ ದೇವಿಯನ್ನು ಸಂತವಿಟ್ಟು, ಅಂತರಿಕ್ಷಮಾರ್ಗದಲ್ಲಿ ಅತ್ಯಂತ ಕಾಂತಿಯುಕ್ತರಾದ ಚಂದ್ರಸೂರರಂತೆ ತೇಜೋಬಲವರಾಕ್ರಮದಿಂದ ಒಪ್ಪುತ್ತ ವನದಲ್ಲಿ ಸಂತೋಷದಿಂದ ಸಂಚರಿಸುತ್ತಿದ್ದರು

**ಕರ ಭಂಗ ಮುನಿಯು ಬ್ರಹ್ಮಲೋಕವನ್ನು ಸೇರಿದ ವೃತ್ತಾಂತ**

ಶ್ರೀರಾಮನು ಸೀತಾದೇವಿಯನ್ನು ಆಲಿಂಗಿಸಿಕೊಂಡು ಸಮಾಧಾನಪಡಿಸಿ ಪ್ರಿಯ ಸಹೋದರನಾದ ಲಕ್ಷ್ಮಣನನ್ನು ಕುರಿತು ಲಕ್ಷ್ಮಣ. ನಾವು ಮೊದಲು ಯಾವಾಗಲೂ ಈ ವನದಲ್ಲಿ ಸಂಚರಿಸಿದವರಲ್ಲ. ನಮಗೆ ಇನ್ನು ಈ ವನದಲ್ಲಿರಸಲ್ಲದು. ನಾವು ಶರಭಂಗಮುನೀಶ್ವರನ ಆಶ್ರಮಕ್ಕೆ ಹೋಗೋಣ ಎಂದು ನುಡಿದು ಸೀತಾಲಕ್ಷ್ಮಣಸಮೇತನಾಗಿ ಶರಭಂಗಮುನೀಶ್ವರನ ತಪೋವನದ ಸಮೀಪಕ್ಕೆ ಹೋದನು. ಅಲ್ಲಿ ಅತ್ಯದ್ಭುತವಾಗಿ ಅಂತರಿಕ್ಷಮಾರ್ಗದಲ್ಲಿದ್ದ ಸುವರ್ಣಮಯವಾದ ಒಂದು ರಥವನ್ನು ಕಂಡನು. ಆ ರಥದಲ್ಲಿ ದಿವ್ಯಾಭರಣಭೂಷಿತನಾಗಿಯೂ ದಿವ್ಯಾಲಂಕಾರಯುಕ್ತ ನಾಗಿಯೂ ಅತಿತೇಜಸ್ವಿಯಾಗಿಯೂ ಮಹಾತ್ಮರಾದ ದೇವತೆಗಳಿಂದ ಸೇವಿಸಲ್ಪಟ್ಟವನಾಗಿಯೂ ಉದಯವಾಗುವ ಬಾಲಸೂರ್ಯನಿಗೆ ಸಮಾನವಾದ ಕಾಂತಿಯುಳ್ಳವನಾಗಿಯೂ ಶರತ್ಕಾಲದ ಮೇಘದಂತೆ ಬಿಳುಪಾದ ಸತ್ತಿಗೆಯುಳ್ಳವನಾಗಿಯೂ ಪಾರಿಜಾತಾದಿ ಪುಷ್ಪ ಮಾಲಿಕೆಗಳಿಂದ ಅಲಂಕರಿಸಲ್ಪಟ್ಟವನಾಗಿಯೂ ಅಂತರಿಕ್ಷದಲ್ಲಿದ್ದುಕೊಂಡು ಶರಭಂಗಮುನೀಶ್ವರನೊಡನೆ ಸಂಭಾಷಣೆ ಮಾಡುತ್ತಿದ್ದ ದೇವೇಂದ್ರನನ್ನು ಕಂಡನು.

ಶ್ರೀರಾಮನು ಲಕ್ಷ್ಮಣನನ್ನು ನೋಡಿ , ಎಲ್ಲೆ ಲಕ್ಷ್ಮಣ, ದೇವೇಂದ್ರನ ಕುದುರೆಗಳು ಪಚ್ಚೆಯ ವರ್ಣದವೆಂದು ಕೇಳಿದ್ದೇನೆ. ಈಗ ಅಂತರಿಕ್ಷಮಾರ್ಗದಲ್ಲಿರುವ ಈ ರಥಕ್ಕೆ ಕಟ್ಟಿರುವ ಕುದುರೆಗಳು ಪಚ್ಚೆಯ ವರ್ಣದವಾಗಿದೆ. ಇವು ದೇವೇಂದ್ರನ ಕುದುರೆಗಳಾಗಿರ ಬೇಕು. ಈ ರಥದ ಸಮೀಪದಲ್ಲಿರುವ ಪುರುಷರೆಲ್ಲರೂ ಮೂವತ್ತು ವರುಷದ ವಯಸ್ಸುಳ್ಳವರಂತೆ ಮೋಹನವಾದ ಯೌವನವುಳ್ಳವರಾಗಿಯೂ ಕುಂಡಲಗಳನ್ನು ಧರಿಸಿಕೊಂಡು ಖಡ್ಗಪಾಣಿಗಳಾಗಿಯೂ ವಿಶಾಲವಾದ ಪಕ್ಷಃಸ್ಥಳವುಳ್ಳವರಾಗಿಯೂ ನಿಡಿದಾದ ತೋಳುಗಳುಳ್ಳ ವರಾಗಿಯೂ ಕೆಂದಾವರೆ ಎಸಳುಗಳಂತೆ ಕಣ್ಣುಗಳುಳ್ಳವರಾಗಿಯೂ ಅತಿಮೋಹನವಾದ ಸೊಬಗುಳ್ಳವರಾಗಿ ಅತ್ಯಂತ ದೇದೀಪ್ಯಮಾನವಾದ ಕಂಠಮಾಲೆಗಳುಳ್ಳವರಾಗಿಯೂ ಇದ್ದಾರೆ.

**ಮುಂದುವರಿಯುವುದು...**

# ಎಣ್ಣೆ ಇಲ್ಲದೇ ರುಚಿ ಡಬಲ್! ಸಬ್ಬಕ್ಕಿ ಪೂರಿ ಬೇರೆ ಲೆವೆಲ್

ಆರೋಗ್ಯಕರ ಆಹಾರದ ಬಗ್ಗೆ ಕಾಳಜಿ ಹೊಂದಿರುವವರಿಗೆ ಮತ್ತು ತಿಂಡಿಯಲ್ಲಿ ಹೊಸತನ್ನು ಬಯಸುವವರಿಗೆ ಎಣ್ಣೆ ಇಲ್ಲದ ಸಬ್ಬಕ್ಕಿ ಅಥವಾ ಸಾಬೂದಾನ ಪೂರಿ ಒಂದು ಪರಿಪೂರ್ಣ ಆಯ್ಕೆ. ಸಾಮಾನ್ಯವಾಗಿ ಸಾಂಪ್ರದಾಯಿಕ ಸಾಬೂದಾನ ಪೂರಿಗಳನ್ನು ಎಣ್ಣೆಯಲ್ಲಿ ಕರಿಯಲಾಗುತ್ತದೆ. ಆದರೆ, ಈಗ ನೀವು ನಿಮ್ಮ ಮನೆಯಲ್ಲೇ ಎಣ್ಣೆ ಬಳಸದೆ ಈ ಆರೋಗ್ಯಕರ ಮತ್ತು ರುಚಿಕರವಾದ ಪೂರಿಗಳನ್ನು ತಯಾರಿಸಬಹುದು. ಪೂರಿಗಳ ರುಚಿ ಎಷ್ಟಿರುತ್ತದೆಯೆಂದರೆ, ನೀವು ಎಣ್ಣೆಯಲ್ಲಿ ಕರಿದ ಕಚೋರಿ ಮತ್ತು ಪೂರಿಗಳನ್ನು ಸಂಪೂರ್ಣವಾಗಿ ಮರೆತುಬಿಡುತ್ತೀರಿ. ವಿಶೇಷವೆಂದರೆ, ಸಬ್ಬಕ್ಕಿ ಪೂರಿ ಅನ್ನು ಕೇವಲ 25-30 ನಿಮಿಷಗಳಲ್ಲಿ ಸುಲಭವಾಗಿ ತಯಾರಿಸಬಹುದು. ಸಾಮಾನ್ಯವಾಗಿ ಪೂರಿ ತಯಾರಿಸಲು ಎಣ್ಣೆ ಹೆಚ್ಚು ಬಳಸಲಾಗುತ್ತದೆ. ಇದರಿಂದ ಕ್ಯಾಲೊರಿ ಪ್ರಮಾಣ ಹೆಚ್ಚಾಗುತ್ತದೆ.

ಆರೋಗ್ಯದ ಮೇಲೆ ದುಷ್ಪರಿಣಾಮ ಉಂಟಾಗಬಹುದು. ಆದರೆ, ಎಣ್ಣೆ ಇಲ್ಲದ ಸಬ್ಬಕ್ಕಿ ಪೂರಿ ಮಾಡುವ ಮೂಲಕ ಕೊಲೆಸ್ಟ್ರಾಲ್ ನಿಯಂತ್ರಣದಲ್ಲಿ ಇಟ್ಟುಕೊಳ್ಳಬಹುದು. ತೂಕವನ್ನು ಸಮತೋಲನದಲ್ಲಿ ಇರಿಸಬಹುದು. ಹೃದಯ ಆರೋಗ್ಯಕ್ಕೂ ಸಹಾಯಕವಾಗುತ್ತದೆ. ವಿಶೇಷವಾಗಿ ಉಪವಾಸ ಅಥವಾ ಲಘು ಉಪಾಹಾರದ ಸಂದರ್ಭಗಳಲ್ಲಿ ಇದು ಪರಿಪೂರ್ಣ ಆಹಾರ.

**ಹಂತ 1:** ಸಬ್ಬಕ್ಕಿಯನ್ನು ಸಿದ್ಧಪಡಿಸಿ: ಪೂರಿ ಮಾಡಲು ಮೊದಲನೆಯದಾಗಿ, ಸಬ್ಬಕ್ಕಿಯನ್ನು ಚೆನ್ನಾಗಿ ತೊಳೆದು 4 ರಿಂದ 5 ಗಂಟೆಗಳ ಕಾಲ ಅಥವಾ ರಾತ್ರಿ ಇಡೀ ನೆನೆಸಿಡಿ. ಸಬ್ಬಕ್ಕಿಯು ಸಂಪೂರ್ಣವಾಗಿ ನೀರನ್ನು ಹೀರಿಕೊಂಡು ಮೃದುವಾಗುವವರೆಗೆ ನೆನೆಸುವುದು ಮುಖ್ಯ. ಬಳಸುವ ಮೊದಲು ಸಾಬೂದಾನದಿಂದ ಹೆಚ್ಚುವರಿ ನೀರನ್ನು ಸಂಪೂರ್ಣವಾಗಿ ಹಿಂಡಿ ತೆಗೆಯಿರಿ.

**ಹಂತ 2: ಮಿಶ್ರಣ ತಯಾರಿಸಿ:** ಮೊದಲು, ಒಂದು ಮಧ್ಯಮ ಗಾತ್ರದ ಆಲೂಗಡ್ಡೆಯನ್ನು ಬೇಯಿಸಿ. ಅದರ ಸಿಪ್ಪೆ ತೆಗೆದು ಚೆನ್ನಾಗಿ ಮೆತ್ತಗಾಗಿಸಿ. ನಂತರ, ಈ ಮೆತ್ತಗಾದ ಆಲೂಗಡ್ಡೆಗೆ ಸಣ್ಣಗೆ ಹೆಚ್ಚಿದ ಹಸಿ ಮೆಣಸಿನಕಾಯಿ, ರುಚಿಗೆ ತಕ್ಕಷ್ಟು ಉಪ್ಪು, ಸಣ್ಣಗೆ ಹೆಚ್ಚಿದ ಕೊತ್ತಂಬರಿ ಸೊಪ್ಪು ಮತ್ತು ಜೀರಿಗೆ ಪುಡಿಯನ್ನು ಸೇರಿಸಿ. ಈ ಎಲ್ಲಾ ಸಾಮಗ್ರಿಗಳನ್ನು ಚೆನ್ನಾಗಿ ಮಿಕ್ಸ್ ಮಾಡಿ.

ಹಂತ 3: ಹಿಟ್ಟು ಕಲಸಿ: ಈಗ, ನೆನೆಸಿಟ್ಟ ಸಬ್ಬಕ್ಕಿಯನ್ನು ಆಲೂಗಡ್ಡೆಯ ಮಿಶ್ರಣಕ್ಕೆ ಸೇರಿಸಿ. ಪೂರಿ ಮಾಡಲು ಹಿಟ್ಟು ಕಲಸುವಂತೆ ಎರಡನ್ನೂ ಚೆನ್ನಾಗಿ ಕಲಸಿ. ಈ ಹಂತದಲ್ಲಿ, ಹಿಟ್ಟು ಜಿಗುಟಾಗಿದ್ದರೆ, ಪೂರಿ ಆಕಾರದಲ್ಲಿ ಬರಲು ಸಹಾಯ ಮಾಡಲು ಸ್ವಲ್ಪ ರವೆ ಅಥವಾ ಗೋಧಿ ಹಿಟ್ಟನ್ನು ಸೇರಿಸಬಹುದು. ಇದರಿಂದ ಪೂರಿ ಗಟ್ಟಿಯಾಗಿರುತ್ತದೆ ಮತ್ತು ಸುಲಭವಾಗಿ ಲಟ್ಟಿಸಬಹುದು. ಮೃದುವಾದ ಮತ್ತು ನುಣುಪಾದ ಹಿಟ್ಟನ್ನು ಕಲಸಿ ಸಿದ್ಧಪಡಿಸಿ.



**ಎಣ್ಣೆ ಇಲ್ಲದ ಸಬ್ಬಕ್ಕಿ ಪೂರಿಗೆ ಬೇಕಾಗುವ ಸಾಮಗ್ರಿಗಳು**

- ಸಬ್ಬಕ್ಕಿ ಅಥವಾ ಸಾಬೂದಾನ
- ಬೇಯಿಸಿದ ಆಲೂಗಡ್ಡೆ
- ಹಸಿ ಮೆಣಸಿನಕಾಯಿ
- ರುಚಿಗೆ ತಕ್ಕಷ್ಟು ಉಪ್ಪು
- ಕೊತ್ತಂಬರಿ ಸೊಪ್ಪು
- ಜೀರಿಗೆ ಪುಡಿ ರವೆ ಅಥವಾ ಗೋಧಿ ಹಿಟ್ಟು
- ಎಣ್ಣೆ ಇಲ್ಲದ ಸಾಬೂದಾನ ಪೂರಿ ತಯಾರಿಸುವ ವಿಧಾನ

**ಆರೋಗ್ಯ ಲಾಭಗಳು**

- ಎಣ್ಣೆ ಇಲ್ಲದೆ ತಯಾರಿಸಿದ ಕಾರಣ ಕಡಿಮೆ ಕ್ಯಾಲೊರಿಗಳು.
- ಉಪವಾಸಕ್ಕೆ ಸೂಕ್ತವಾದ ಹಗುರ ಉಪಾಹಾರ.
- ಜೀರ್ಣಕ್ರಿಯೆ ಸುಲಭಗೊಳಿಸುತ್ತದೆ.
- ತೂಕ ನಿಯಂತ್ರಣದಲ್ಲಿ ಇಡುವವರಿಗೆ ಹಿತಕರ.

**ಹಂತ 4: ಪೂರಿಗಳನ್ನು ಲಟ್ಟಿಸಿ:** ಕಲಸಿದ ಹಿಟ್ಟಿನಿಂದ ಸಣ್ಣ ಸಣ್ಣ ಉಂಡೆಗಳನ್ನು ಮಾಡಿ. ಅವುಗಳನ್ನು ಲಟ್ಟಣಿಗೆಯಿಂದ ವೃತ್ತಾಕಾರದಲ್ಲಿ ಲಟ್ಟಿಸಿ. ಸಾಂಪ್ರದಾಯಿಕ ಪೂರಿಗಿಂತ ಇವು ಸ್ವಲ್ಪ ದಪ್ಪವಾಗಿರಬಹುದು.

**ಹಂತ 5: ಪೂರಿಗಳನ್ನು ಬೇಯಿಸಿ:** ಒಂದು ನಾನ್-ಸ್ಟಿಕ್ ತವಾ ಅಥವಾ ಪ್ಯಾನ್ ಅನ್ನು ಬಿಸಿ ಮಾಡಿ, ಎಣ್ಣೆಯನ್ನು ಬಳಸದೆ, ಲಟ್ಟಿಸಿದ ಪೂರಿಗಳನ್ನು ಅದರ ಮೇಲೆ ಹಾಕಿ, ಎರಡೂ ಬದಿಗಳನ್ನು ಮಧ್ಯಮ ಉರಿಯಲ್ಲಿ ಗೋಲ್ಡನ್ ಬ್ರೌನ್ ಬರುವವರೆಗೆ ಬೇಯಿಸಿ. ಸಾಬೂದಾನ ಪೂರಿಗಳನ್ನು ಸುಟ್ಟಂತೆ ಆಗದಂತೆ ಪದೇ ಪದೇ ತಿರುಗಿಸಿ ಬೇಯಿಸಿ. ಈ ಪೂರಿಗಳನ್ನು ಗರಂ ಗರಂ ಆಗಿ ಮೊಸರು, ಚಟ್ನಿ ಅಥವಾ ಯಾವುದೇ ರಾಯಿತದ ಜೊತೆ ಸವಿಯಬಹುದು. ಈ ಎಣ್ಣೆ ರಹಿತ ಸಾಬೂದಾನ ಪೂರಿಗಳು ಉಪವಾಸದ ಸಮಯದಲ್ಲಿ ತಿನ್ನಲು ಸಹ ಉತ್ತಮವಾಗಿವೆ. ಇವು ರುಚಿಕರ ಮಾತ್ರವಲ್ಲದೆ, ಪೌಷ್ಟಿಕಾಂಶಗಳಿಂದ ಸಮೃದ್ಧವಾಗಿವೆ. ನಿಮ್ಮ ಆರೋಗ್ಯಕ್ಕೆ ಒಳ್ಳೆಯದು.

## ನೇಪಾಳಿ ಆರೋಪಿಗಳ ಬಂಧನ

• ಉದಯವಾಹಿನಿ ಕೊಪ್ಪ

ಮನೆಗಳ್ಳತನ ಪ್ರಕರಣದಲ್ಲಿ ಮೂವರು ನೇಪಾಳಿ ಆರೋಪಿಗಳನ್ನು ಬಂಧಿಸಿ. ಬಂಧಿತರಿಂದ ಅಂದಾಜು ಮೊತ್ತ 1.50 ಕೋಟಿ ಮೌಲ್ಯದ ಚಿನ್ನಾಭರಣ, ಕೃತ್ಯಕ್ಕೆ ಬಳಸಿದ ಎರಡು ಕಾರು ಸೇರಿದಂತೆ ಒಟ್ಟು 1.75 ಕೋಟಿ ಮೌಲ್ಯದ ಸ್ವತ್ತುಗಳನ್ನು ಪೊಲೀಸರು ವಶಪಡಿಸಿಕೊಂಡಿದ್ದಾರೆ. ಕೈಲಾಲಿ ಜಿಲ್ಲೆಯ ಧನಗೇಡಿಯ ರಾಜೇಂದ್ರ ಶೇರ್‌ಬಾಯ್ (30), ಏಕೇಂದ್ರ ಕುಟಲ್ ಬದ್ವಾಲ್ (31), ದಾಮಡಿ ಕರಂಸಿಂಗ್ ಬಹದ್ದೂರ್ ಬಂಧಿತರು. ಪಟ್ಟಣ ಸಮೀಪದ ಹರಂದೂರು ಗ್ರಾಮದ ಮಣಿಪುರ ಎಸ್ಟೇಟ್ ನಲ್ಲಿರುವ ಜೆಡಿಎಸ್ ಮುಖಂಡ ಎಚ್.ಜಿ.ವೆಂಕಟೇಶ್ ಅವರ ಮನೆಯಲ್ಲಿ 6 ಲಕ್ಷ ನಗದು, 37.50 ಲಕ್ಷ ಮೌಲ್ಯದ ಚಿನ್ನಾಭರಣ ಕಳವು ಆಗಿರುವ ಕುರಿತು ಕೊಪ್ಪ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿತ್ತು.

ಈ ಸಂಬಂಧ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ವಿಕ್ರಮ್ ಅಮಟೆ ಅವರು ಹೆಚ್ಚುವರಿ ಪೊಲೀಸ್ ವರಿಷ್ಠಾಧಿಕಾರಿ ಕೆ.ಟಿ. ಜಯಕುಮಾರ್ ನೇತೃತ್ವದಲ್ಲಿ ಎರಡು ಪ್ರತ್ಯೇಕ ತಂಡ ರಚಿಸಿದ್ದರು.

## ಅಪಾಯಕಾರಿ ಮರಗಳ ತೆರವು

• ಉದಯವಾಹಿನಿ ಬೆಳಗಾವಿ

ನಗರದಲ್ಲಿ ಬಹಳ ವರ್ಷಗಳಿಂದ ಬೀಳುವ ಸ್ಥಿತಿಯಲ್ಲಿದ್ದ ಹಾಗೂ ಅಪಾಯಕಾರಿ ಎಂದು ಗುರುತಿಸಿದ್ದ ಮರಗಳನ್ನು ಮಹಾನಗರ ಪಾಲಿಕೆ ಮತ್ತು ಅರಣ್ಯ ಇಲಾಖೆಯಿಂದ ತೆರವುಗೊಳಿಸುವ ಪ್ರಕ್ರಿಯೆ ಭರದಿಂದ ಸಾಗಿದೆ. ಸತತವಾಗಿ ಸುರಿಯುತ್ತಿರುವ ಮಳೆ ಮತ್ತು ಜೋರಾಗಿ ಬೀಸುತ್ತಿರುವ ಗಾಳಿಯಿಂದ ನಗರದ ವಿವಿಧೆಡೆ 30ಕ್ಕೂ ಅಧಿಕ ಮರ ಬಿದ್ದು ಅವಾಂತರ ಸೃಷ್ಟಿಯಾಗಿತ್ತು.

ಇಲ್ಲಿನ ಸದಾಶಿವ ನಗರ, ಶಾಹೂ ನಗರ, ಆಝುಮ್ ನಗರ, ಸಹ್ಯಾದ್ರಿ ನಗರ, ಹನುಮಾನ ನಗರ, ಬಾಕ್ಸೈಟ್ ರಸ್ತೆ, ಎಪಿಎಂಸಿ ರಸ್ತೆ ಬದಿ ಮರಗಳು ಹುಲುಸಾಗಿ ಬೆಳೆದಿದ್ದವು. ದೂರದಿಂದ ಬರುವ ವಾಹನಗಳನ್ನು ಗುರುತಿಸಲು ಆಗದಂತೆ ಅದರ ರೆಂಬೆ–ಕೊಂಬೆ ಚಾಚಿಕೊಂಡಿದ್ದವು. ಇನ್ನೂ ಕೆಲವೆಡೆ ಬೀದಿದೀಪಗಳನ್ನು ಬೆಳಗಿಸಿದರೂ, ರಸ್ತೆ ಮೇಲೆ ಮರಗಳ ನೆರಳಷ್ಟೇ ಬೀಳುತ್ತಿತ್ತು. ಬೀದಿದೀಪಗಳ ಬೆಳಕಿಗೂ ಮರ ಅಡ್ಡಬರುತ್ತಿದ್ದವು. ಸಾರ್ವಜನಿಕ ಗಣೇಶ ಮೂರ್ತಿಗಳ ವಿಸರ್ಜನೆ ಮೆರವಣಿಗೆ ಮಾರ್ಗದಲ್ಲೂ ಹಲವು ಅಪಾಯಕಾರಿ ಮರಗಳಿದ್ದವು. ಅವುಗಳನ್ನು ಈಗ ಕತ್ತರಿಸಿ ಸಾರ್ವಜನಿಕರು ಮತ್ತು ವಾಹನಗಳ ಸವಾರರಿಗೆ ಅನುಕೂಲ ಕಲ್ಪಿಸಲಾಗುತ್ತಿದೆ. ನಗರದ ವಿವಿಧ ಮಾರ್ಗಗಳ ರಸ್ತೆ ವಿಭಜಕಗಳಲ್ಲಿ ಹಚ್ಚಿದ್ದ ಆಲಂಕಾರಿಕ ಸಸಿಗಳೂ ಹುಲುಸಾಗಿ ಬೆಳೆದು, ಪಕ್ಕದಲ್ಲಿ ಹಾದುಹೋಗುವ ಸವಾರರಿಗೂ ತಾಗುತ್ತಿದ್ದವು. ಹಾಗಾಗಿ ವಿಭಜಕ ಸ್ವಚ್ಛಗೊಳಿಸಿ, ಆ ಸಸಿಗಳನ್ನೂ ಸಪೂರಗೊಳಿಸಲಾಗುತ್ತಿದೆ.

## ಸೇತುವೆ ತೆರವು ಸಂಚಾರ ಪ್ರಾರಂಭ

• ಉದಯವಾಹಿನಿ ಮೂಡಲಗಿ

ಘಟಪ್ರಭಾ ನದಿಯ ನೀರಿನ ಒಳ ಹರಿವು ಮಧ್ಯಾಹ್ನದಿಂದ ಕಡಿಮೆಯಾಗುತ್ತಿದ್ದು, ಜಲಾವೃತಗೊಂಡಿದ್ದ ತಾಲ್ಲೂಕಿನ ಮಸಗುಪ್ಪಿ ಸೇತುವೆಯು ನದಿ ನೀರಿನಿಂದ ತೆರವು ಗೊಂಡಿದೆ. ವಾಹನ ಸಂಚಾರ ಯಥಾಸ್ಥಿತಿ, ತಾಲ್ಲೂಕಿನ ಢವಳೇಶ್ವರ, ಅವರಾದಿ, ಹುಣಶ್ಯಾಳ ಪಿವೈ, ಸುಣಧೋಳಿಯ ಬ್ರಿಡ್ಜ್ ಕಮ್ ಬ್ಯಾರೇಜ್‌ಗಳು ಜಲಾವೃತದಿಂದ ಮುಕ್ತವಾಗದೆ ಹಲವು ಗ್ರಾಮಗಳ ಮಧ್ಯದಲ್ಲಿ ಸಂಚಾರವು ನಿಂತಿರುವುದು ಮುಂದುವರೆದಿದೆ.

**ಬೆಳೆ ಹಾನಿ:** ಘಟಪ್ರಭಾ ನದಿ ಪಾತ್ರದಲ್ಲಿರುವ ಗ್ರಾಮಗಳಲ್ಲಿ ಬೆಳೆದಿರುವ ಕಬ್ಬು, ಗೋವಿನ ಜೋಳ ಬೆಳೆಯಲ್ಲಿ ನದಿ ಹೊಕ್ಕು ತಾಲ್ಲೂಕಿನಲ್ಲಿ ಸಾವಿರಾರು ಎಕರೆಯಷ್ಟು ಬೆಳೆ ಹಾನಿಯಾಗಿದೆ. ನದಿಗೆ ಸನೀರು ಹೆಚ್ಚಾದಾಗ ರೈತರು ಸಮಸ್ಯೆಯನ್ನು ಎದುರಿಸುವುದು ಪ್ರತಿ ವರ್ಷ ಸಾಮಾನ್ಯವಾಗಿದೆ ಎಂದು ರೈತರು ಪ್ರತಿಕ್ರಿಯಿಸಿದರು.

## ಬ್ಯಾಡಗಿ ಸರ್ಕಾರಿ ಪದವಿ ಪೂರ್ವ ಕಾಲೇಜು: ಕಾಂಪೌಂಡ್ ಹಾರಿ ಬರುವ ಕಿಡಿಗೇಡಿಗಳು

• ಉದಯವಾಹಿನಿ ಬ್ಯಾಡಗಿ

ಪಟ್ಟಣದ ಸರ್ಕಾರಿ ಪದವಿ ಪೂರ್ವ ಕಾಲೇಜಿಗೆ ಕಿಡಿಗೇಡಿಗಳ ಕಾಟ ಶುರುವಾಗಿದೆ. ಭದ್ರತೆಯ ಕೊರತೆಯಿಂದಾಗಿ ಪುಂಡರ ಹಾವಳಿ ಹೆಚ್ಚಿದೆ. ಕಾಲೇಜು ಸುತ್ತಲೂ ಕಾಂಪೌಂಡ್ ನಿರ್ಮಿಸಿದ್ದರೂ ಅದನ್ನು ಹತ್ತಿ ಬರುತ್ತಿರುವ ಕಿಡಿಗೇಡಿಗಳು, ಕಾಲೇಜು ಆವರಣದಲ್ಲಿ ಅಕ್ರಮ ಚಟುವಟಿಕೆ ನಡೆಸುತ್ತಿದ್ದಾರೆ. ಜೊತೆಗೆ, ಹಲವು ಸಾಮಗ್ರಿಗಳನ್ನು ಕದ್ದೊಯ್ಯುತ್ತಿದ್ದಾರೆ. ಕಾಲೇಜಿನ ಶೌಚಾಲಯಕ್ಕೆ ಅಳವಡಿಸಿದ ಪೈಪ್ ಒಡೆದು ಹಾಕಿದ್ದಾರೆ. ನೆಲ ಮಹಡಿ ಮತ್ತು ಮೊದಲ ಮಹಡಿಯ ಪ್ರಯೋಗಾಲಯಗಳಿಗೆ ಅಳವಡಿಸಿದ ಕಿಟಕಿ ಗಾಜುಗಳನ್ನು ಒಡೆದು ಹಾಕಿದ್ದಾರೆ.

ತಮ್ಮ ಅಕ್ರಮ ಚಟುವಟಿಕೆಗಳ ದೃಶ್ಯಗಳು ಸೆರೆಯಾಗುತ್ತವೆ ಎಂಬ ಕಾರಣಕ್ಕೆ ಕಾಲೇಜು ಆವರಣದಲ್ಲಿರುವ ಸಿ.ಸಿ.ಟಿ.ವಿ. ಕ್ಯಾಮೆರಾವನ್ನೂ ಧ್ವಂಸಗೊಳಿಸಿದ್ದಾರೆ. ಪ್ರಯೋಗಾಲಯದ ಉಪಕರಣಗಳನ್ನು ಹಾಳು ಮಾಡಿದ್ದಾರೆ. ಕಾಲೇಜಿನಲ್ಲಿ ಯಾವುದೇ ಅಭಿವೃದ್ಧಿ ಕಾರ್ಯಗಳನ್ನು ಕೈಕೊಂಡರೂ ಒಂದೆರಡು ದಿನದಲ್ಲಿ ಕಿಡಿಗೇಡಿ ಕೃತ್ಯಗಳಿಂದ, ಎಲ್ಲವೂ ಹಾಳಾಗುತ್ತಿದೆ. ಇಂಥ ಕಿಡಿಗೇಡಿಗಳನ್ನು ಮಟ್ಟ ಹಾಕಲು ಪೊಲೀಸರು ದಿಟ್ಟಕ್ರಮ ಕೈಗೊಳ್ಳಬೇಕೆಂದು ಜನರು ಆಗ್ರಹಿಸುತ್ತಿದ್ದಾರೆ.

**ಶೌಚಾಲಯಗಳ ಕೊರತೆ:** ಕಾಲೇಜಿನ ಆವರಣದಲ್ಲಿ ಜಿಲ್ಲಾ ಪಂಚಾಯಿತಿ ಎಂಜಿನೀರಿಂಗ್ ಉಪ ವಿಭಾಗದಿಂದ ಬಾಲಕ ಮತ್ತು ಬಾಲಕಿಯರಿಗೆ ಪ್ರತ್ಯೇಕ ಶೌಚಾಲಯ ನಿರ್ಮಿಸಲಾಗಿದ್ದು, ಅದು ಸಹ ಅವೈಜ್ಞಾನಿಕವೆಂಬ ಆರೋಪ ವ್ಯಕ್ತವಾಗುತ್ತಿದೆ.




ಉದಯವಾಹಿನಿ ಚಿತ್ರ

## ಕರಾವಳಿಯಲ್ಲಿ ಪಕ್ಷ ಸಂಘಟಿಸುವ ಅಗತ್ಯವಿದೆ: ಜಿ. ಪರಮೇಶ್ವರ್

• ಉದಯವಾಹಿನಿ ಕಾಪು

ಕರಾವಳಿ ಜಿಲ್ಲೆಗಳು ಸೂಕ್ಷ್ಮತೆಯಿಂದಾಗಿ ದೇಶ ಮಾತ್ರವಲ್ಲದೇ ಪ್ರಪಂಚದಾದ್ಯಂತ ಪ್ರಚಾರದಲ್ಲಿವೆ. ಸಂವಿಧಾನದ ಚೌಕಟ್ಟಿನೊಳಗೆ ಎಲ್ಲಾ ಸಮಸ್ಯೆಗಳಿಗೂ ಪರಿಹಾರ ಕಂಡುಕೊಳ್ಳುವ ಪ್ರಯತ್ನ ರಾಜ್ಯ ಸರ್ಕಾರದಿಂದ ನಡೆಯುತ್ತಿದೆ. ಶಾಂತಿ, ಸೌಹಾರ್ದಕ್ಕಾಗಿ ಸರ್ಕಾರದ ಪ್ರಯತ್ನ ನಿರಂತರವಾಗಿ ಸಾಗಿಬರಲಿದೆ. ಪೊಲೀಸ್ ಇಲಾಖೆಯೂ ಅದಕ್ಕೆ ಪೂರಕವಾಗಿ ಸಹಕಾರ ನೀಡುತ್ತಿದ್ದು, ನೀವೆಲ್ಲರೂ ಕರಾವಳಿಯ ಸೌಹಾರ್ದ ಉಳಿಸಿ, ಬೆಳೆಸುವಲ್ಲಿ ಕೈ ಜೋಡಿಸಬೇಕು' ಎಂದು ಗೃಹ ಸಚಿವ ಜಿ. ಪರಮೇಶ್ವರ್ ಕರೆ ನೀಡಿದರು. ಕಾಪು ರಾಜೀವ ಭವನಕ್ಕೆ ಸಂಜೆ ಭೇಟಿ ನೀಡಿ, ಮಾತನಾಡಿದ ಅವರು, ಕರಾವಳಿಯಲ್ಲಿ ಸ್ವಾರ್ಥಕ್ಕಾಗಿ ಕೋಮು ಪ್ರಚೋದನಾ ಶಕ್ತಿಗಳು ನಡೆಸುತ್ತಿರುವ, ಕೋಮು ದ್ವೇಷದ ವಿಚಾರಗಳಿಂದಾಗಿ ಪಕ್ಷ ಅಧಿಕಾರದಿಂದ



ಉದಯವಾಹಿನಿ ಚಿತ್ರ

ದೂರವುಳಿಯುವಂತಾಗಿದೆ. ಕರಾವಳಿಯಲ್ಲಿ ಪಕ್ಷವನ್ನು ಮರಳಿ ಸಂಘಟಿಸುವುದಕ್ಕಾಗಿ ಶಕ್ತಿಮೀರಿ ಪ್ರಯತ್ನಿಸಬೇಕಿದೆ ಎಂದರು. ನನ್ನ ಅಧ್ಯಕ್ಷಾವಧಿಯಲ್ಲಿ ಕರಾವಳಿಯಲ್ಲಿ ಸಾಮರಸ್ಯ ಕೆಟ್ಟು ಹೋಗಿರುವುದನ್ನು ಅರಿತು, ಜನರನ್ನು ಒಗ್ಗೂಡಿಸುವ ನಿಟ್ಟಿನಲ್ಲಿ ಉಳ್ಳಾಲದಿಂದ ಮಲ್ಪೆಯವರೆಗೆ ಸಾಮರಸ್ಯದ ನಡಿಗೆ ನಡೆಸಿದ್ದೇನೆ.

ಆದರೆ, ಇದಕ್ಕೆ ನಾಯಕರಾದ ಆಸ್ಕರ್ ಫೆರ್ನಾಂಡೀಸ್ ಹಾಗೂ ಜನಾರ್ದನ ಪೂಜಾರಿ ಪಾದಯಾತ್ರೆಯನ್ನು ನಿಲ್ಲಿಸುವಂತೆ ಒತ್ತಾಯಿಸಿದರು. ಆದರೂ ಯಾರ ಮಾತನ್ನೂ ಕೇಳದೆ ಪಾದಯಾತ್ರೆ ನಡೆಸಿದ್ದೇನೆ. ಪಾದಾಯಾತ್ರೆ ಬೇಡ ಎಂದ ಜರ್ನಾರ್ದನ ಪೂಜಾರಿ ಅವರು, ಪಾದಯಾತ್ರೆಗೆ ಚಾಲನೆ ನೀಡುವ ದಿನ ಮುಂದಿನ ಸಾಲಿನಲ್ಲಿ ನಿಂತು ನನ್ನನ್ನು ಬೆನ್ನು ತಟ್ಟಿದರು. ಈ ನಡಿಗೆ ಕಾಂಗ್ರೆಸ್ ಅಂದು ವಿಶೇಷ ಬಲ ತುಂಬಿ, 13ಕ್ಕೆ 11 ಕ್ಷೇತ್ರಗಳಲ್ಲಿ ಗೆಲುವು ತಂದುಕೊಟ್ಟಿತ್ತು. ಅದೇ ಮಾದರಿಯಲ್ಲಿ ಕರಾವಳಿಯಲ್ಲಿ ಮತ್ತೆ ಜನರನ್ನು ಸಂಘಟಿಸಬೇಕಿದೆ' ಎಂದರು.

• ಪ್ರಭು ಚವ್ಹಾಣ ವಿವಿಧ ಗ್ರಾಮಗಳಲ್ಲಿ ಸಂಚರಿಸಿ ಕೆರೆ–ಕಟ್ಟೆ, ಸೇತುವೆಗಳು ಒಡೆದು ಉಂಟಾಗಿರುವ ಹಾನಿಯ ಮಾಹಿತಿ ಪಡೆದರು

# ಅತೀವೃಷ್ಟಿ : ಎಕರೆಗೆ 25 ಸಾವಿರ ಘೋಷಿಸಲು ಸರ್ಕಾರಕ್ಕೆ ಆಗ್ರಹ

• ಉದಯವಾಹಿನಿ ಔರಾದ್

ಅತೀವೃಷ್ಠಿಯಿಂದ ಬಾಧಿತಗೊಂಡಿರುವ ಔರಾದ(ಬಿ) ಹಾಗೂ ಕಮಲಗನರ ತಾಲ್ಲೂಕಿನ ವಿವಿಧ ಗ್ರಾಮಗಳಲ್ಲಿ ಪ್ರಭು ಚವ್ಹಾಣ ಅವರು ಸಂಚರಿಸಿ ಮಳೆಯಿಂದಾದ ಹಾನಿಯನ್ನು ಪರಿಶೀಲಿಸಿದರು. ಬೋಂತಿ ಪಂಚಾಯಿತಿ ವ್ಯಾಪ್ತಿಯ ನಾಮಾನಾಯಕ್ ತಾಂಡಾ, ಬಾವಲಗಾಂವ, ಚೊಂಡಿಮುಖೇಡ್, ಚಿಕ್ಲಿ(ಯು) ತಾಂಡಾ, ಅಕನಾಪೂರ, ಗಂಗನಬೀಡ, ದಾಬಕಾ, ಮುತಖೇಡ್, ನಂದಿ ಬಿಜಲಗಾಂವ, ಚಿಮ್ಮೇಗಾಂವ ಸೇರಿದಂತೆ ವಿವಿಧ ಗ್ರಾಮಗಳಲ್ಲಿ ಸಂಚರಿಸಿ ಕೆರೆ–ಕಟ್ಟೆ, ಸೇತುವೆಗಳು ಒಡೆದು ಉಂಟಾಗಿರುವ ಹಾನಿಯ ಮಾಹಿತಿ ಪಡೆದರು.

ಮಳೆ ನೀರಿನ ವಿಪರೀತ ಹರಿವಿನಿಂದಾಗಿ ಸೇತುವೆ ಒಡೆದು ನೀರೆಲ್ಲ ರೈತರ ಹೊಲಗಳಿಗೆ ನುಗ್ಗಿ ಎಲ್ಲಾ ಬೆಳೆಗಳು ನೀರುಪಾಲಾಗಿವೆ. ಸೋಯಾ, ಉದ್ದು, ಹೆಸರು ಹಾಗೂ ಮತ್ತಿತರೆ ಬೆಳೆಗಳು ಈ ವರ್ಷ ಸರಿಯಾಗಿದ್ದವು. ಏಕಾಏಕಿ ಸುರಿದ ಧಾರಾಕಾರ ಮಳೆಗೆ ಎಲ್ಲಾ ಬೆಳೆಗಳು ಕೊಚ್ಚಿ ಹೋಗಿವೆ ಎಂದು ರೈತರು ಶಾಸಕರೆದುರು ಗೋಳು ತೋಡಿಕೊಂಡರು. ಇದೇ ವೇಳೆ ಶಾಸಕರು ಕೃಷಿ ಭೂಮಿಯಲ್ಲಿ ಓಡಾಡಿ ಬೆಳೆಹಾನಿಯನ್ನು ಗಮನಿಸಿದರು. ಒಂದೇ ದಿನ 300 ಎಂ.ಎಂ ಮಳೆಯಾಗಿದ್ದರಿಂದ ನೀರಿನ ರಭಸಕ್ಕೆ ಕೆರೆ–ಕಟ್ಟೆಗಳು, ಸೇತುವೆಗಳು ಒಡೆದು ತೀವ್ರ ಹಾನಿಯಾಗಿದೆ. ಕಾಲುವೆಗಳ ನೀರು ಕೃಷಿ ಭೂಮಿಗಳಿಗೆ ನುಗ್ಗಿ ಬಹಳಷ್ಟು ಹಾನಿಯಾಗಿದೆ. ಜನ–ಜಾನುವಾರುಗಳ ಸಾವಾಗಿರುವ


ಉದಯವಾಹಿನಿ ಚಿತ್ರ

**ಸರ್ಕಾರಕ್ಕೆ ಕೂಡಲೇ ಪ್ರಸ್ತಾವನೆ**

ಪ್ರಕರಣಗಳಿಗೆ ಕೂಡಲೇ ಪರಿಹಾರ ವಿತರಿಸಲು ಕ್ರಮ ವಹಿಸಬೇಕು. ಹಾನಿಯಾಗಿರುವ ರಸ್ತೆ, ಕೆರೆ–ಕಟ್ಟೆ ಮತ್ತು ಸೇತುವೆಗಳ ದುರಸ್ಥಿ ಅಥವಾ ಪುನರ್ ನಿರ್ಮಾಣಕ್ಕಾಗಿ ಸರ್ಕಾರಕ್ಕೆ ಕೂಡಲೇ ಪ್ರಸ್ತಾವನೆ ಸಲ್ಲಿಸಬೇಕು. ಬೆಳೆ ಹಾನಿಯ ಕುರಿತು ಕಂದಾಯ ಇಲಾಖೆ, ಕೃಷಿ, ತೋಟಗಾರಿಕೆ ಇಲಾಖೆ ಅಧಿಕಾರಿಗಳು ಹಾನಿಯಾದ ಸ್ಥಳಕ್ಕೆ ಖುದ್ದಾಗಿ ಭೇಟಿ ನೀಡಿ ವರದಿ ಸಲ್ಲಿಸಬೇಕು. ಈ ವಿಷಯದಲ್ಲಿ ನಿರ್ಲಕ್ಷ್ಯ ವಹಿಸಿದರೆ ಸುಮ್ಮನಿರುವುದಿಲ್ಲ ಎಂದು ಎಚ್ಚರಿಸಿದರು.

ಕೆಲವೆಡೆ ಇಂದಿಗೂ ವಿದ್ಯುತ್ ಕಂಬಗಳು ಟ್ರಾನ್ಸ್‌ಫಾರ್ಮರಗಳನ್ನು ದುರಸ್ಥಿ ಮಾಡದಿರುವ ಬಗ್ಗೆ ಸಾರ್ವಜನಿಕರು ಗಮನಕ್ಕೆ ತಂದಾಗ ಶಾಸಕರು ಅಧಿಕಾರಿಗಳಿಗೆ ತೀವ್ರ ತರಾಟೆಗೆ ತೆಗೆದುಕೊಂಡರು. ಈಗಾಗಲೇ ಜನ ಸಮಸ್ಯೆಯಲ್ಲಿದ್ದಾರೆ. ಅವರಿಗೆ ಇನ್ನಷ್ಟು ಸಮಸ್ಯೆಗೆ ದೂಡುತ್ತಿರುವುದು ಸರಿಯಲ್ಲವೆಂದು ಕೋಪಗೊಂಡರು. ವಿದ್ಯುತ್ ಕಂಬಗಳು, ಟ್ರಾನ್ಸ್‌ಫಾರ್ಮರಗಳನ್ನು ಬೇಗ ಸರಿಪಡಿಸಿ ವಿದ್ಯುತ ವ್ಯತ್ಯಯವಾಗದಂತೆ ನೋಡಿಕೊಳ್ಳಬೇಕೆಂದು ಸೂಚನೆ ನೀಡಿದರು.

ಬಳಿಕ ಮಾತನಾಡಿದ ಶಾಸಕರು, ಅತೀವೃಷ್ಟಿಯಿಂದಾಗಿ ಔರಾದ(ಬಿ) ಹಾಗೂ ಕಮಲನಗರ ತಾಲ್ಲೂಕುಗಳಲ್ಲಿ ಸಾಕಷ್ಟು ಹಾನಿಯಾಗಿದೆ. ಬೆಳೆ ನಷ್ಟವಾಗಿ ರೈತರು ಕಂಗಾಗಲಾಗಿದ್ದಾರೆ. ಪರಿಸ್ಥಿತಿಯ ಗಂಭೀರತೆಯನ್ನು ಮನಗಂಡು ಈಗಾಗಲೇ ಮುಖ್ಯಮಂತ್ರಿಗಳು ಹಾಗೂ ಸಂಬಂಧಪಟ್ಟ ಸಚಿವರನ್ನು ಭೇಟಿಯಾಗಿ ಅತೀವೃಷ್ಟಿ ಪೀಡಿತ ಪ್ರದೇಶಗಳಿಗೆ ಪರಿಹಾರ ಘೋಷಿಸುವಂತೆ ಮನವಿ ಸಲ್ಲಿಸಿದ್ದೇನೆ. ವಿಧಾನಸಭಾ ಅಧಿವೇಶನದಲ್ಲಿಯೂ ಹಾನಿಯ ಬಗ್ಗೆ ಸರ್ಕಾರದ ಗಮನ ಸೆಳೆದಿದ್ದೇನೆ. ಔರಾದ(ಬಿ) ವಿಧಾನಸಭಾ ಕ್ಷೇತ್ರದಲ್ಲಿ ಅಂದಾಜು 10 ಸಾವಿರ ಹೆಕ್ಟೇರ್‌ಗೂ ಹೆಚ್ಚು ಬೆಳೆ ಹಾನಿಯಾಗಿದೆ. ಪ್ರತಿ ಎಕರೆಗೆ ಸುಮಾರು 25 ಸಾವಿರ ಪರಿಹಾರ ಘೋಷಿಸಬೇಕೆಂದು ಸರ್ಕಾರಕ್ಕೆ ಆಗ್ರಹಿಸಿದ್ದೇನೆ. ನಾನು ನಿಮ್ಮೊಂದಿಗಿದ್ದು ಯಾವುದೇ ಕಾರಣಕ್ಕೂ ಆತಂಕಪಡಬಾರದು ಎಂದು ರೈತರಿಗೆ ತಿಳಿಸಿದರು.

### ಬೆಳೆವಿಮೆಯ ಸೌಲಭ್ಯ ಸಿಗಲಿ

**ಕ್ಷೇತ್ರದ ಎಲ್ಲಾ ರೈತರು ಬೆಳೆವಿಮೆ ಮಾಡಿಸಿಕೊಂಡಿದ್ದಾರೆ. ಅವರಿಗೆ ಲಾಭವಾಗುವ ದಿಶೆಯಲ್ಲಿ ಅಧಿಕಾರಿಗಳು ಕೆಲಸ ಮಾಡಬೇಕು. ಸಮೀಕ್ಷೆ ಮಾಡಲು ಹೋಗುವ ಮುನ್ನ ಗ್ರಾಮದಲ್ಲಿ ಡೊಂಗೂರ ಸಾರಿಸಿ ಹೋಗಬೇಕು. ಸಮೀಕ್ಷೆಯಿಂದ ಯಾವೊಂದು ಕೃಷಿ ಭೂಮಿಯೂ ಬಿಟ್ಟು ಹೋಗದಂತೆ ನೋಡಿ ಕೊಳ್ಳಬೇಕು. ಬೆಳೆ ವಿಮೆ ವಿಷಯದಲ್ಲಿ ರೈತರಿಗೆ ಸಾಕಷ್ಟು ಅನ್ಯಾಯವಾಗುತ್ತಿರುವುದು ಗಮನಕ್ಕೆ ಬಂದಿದೆ. ಈ ಬಾರಿ ಅತೀವೃಷ್ಟಿಯಿಂದ ರೈತರು ಸಾಕಷ್ಟು ತೊಂದರೆಯಲ್ಲಿದ್ದಾರೆ. ಅವರಿಗೆ ವಿಮೆಯ ಲಾಭ ಸಿಗಬೇಕು. ಕೃಷಿ, ತೋಟಗಾರಿಕೆ, ಕಂದಾಯ ಇಲಾಖೆಯ ಅಧಿಕಾರಿಗಳು ಸಹಕರಿಸಬೇಕು.**

### ಅಧಿಕಾರಿಗಳಿಗೆ ತರಾಟೆ:

**ಗ್ರಾ ಪಂ ಅಭಿವೃದ್ಧಿ ಅಧಿಕಾರಿಗಳು, ಗ್ರಾಮ ಲೆಕ್ಕಾಧಿಕಾರಿಗಳು, ಎಂಜಿನೀಯರ್‌ಗಳ ಕಾರ್ಯವೈಖರಿಯ ಬಗ್ಗೆ ಸಾರ್ವಜನಿಕರು ಬೇಸರ ವ್ಯಕ್ತಪಡಿಸುತ್ತಿದ್ದು ತಾವೇನು ಮಾಡುತ್ತಿದ್ದೀರಿ ಎಂದು ತರಾಟೆಗೆ ತೆಗೆದುಕೊಂಡರು. ಎಲ್ಲರೂ ತಮ್ಮ ತಮ್ಮ ಕರ್ತವ್ಯಗಳನ್ನು ಸರಿಯಾಗಿ ನಿಭಾಯಿಸಬೇಕು. ಸಂಕಷ್ಟದಲ್ಲಿರುವ ಜನತೆಗೆ ಸ್ಪಂದಿಸಬೇಕು. ನೊಂದವರಿಗೆ ಸರ್ಕಾರದ ಪರಿಹಾರವನ್ನು ತಲುಪಿಸಲು ಪ್ರಮಾಣಿಕವಾಗಿ ಪ್ರಯತ್ನಿಸಬೇಕು ಎಂದು ತಿಳಿಸಿದರು.**

## ಮೂಲಭೂತ ಸೌಕರ್ಯಗಳು ಕಾಣದ 4 ನೇ ವಾರ್ಡ್



ಉದಯವಾಹಿನಿ ಚಿತ್ರ

• ಉದಯವಾಹಿನಿ ಕಾರಟಗಿ

**ಮಾರಕ ರೋಗಗಳು ಹರಡುವ ಭೀತಿ**

ಪಟ್ಟಣದ 4 ನೆಯ ವಾರ್ಡಿನಲ್ಲಿ ಮೂಲಭೂತ ಸೌಕರ್ಯಗಳು ಕಣ್ಮರೆಯಾಗಿವೆ, ವಾರ್ಡಿನ ಹುಲಿಗೆಮ್ಮ ದೇವಸ್ಥಾನದವರೆಗೆ ಮುಖ್ಯ ರಸ್ತೆಯ ತಗ್ಗು ದಿನ್ನೆಗಳಿಂದ ಕೂಡಿದೆ ಮಳೆ ಬಂದಾಗ ನೀರು ರಸ್ತೆಯಲ್ಲಿ ತುಂಬಿ ಹರಿಯುತ್ತೆ ಹಾಗೂ ವಾರ್ಡಿನಲ್ಲಿ ಒಳಚರಂಡಿ ವ್ಯವಸ್ಥೆ ಸೌಕರ್ಯ ಇಲ್ಲದೆ ಇರುವುದರಿಂದ ಮಳೆ ಸುರಿದಾಗ ಪ್ರತಿ ಬಾರಿಯೂ ಮನೆಗಳ ಮುಂದೆ ನೀರಿ ನಿಲ್ಲುತ್ತೆ ಅಲ್ಲದೆ ಕೆಲವು ಮನೆಗಳ ಬಳಕೆಯ ನೀರು ರಸ್ತೆಗೆ ಬಿಡುವುದರಿಂದ ಇನ್ನೊಬ್ಬರಿಗೆ ತೊಂದರೆಯಾಗುತ್ತಿದೆ. ಮಳೆ ನೀರು ಎಲ್ಲೆಂದರಲ್ಲಿ ನಿಲ್ಲುವುದರಿಂದ ಸೊಳ್ಳೆಗಳ ಉಲ್ಬಣಗೊಂಡು ಮಾರಕ ಕಾಯಿಲೆಗಳು ಬರುವ ಭೀತಿಯಲ್ಲಿ ಸಾರ್ವಜನಿಕರು ದಿನಗಳೆಯುತಿದ್ದಾರೆ. ವಾರ್ಡಿನ ಚುನಾಯಿತ ಜನಪ್ರತಿನಿಧಿಗಳು ಯಾವುದಕ್ಕೂ ಕಿವಿ ಕೊಡುತ್ತಿಲ್ಲ ಗೆಲ್ಲುವವರೆಗೂ ಮಾತ್ರ ಅಭಿವೃದ್ಧಿಯ ಮಾತುಗಳಷ್ಟೇ ಎಂದು ಸಾರ್ವಜನಿಕರು ಆರೋಪಿಸುತ್ತಿದ್ದಾರೆ.

ಸರಿಯಾದ ಚರಂಡಿ ವ್ಯವಸ್ಥೆ ಇಲ್ಲದಿರುವುದರಿಂದ ವಾರ್ಡಿನ ಮಂಜುನಾಥ ಕುಂಬಾರ ಮನೆ ಸೇರಿದಂತೆ ಹಲವರ ಮನೆಗಳ ಮುಂದೆ ಪಕ್ಕದ ಮನೆಗಳ ಬಳಕೆ ನೀರು ಹಾಗೂ ಮಳೆ ನೀರಿನಿಂದ ತೊಂದರೆ ಎದುರಿಸುತ್ತಿದ್ದಾರೆ.

ಕೂಡಲೇ ವಾರ್ಡಿನ ಜನಪ್ರತಿನಿಧಿಗಳು ಸಾರ್ವಜನಿಕರ ಹಿತಾಸಕ್ತಿಯನ್ನು ಕಾಪಾಡಲು ವಾರ್ಡಿನ ಜನರು ಒತ್ತಾಯಿಸಿದ್ದಾರೆ.

## ಡಿಜೆ ಬಳಕೆ ಅವಕಾಶಕ್ಕೆ ನಿರಾಕರಣೆ: ನಿರ್ಬಂಧ ಸಡಿಲಕ್ಕೆ ಮುಖಂಡರ ಒತ್ತಾಯ

• ಉದಯವಾಹಿನಿ ಕಾರವಾರ

ಡಿಜೆ ಬಳಕೆ ಮಾಡದಂತೆ ಸುಪ್ರೀಂ ಕೋರ್ಟ್ ಆದೇಶ ಪಾಲನೆ ಮಾಡಬೇಕಿದ್ದು, ಗಣೇಶ ಚತುರ್ಥಿ ಹಾಗೂ ಈದ್ ಮಿಲಾದ್ ವೇಳೆ ಡಿಜೆ ಬಳಕೆಗೆ ಅವಕಾಶ ನೀಡಲಾಗದು' ಎಂದು ಜಿಲ್ಲಾಧಿಕಾರಿ ಕೆ.ಲಕ್ಷ್ಮಿ ಪ್ರಿಯಾ ಹೇಳಿದರು.

ಇಲ್ಲಿನ ಜಿಲ್ಲಾಧಿಕಾರಿ ಕಚೇರಿ ಸಭಾಂಗಣದಲ್ಲಿ ಹಮ್ಮಿಕೊಂಡಿದ್ದ ಸೌಹಾರ್ದ ಸಭೆಯಲ್ಲಿ ಅವರು ಹಿಂದೂ, ಮುಸ್ಲಿಂ ಸಮುದಾಯದ ಮುಖಂಡರಿಗೆ ಸೂಚನೆ ನೀಡಿದರು. ಆ.27ರಂದು ನಡೆಯಲಿರುವ ಗಣೇಶ ಚತುರ್ಥಿ, ಸೆ.5ರಂದು ನಡೆಯಲಿರುವ ಈದ್ ಮಿಲಾದ್ ಹಬ್ಬವನ್ನು ಶಾಂತಿಯುತವಾಗಿ ಆಚರಿಸಬೇಕು. ಸರ್ಕಾರದ ಮಾರ್ಗಸೂಚಿಗಳ ಉಲ್ಲಂಘನೆ ಆಗದಂತೆ ಎಚ್ಚರವಹಿಸಬೇಕು.

ಶಾಂತಿ, ಸೌಹಾರ್ದತೆಗೆ ಧಕ್ಕೆ ತರುವ ಯಾವುದೇ ಕೆಲಸಕ್ಕೆ ಅವಕಾಶ ನೀಡಬಾರದು' ಎಂದರು.'ಪ್ಲಾಸ್ಟರ್ ಆಫ್ ಪ್ಯಾರಿಸ್‌ನಿಂದ ಸಿದ್ಧಪಡಿಸಿದ ಮೂರ್ತಿಗಳನ್ನು ಪ್ರತಿಷ್ಠಾಪಿಸಬಾರದು. ಸಾರ್ವಜನಿಕ ಗಣೇಶೋತ್ಸವ ಸಮಿತಿಯವರು ಉತ್ಸವ ಆಯೋಜನೆಗೆ ಸಿದ್ಧಪಡಿಸುವ ಮಂಟಪ, ಪೆಂಡಾಲ್‌ಗಳಲ್ಲಿ ಏಕಬಳಕೆಯ ಪ್ಲಾಸ್ಟಿಕ್ ಬಳಕೆ ಮಾಡಬಾರದು. ಪರಿಸರಕ್ಕೆ ಹಾನಿಕಾರಕವಾಗುವ ಬಣ್ಣ, ಇನ್ನಿತರ ರಾಸಾಯನಿಕ ಪದಾರ್ಥಗಳನ್ನು ಬಳಸಬಾರದು. ಹಸಿರು ಪಟಾಕಿಗಳ ಮಾರಾಟಕ್ಕೆ, ಬಳಕೆಗೆ ಮಾತ್ರ ಅವಕಾಶ ನೀಡಲಾಗುವುದು ಎಂದು ಸೂಚಿಸಿದರು.

ಡಿಜೆ ಬಳಕೆಗೆ ಸಂಪೂರ್ಣ ನಿರ್ಬಂಧ ವಿಧಿಸುವುದು ಸರಿಯಲ್ಲ. ತೀರಾ ದೊಡ್ಡದಾಗಿ, ಕರ್ಕಶ ಶಬ್ದ ಹೊರಡಿಸುವ ಧ್ವನಿವರ್ಧಕಬಳ ಬಳಕೆಗೆ ನಿರ್ಬಂಧಿಸಬಹುದು. ಆದರೆ, ಹಬ್ಬದ ವೇಳೆ ಮಾತ್ರ ಡಿಜೆ ಬಳಕೆಗೆ ಅವಕಾಶ ನೀಡಬೇಕು' ಎಂದು ಗಣೇಶೋತ್ಸವ ಸಮಿತಿ ಪ್ರಮುಖರಾದ ಶ್ಯಾಮ ಸೈಲ್, ಆನಂದು ನಾಯ್ಕ, ಇತರರು ಒತ್ತಾಯಿಸಿದರು.

ಸಮಿತಿಯವರ ಬೇಡಿಕೆಗೆ ಒಪ್ಪದ ಜಿಲ್ಲಾಧಿಕಾರಿ, ಕೋರ್ಟ್ ಸೂಚನೆ ಪಾಲಿಸುವುದು ಪ್ರತಿಯೊಬ್ಬರ ಜವಾಬ್ದಾರಿ. ರಾತ್ರಿ 10ರ ವರೆಗೆ ಹೆಚ್ಚು ಡೆಸಿಬಲ್ ಅಲ್ಲದ, ಸಾಧಾರಣ ಧ್ವನಿವರ್ಧಕ ಬಳಸಬಹುದು. ಡಿಜೆ ಮಾತ್ರ ಬಳಕೆ ಮಾಡುವಂತಿಲ್ಲ' ಎಂದರು.


ಉದಯವಾಹಿನಿ ಚಿತ್ರ

### ಸಿ.ಸಿಟಿವಿ ಕ್ಯಾಮೆರಾ ಕಡ್ಡಾಯ

**'ಸಾರ್ವಜನಿಕ ಗಣೇಶೋತ್ಸವ ಸಮತಿಯವರು ಮೂರ್ತಿ ಪ್ರತಿಷ್ಠಾಪಿಸುವ ಮಂಟಪಗಳಲ್ಲಿ ಸಿಸಿಟಿವಿ ಕ್ಯಾಮೆರಾಗಳನ್ನು ಕಡ್ಡಾಯವಾಗಿ ಅಳವಡಿಸಬೇಕು. ಹಬ್ಬದ ನೆಪದಲ್ಲಿ ಲಾಟರಿ ಡ್ರಾ, ಚಟುವಟಿಕೆ ನಡೆಸಲು ಅವಕಾಶ ಇಲ್ಲ' ಎಂದು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ದೀಪನ್ ಎಂ.ಎನ್ ಹೇಳಿದರು.**

**'ಪೆಂಡಾಲ್‌ಗಳ ಬಳಿ ಸ್ವಯಂ ಸೇವಕರನ್ನು ನಿಯೋಜಿಸಬೇಕು ಪೊಲೀಸ್ ಇಲಾಖೆಯ ಮಾರ್ಗಸೂಚಿಯಂತೆ ಎಲ್ಲಾ ಅಗತ್ಯ ಮುನ್ನೆಚ್ಚರಿಕೆ ಕೈಗೊಳ್ಳಬೇಕು' ಎಂದರು.**

## ಸಹಕಾರ ಇದ್ದಲ್ಲಿ ಸಹಕಾರಿ ಬೆಳವಣಿಗೆ ಸಾಧ್ಯ: ಉದ್ಯಮಿ. ಎ. ರಾಮಬಾಬು

• ಉದಯವಾಹಿನಿ ಸಿಂಧನೂರು

ಉದ್ಘಾಟರಾಗಿ ಆಗಮಿಸಿದ್ದ ಉದ್ಯಮಿ ಎ.ರಾಮಬಾಬು ಅವರು ಮಾತನಾಡಿ, 23 ವರ್ಷಗಳ ಕಾಲ ನಿರಂತರವಾಗಿ ಈ ಸೌಹಾರ್ದ ಸಹಕಾರಿ ಬ್ಯಾಂಕ್ ನಡೆದುಕೊಂಡು ಬಂದಿರುವುದು ಹೆಮ್ಮೆಯ ವಿಷಯ, ನಿರ್ದೇಶಕರ ಸರ್ವ ಸದಸ್ಯರ, ಬಹಳ ಮುಖ್ಯವಾಗಿ ಅಧ್ಯಕ್ಷರು ಸಹಕಾರ ನೀಡಿದ್ದರಿಂದ ಇದು ಸಾಧ್ಯವಾಗಿದೆ ಎಂದರು.

2024–25 ನೇ ಸಾಲಿನಲ್ಲಿ ನಮ್ಮ ಬ್ಯಾಂಕಿನಿಂದ ಈಗಾಗಲೇ 15 ಕೋಟಿ ವ್ಯವಹಾರ ಮಾಡುತ್ತಿದ್ದೇವೆ, ಮುಂದಿನ ಎರಡು ವರ್ಷಗಳಲ್ಲಿ 25 ಕೋಟಿ ಠೇವಣಿ ನಿರೀಕ್ಷೆಯನ್ನು ಇಟ್ಟುಕೊಂಡಿದ್ದೇವೆ. ಠೇವಣಿ, ಸಾಲ ವಿತರಣೆ, ಮತ್ತು ವಸೂಲಿ, ಈ ಮೂರು ವಿಷಯಗಳು ಸಹಕಾರಿ ಬ್ಯಾಂಕುಗಳಿಗೆ ಬಹಳ ಮುಖ್ಯವಾದವು ಎಂದು ಅಧ್ಯಕ್ಷ ಎಸ್.ಎಸ್.ಹಿರೇಮಠ ಹೇಳಿದರು. ನಗರದ ಬಸವೇಶ್ವರ ಸರ್ಕಲ್ ನಲ್ಲಿರುವ ಜಗದ್ಗುರು ಪಂಚಾಚಾರ್ಯ ಪತ್ತಿನ ಸೌಹಾರ್ದ ಸಹಕಾರಿ ನಿಯಮಿತ ಬ್ಯಾಂಕಿನ 23 ನೇ ವಾರ್ಷಿಕ ಸರ್ವ ಸದಸ್ಯರ ಮಹಾಸಭೆ ನಡೆಯಿತು. ಈ ಸಭೆಯಲ್ಲಿ,ಸಹಕಾರಿ ಪಿತಾಮಹ ಸಿದ್ದನಗೌಡ ಪಾಟೀಲ್ ಅವರ ಭಾವಚಿತ್ರಕ್ಕೆ ಪುಷ್ಪಾರ್ಚನೆ ಮಾಡಿ ಮಾತನಾಡಿದ


ಉದಯವಾಹಿನಿ ಚಿತ್ರ

**ಠೇವಣಿದಾರರ ಸದಸ್ಯರ ಸಂಖ್ಯೆ 357, 2024–25 ನೇ ವಾರ್ಷಿಕ ನಿವ್ವಳ ಲಾಭ 70 ಲಕ್ಷ, ಸಹಕಾರಿ ಅಂದರೆ ಬ್ಯಾಂಕಿನಲ್ಲಿ ಅಷ್ಟೇ ವ್ಯವಹಾರ ಮಾಡುವುದಷ್ಟೇ ಅಲ್ಲದೆ ಪ್ರತಿಯೊಬ್ಬರಲ್ಲೂ ಸಹಕಾರಿ ಮನೋಭಾವನೆ ಹೊಂದಬೇಕು. -ಪಂಪಯ್ಯಸ್ವಾಮಿ, ಸಾಲಿಮಠ**

ಅವರು, ಈಗಾಗಲೇ ಸರ್ಕಾರದ ಮಟ್ಟದಲ್ಲಿ ಸಹಕಾರಿ ಬ್ಯಾಂಕುಗಳಲ್ಲಿ ಬದಲಾವಣೆ ತರುವ ಚರ್ಚೆಗಳು ಸಹ ನಡೆಯುತ್ತಿದೆ. ಬದಲಾವಣೆಗಳಿಗೆ ಸ್ಪಂದಿಸಬೇಕು ಜೊತೆಗೆ ಠೇವಣಿದಾರರ ಹಿತ ಕಾಪಾಡಬೇಕು ಎಂದರು.

ಲಿಂಗನಗೌಡ ವಾರ್ಷಿಕ ಅನುಮೋದನೆ ಮಂಡಿಸಿದರು. ವಾರ್ಷಿಕ ಸರ್ವ ಸದಸ್ಯರ ಸಭೆಯಲ್ಲಿ ಚನ್ನಯ್ಯಸ್ವಾಮಿ

**ಸಾಲ ವಿತರಣೆ ಮಾಡಿದ ಮೇಲೆ ಅದರ ವಸೂಲಿ ಕೂಡ ಅಷ್ಟೇ ಪ್ರಮಾಣದಲ್ಲಿ ಮಾಡಬೇಕು ವಸೂಲಿ ಮಾಡುವಾಗ ನಿಷ್ಠುರತೆಬೇಕು. ಇಲ್ಲದಿದ್ದರೆ ಸಾಲ ವಸೂಲಿ ಕಷ್ಟ. ಹಾಗೆ ವಾರ್ಷಿಕ ಸಭೆ ಇದ್ದಾಗ ಪತ್ರಿಕೆಗೆ ಹಾಕುವುದಷ್ಟೇ ಮುಖ್ಯವಲ್ಲ ಪ್ರತಿಯೊಬ್ಬರ ಸರ್ವ ಸದಸ್ಯರ ಮನೆಗೆ ನೋಟಿಸ್ ಕಳಿಸಬೇಕೆಂದು ತಮ್ಮ ಹಿರಿತನದ ಅನುಭವದ ನುಡಿಗಳನ್ನು ಹಾಡಿದರು. -ಕಾಳಿಂಗಪ್ಪ, ಹಿರಿಯ ವಕೀಲ**

ಸ್ಥಾವರಮಠ, ಸೈಯಾದ್ ಖಲೀಲ್, ಜಿ.ಉಮೇಶ, ಸರೋಜಮ್ಮ, ಸಹನಾ ಹಿರೇಮಠ, ಜ್ಯೋತಿ ಸಾಲಿಮಠ. ಸನ್ನಿಧಿ ಹಿರೇಮಠ, ಮಲ್ಲನಗೌಡ, ಲಿಂಗರಾಜ ಕರಡಕಲ್, ಕವಿತಾ ಹಿರೇಮಠ, ಮರಿಸ್ವಾಮಿ ಹಿರೇಮಠ. ಆನಂದ ಹಿರೇಠ. ಗೀತಾ ಹಿರೇಮಠ. ಸತೀಶ್ ಹಿರೇಮಠ ಸೇರಿದಂತೆ ಸರ್ವ ಸದಸ್ಯರು, ಕುಟುಂಬದವರು, ಹಾಗೂ ಬ್ಯಾಂಕಿನ ಸಿಬ್ಬಂದಿ ಅಕ್ಷಯಕುಮಾರ ಶೇಖರಪ್ಪ ಬಾಲಿ ಭಾಗವಹಿಸಿದ್ದರು.

## ಕಾನೂನು ಗೌರವಿಸುವರಿಗೆ ನಾವು ಗೌರವಿಸುತ್ತೇವೆ:ಸಿಪಿಐ

• ಉದಯವಾಹಿನಿ ತಾಳಿಕೋಟೆ

ಯಾವುದೇ ಹಬ್ಬ ಹರಿದಿನಗಳಾಗಲಿ ಶಾಂತತೆಯಿಂದ ಹಾಗೂ ಸೌಹಾರ್ದತೆ ಎಂಬ ಭಾವನೆಯೊಂದಿಗೆ ಆಚರಣೆ ನಡೆದರೆ ಎಲ್ಲರಿಗೂ ಅನುಕೂಲವಾಗಲಿದೆ ಆ ಆಚರಣೆ ಆಗತಕ್ಕಂತಹ ಹಬ್ಬಕ್ಕೆ ಅರ್ಥ ಬರಲಿದೆ ಕಾರಣ ಗಣೇಶ ಹಬ್ಬ ಹಾಗೂ ಈದ್ ಮೀಲಾದ್ ಹಬ್ಬವನ್ನು ಶಾಂತತೆಯೊಂದಿಗೆ ಆಚರಿಸಿಕೊಂಡು ತಾಳಿಕೋಟೆಯ ಇತಿಹಾಸ ಕಾಪಾಡಬೇಕೆಂದು ಸಿಪಿಐ ಮಹ್ಮದ್‌ಫಸಿಯುದ್ದೀನ್ ಅವರು ಹೇಳಿದರು.

ಗೌರಿ ಗಣೇಶ ಹಬ್ಬ ಮತ್ತು ಈದ್ ಮೀಲಾದ್ ಹಬ್ಬದ ಕುರಿತು ಶ್ರೀ ವಿಠ್ಠಲ ಮಂದಿರದಲ್ಲಿ ತಾಳಿಕೋಟೆ ತಾಲ್ಲೂಕಾ ಆಡಳಿತದ ವತಿಯಿಂದ ಏರ್ಪಡಿಸಲಾದ ಶಾಂತಿ ಸಭೆಯಲ್ಲಿ ಉಪಸ್ಥಿತ ಸಭಿಕರನ್ನುದ್ದೇಶಿಸಿ ಮಾತನಾಡುತ್ತಿದ್ದ ಅವರು ಶಾಂತಿ ಸೌಹಾರ್ದತೆ ಎಂಬುದು ನಮ್ಮ ಪೊಲೀಸ್ ಇಲಾಖೆಗೆ ಅಗತ್ಯವಾಗಿದೆ. ಈ ಸಲ ಗಣೇಶ ಮೂರ್ತಿ ಪ್ರತಿಷ್ಠಾಪನೆಗಳಲ್ಲಿ ಈ ಹಿಂದಿನಕ್ಕಿಂತಲೂ ಪ್ರತಿಷ್ಠಾಪನೆಯ ಕಾರ್ಯ ಹೆಚ್ಚಿಗೆ ನಡೆಯುತ್ತಲಿದೆ ಎಂಬುದು ಗೊತ್ತಾಗಿದೆ ಯಾವುದೇ ಕಾರ್ಯ ಮಾಡಿದರೆ ಕಾನೂನು ವಿರೋಧ ಆಗಬಾರದೆಂದರು. ಗಣೇಶ ಮೂರ್ತಿಯ ಪ್ರತಿಷ್ಠಾಪನೆಯ ಹಾಗೂ ವಿಸರ್ಜನೆಯ ಮಾರ್ಗವನ್ನು ಪೊಲೀಸ್ ಇಲಾಖೆಗೆ ತಿಳಿಸುವ ಕಾರ್ಯ ಮಾಡಬೇಕು ದೈಹಿಕವಾಗಲಿ ಮಾನಸಿಕವಾಗಲಿ ಯಾರಿಗೂ ತೊಂದರೆಯಾಗದಂತೆ ಮುಕ್ತವಾಗಿ ನಡೆದುಕೊಳ್ಳಬೇಕೆಂದರು. ಅಗ್ನಿ ಶಾಮಕ ಠಾಣೆಯ ವತಿಯಿಂದ ಹಾಗೂ ಪುರಸಭೆ, ಕೆಇಬಿ, ಖಾಸಗಿ ಸ್ಥಳದಲ್ಲಿ ಮೂರ್ತಿ ಪ್ರತಿಷ್ಠಾಪಿಸುವದಾದರೆ ಅವರಿಂದ ನಿಗಧಿತ ನಮೂನೆಯ ಪತ್ರ ಧ್ವನಿ ವರ್ದಕ ಅನುಮತಿ, ಇವು ಮುಖ್ಯವಾಗಿ ಗಣೇಶ ಮೂರ್ತಿ ಪ್ರತಿಷ್ಠಾಪಿಸುವವರು ಪಡೆದುಕೊಳ್ಳಬೇಕೆಂದು ಸೂಚಿಸಿದರು.



ಉದಯವಾಹಿನಿ ಚಿತ್ರ

## ಮೂರು ದಿನದಿಂದ ಜಾನುವಾರುಗಳಿಗಿಲ್ಲ ಮೇವು

• ಉದಯವಾಹಿನಿ ತೇರದಾಳ

ತಾಲ್ಲೂಕಿನ ತಮದಡ್ಡಿ ಹಾಗೂ ಹಳಿಂಗಳಿಯ ಜನವಸತಿ ಪ್ರದೇಶಗಳಿಗೆ ಕೃಷ್ಣಾ ನದಿಯ ನೀರು ಬಂದ ಪರಿಣಾಮ ಅಲ್ಲಿನ ಜನ ತಮ್ಮ ಜಾನುವಾರುಗಳನ್ನು ಸುರಕ್ಷಿತ ಸ್ಥಳಗಳಿಗೆ ಸ್ಥಳಾಂತರಿಸಿದ್ದಾರೆ. ಮೂರು ದಿನ ಕಳೆದರೂ ಜಾನುವಾರುಗಳಿಗೆ ಮೇವು ಕೊಡದೆ, ಸಂತ್ರಸ್ತರಿಗೆ ಕಾಳಜಿ ಕೇಂದ್ರಗಳನ್ನು ತೆರೆಯದೆ ಸತಾಯಿಸುತ್ತಿದ್ದಾರೆ ಎಂದು ಸಂತ್ರಸ್ತರು ಆರೋಪಿಸಿದ್ದಾರೆ. ಕೃಷ್ಣಾ ನದಿಯಲ್ಲಿ ಶನಿವಾರ ಎರಡು ಅಡಿಯಷ್ಟು ನೀರಿನ ಮಟ್ಟ ಏರಿಕೆಯಾಗಿದ್ದು, ತಮದಡ್ಡಿಯ ಚನಾಳ ವಸತಿ ಪ್ರದೇಶ ಹಾಗೂ ಹಳಿಂಗಳಿಯ ಗುಳಿಮಳೆ ಜನವಸತಿ ಪ್ರದೇಶಗಳ ಮತ್ತಷ್ಟು ಮನೆಗಳು ಜಲಾವೃತವಾಗಿವೆ.

ಅಲ್ಲಿನ ಜನ ತಮ್ಮ ಜಾನುವಾರುಗಳನ್ನು ಸುರಕ್ಷಿತ ಸ್ಥಳಗಳಿಗೆ ಸ್ಥಳಾಂತರಿಸಿದ್ದಾರೆ. ಸಂತ್ರಸ್ತರು ತಮ್ಮ ಜಾನುವಾರುಗಳನ್ನು ರಸ್ತೆ ಬದಿ ಕಟ್ಟಿ, ಟ್ರ್ಯಾಕ್ಟರ್ ಟ್ರಾಲಿಗಳಲ್ಲಿ ತಾಡಪಾಲುಗಳ ಸಹಾಯದಿಂದ ತಮಗೆ ಆಸರೆ ಮಾಡಿಕೊಂಡಿದ್ದಾರೆ. ಇವುಗಳಿಂದ ದೂರದಲ್ಲಿ ಕಾಳಜಿ ಕೇಂದ್ರಗಳನ್ನು ತೆರೆದಿರುವುದರಿಂದ ಕೇವಲ ಊಟಕ್ಕೆಂದು ಬಯಲಲ್ಲಿ ದನಕರುಗಳನ್ನು ಬಿಟ್ಟು ಸಂತ್ರಸ್ತರು ಹೋಗುತ್ತಿಲ್ಲ. ಮತ್ತು ಕಾಳಜಿ ಕೇಂದ್ರ, ತೆರೆದಿರುವ ಬಗ್ಗೆ ಸಂತ್ರಸ್ತರಿಗೆ ಮಾಹಿತಿ ಅಧಿಕಾರಿಗಳು ನೀಡಿಲ್ಲ ಎನ್ನುತ್ತಾರೆ ತಮದಡ್ಡಿಯ ಸಂತ್ರಸ್ತ ಶಿವಾನಂದ ಗಸ್ತಿ. ರಾತ್ರಿಯಿಂದಲೇ ನೀರು ಹೆಚ್ಚಾಗುತ್ತಿದ್ದು ಮನೆ ಮುಂದೆ ಬಂದಿದೆ. ವಿಷ ಜಂತುಗಳ ಹೆದರಿಕೆಯಿಂದ ರಾತ್ರಿಯಿಡಿ ನಿದ್ರೆ ಮಾಡಿಲ್ಲ. ಪ್ರತಿ ವರ್ಷ ಪ್ರವಾಹ ಬಂದಾಗ ಮಾತ್ರ ಇತ್ತ ಸುಳಿಯುವ ಅಧಿಕಾರಿಗಳು ನಂತರದಲ್ಲಿ ನಮ್ಮ ಸಮಸ್ಯೆ ಕೇಳುವುದಿಲ್ಲ. ನಮಗೆ ಶಾಶ್ವತ ಪರಿಹಾರ ಒದಗಿಸುತ್ತಿಲ್ಲ ಎಂದು ಸಂತ್ರಸ್ತ ಉಳಪ್ಪ ಹಳೇಮನಿ ಹಾಗೂ ಸಂಜು ಹಳೇಮನಿ ತಿಳಿಸಿದರು.

# ಪರಿಸ್ಥಿತಿ ಬದಲಾದರೂ ಕಾಂಗ್ರೇಸ್‌ನ ಮನಸ್ಥಿತಿ ಬದಲಾಗಿಲ್ಲ: ಸಿ.ಟಿ.ರವಿ

• ಬಯಲು ಸಂಸ್ಥೆ ಆಶ್ರಯದಲ್ಲಿ ನಗರದಲ್ಲಿ ನಡೆದ 'ಸಂವಿಧಾನ 42ನೇ ತಿದ್ದುಪಡಿ ವಿಚಾರ ಸಂಕಿರಣ

• ಉದಯವಾಹಿನಿ ಗದಗ

ಪರಿಸ್ಥಿತಿ ಬದಲಾಗಿದೆ. ಆದರೆ, ಕಾಂಗ್ರೆಸ್‌ನ ಮನಸ್ಥಿತಿ ಬದಲಾಗಿಲ್ಲ. ಕಾಂಗ್ರೆಸ್ ಪಕ್ಷ ತನ್ನ ಸ್ವಾರ್ಥಕ್ಕಾಗಿ ಅತಿಹೆಚ್ಚು ಬಾರಿ ಸಂವಿಧಾನಕ್ಕೆ ತಿದ್ದುಪಡಿ ಮಾಡಿದೆ. ತುರ್ತು ಪರಿಸ್ಥಿತಿ ಸಂದರ್ಭದಲ್ಲಿ ಗಾಂಧೀಜಿ, ಡಾ. ಬಿ.ಆರ್.ಅಂಬೇಡ್ಕರ್ ಬದುಕಿದ್ದರೆ ಇವರು ಅವರನ್ನೂ ಜೈಲಿಗಟ್ಟುತ್ತಿದ್ದರು ಎಂದು ವಿಧಾನ ಪರಿಷತ್ ಸದಸ್ಯ ಸಿ.ಟಿ.ರವಿ ಟೀಕಿಸಿದರು. ಬಯಲು ಸಂಸ್ಥೆ ಆಶ್ರಯದಲ್ಲಿ ನಗರದಲ್ಲಿ ನಡೆದ ಸಂವಿಧಾನ 42ನೇ ತಿದ್ದುಪಡಿ' ವಿಚಾರ ಸಂಕಿರಣದಲ್ಲಿ ಮಾತನಾಡಿದರು.

ಕಾಂಗ್ರೆಸ್ಸಿಗರಿಗೆ ನಿಜವಾಗಿಯೂ ಸಂವಿಧಾನದ ಬಗ್ಗೆ ಗೌರವ ಇದ್ದರೆ ನ್ಯಾಯಾಲಯದ ತೀರ್ಪನ್ನು ನ್ಯಾಯಾಲಯದಲ್ಲೇ ಪ್ರಶ್ನಿಸುತ್ತಿದ್ದರು. ಆದರೆ, ಅದನ್ನು ಅಧಿಕಾರದ ಅಹಂಕಾರದ ಮೂಲಕ ಎದುರಿಸುವ ದುಸ್ಸಾಹಸ ಮಾಡಿದರು' ಎಂದು ಆರೋಪ ಮಾಡಿದರು. ತುರ್ತು ಪರಿಸ್ಥಿತಿ ಸಂದರ್ಭದಲ್ಲಿ ವಿರೋಧ ಪಕ್ಷದ ನಾಯಕರನ್ನೆಲ್ಲಾ ಜೈಲಿಗಟ್ಟಿದರು. ಇಡೀ ದೇಶವೇ ಬಂಧೀಖಾನೆ ಆಯಿತು. ಸಂವಿಧಾನವೇ ಸರ್ವಾಧಿಕಾರಿಯ ಕಪಿಮುಷ್ಠಿಯಲ್ಲಿ ಸಿಲುಕಿತ್ತು. ಡಾ. ಬಿ.ಆರ್.ಅಂಬೇಡ್ಕರ್ ಬರೆದ ಸಂವಿಧಾನವನ್ನು ಮನಸೋ ಇಚ್ಛೆ ಬದಲಿಸಿದರು. ಯಾವುದನ್ನೂ ಪ್ರಶ್ನಿಸಲೇಬಾರದು ಎಂದು 42ನೇ ತಿದ್ದುಪಡಿ ಮಾಡಿದರು. ಈ ಮೂಲಕ ಇಂದಿರಾ ಗಾಂಧಿ ಪ್ರಜಾಪ್ರಭುತ್ವದ ಕತ್ತುಹಿಸುಕಿದರು' ಎಂದು ಕಿಡಿಕಾರಿದರು.

**ಸ್ವಾರ್ಥಕ್ಕಾಗಿ ಸಂವಿಧಾನಕ್ಕೆ ತಿದ್ದುಪಡಿ**

ಮಲ್ಲಿಕಾರ್ಜುನ ಖರ್ಗೆ, ಎಚ್.ಕೆ.ಪಾಟೀಲ ತುರ್ತು ಪರಿಸ್ಥಿತಿ ವಿರುದ್ಧ ಧ್ವನಿ ಎತ್ತಲಿಲ್ಲ. ಅವರು ಸರ್ವಾಧಿಕಾರಿಯ ಹೊಗಳುಭಟರಾಗಿದ್ದರು. ಆವಾಗ ಪ್ರಶ್ನೆ ಮಾಡಲಾಗದವರಿಗೆ ಈಗ ಸಂವಿಧಾನದ ಬಗ್ಗೆ ಮಾತನಾಡುವ ನೈತಿಕತೆ ಇಲ್ಲ. ಈಗ ಇಂದಿರಾ ಇಲ್ಲ, ಇಂಡಿಯಾ ಇದೆ ಎಂದರು.

ತುರ್ತು ಪರಿಸ್ಥಿತಿ ಸಂದರ್ಭದಲ್ಲಿ ಪ್ರಜೆಗಳ ಹಕ್ಕುಗಳನ್ನು ಕಿತ್ತುಕೊಳ್ಳಲಾಯಿತು. ಆಗ ಸಂವಿಧಾನ ಉಳಿಸಿ ಅಂತ ಹೋರಾಟ ಮಾಡಿದ್ದು, ಜನಸಂಘ. ಅವತ್ತು ಅವರು 'ಏರೋಪ್ಲೇನ್', ಚಪಾತಿ, ಹೈದರಾಬಾದ್ ಗೋಲಿಯಂತಹ ಕಠಿಣ ಶಿಕ್ಷೆಗಳನ್ನು ಸಹಿಸಿಕೊಂಡು ಹೋರಾಡಿದ್ದರಿಂದಲೇ ಅಂಬೇಡ್ಕರ್ ಸಂವಿಧಾನ ಉಳಿದಿದೆ. ಇಲ್ಲವಾದರೆ, ಈಗ ಇಂದಿರಾ ಸಂವಿಧಾನ ಇರುತ್ತಿತ್ತು ಎಂದು ಹೇಳಿದರು.



ಸಂವಿಧಾನ ಧಿಕ್ಕರಿಸಿದ ಕಾಂಗ್ರೆಸ್ಸಿಗರು ಈಗ ಸಾಂವಿಧಾನಿಕ ಸಂಸ್ಥೆಗಳನ್ನು ವಿರೋಧಿಸುತ್ತಿದ್ದಾರೆ. ಕಾಂಗ್ರೆಸ್ ಡಿಎನ್‌ಎಯಲ್ಲಿ ಪ್ರಜಾಪ್ರಭುತ್ವ ಇಲ್ಲ: ಸರ್ವಾಧಿಕಾರ ಧೋರಣೆ ಇದೆ. ಹಾಗಾಗಿ, ತುರ್ತು ಪರಿಸ್ಥಿತಿಗೆ 50 ವರ್ಷಗಳಾದರೂ ಹಿಂದಿನ ಘಟನೆಗಳನ್ನು ನನೆಪಿಸಿಕೊಳ್ಳುತ್ತಿರಬೇಕು ಎಂದರು.

1977ರಲ್ಲಿ ಚುನಾವಣೆ ನಡೆಯಿತು. ಜನರು ತುರ್ತು ಪರಿಸ್ಥಿತಿ ಸೋಲಿಸಿ, ಸರ್ವಾಧಿಕಾರಿಯಿಂದ ಸಂವಿಧಾನ ಉಳಿಸಿಕೊಂಡರು. ಅಧಿಕಾರ ಸಿಕ್ಕಾಗಲೆಲ್ಲಾ ಕಾಂಗ್ರೆಸ್ ಸಂವಿಧಾನ ಹತ್ತಿಕ್ಕುವ ಕೆಲಸ ಮಾಡುತ್ತ ಬಂದಿದೆ. ನಿರಂತರ ಜಾಗೃತಿ ಮೂಲಕ ಸಂವಿಧಾನ ರಕ್ಷಣೆ ಮಾಡಿಕೊಳ್ಳುವುದು ಇಂದಿನ ಜರೂರು ಎಂದರು.

ಡಾ. ಗುರುಲಿಂಗಪ್ಪ ಬಿಡನಾಳ ಅಧ್ಯಕ್ಷತೆ ವಹಿಸಿದ್ದರು. ವಿಧಾನ ಪರಿಷತ್ ಸದಸ್ಯ ಎಸ್.ವಿ. ಸಂಕನೂರ, ಬಯಲು ವೇದಿಕೆ ಸಂಯೋಜಕ ನಿಂಗಪ್ಪ ಪೂಜಾರ, ಡಾ.ಪುನೀತಕುಮಾರ ಬೆನಕವಾರಿ, ಬಿಜೆಪಿ ಗದಗ ಜಿಲ್ಲಾ ಘಟಕದ ಅಧ್ಯಕ್ಷ ರಾಜು ಕುರಡಗಿ, ಪ್ರಧಾನ ಕಾರ್ಯದರ್ಶಿ ಲಿಂಗರಾಜ ಪಾಟೀಲ, ಮುಖಂಡ ಪ್ರಶಾಂತ ನಾಯ್ಕರ, ಚಂದ್ರು ತಡಸದ ಇದ್ದರು. ಕಾಂಗ್ರೆಸ್‌ನವರು ಜಾತ್ಯತೀತ ಹೆಸರಲ್ಲಿ ಇಂದು ಓಲೈಕೆ ರಾಜಕಾರಣ ಮಾಡುತ್ತಿದ್ದಾರೆ. ಇದರ ಪರಿಣಾಮ ಒಂದು ಕಣ್ಣಿಗೆ ಬೆಣ್ಣೆ, ಒಂದು ಕಣ್ಣಿಗೆ ಸುಣ್ಣ. ಇದು ಕಾಂಗ್ರೆಸ್ ನಡೆದುಕೊಂಡ ರೀತಿ' ಎಂದರು.

### ಚರ್ಚೆಯೇ ಇಲ್ಲದೇ ಸಮಾಜವಾದ, ಜಾತ್ಯತೀತ ಪದ ಸೇರ್ಪಡೆ

**ಸಂವಿಧಾನದ ಪೀಠಿಕೆಯನ್ನು ತಿದ್ದುಪಡಿ ಮಾಡುವ ಅಧಿಕಾರ ಇಲ್ಲ. ಆದರೆ, ತುರ್ತುಪರಿಸ್ಥಿತಿಯ ಸಂದರ್ಭದಲ್ಲಿ ಚರ್ಚೆಯೇ ಇಲ್ಲದೇ ಪೀಠಿಕೆ ಬದಲಿಸಿದರು' ಎಂದು ಸಿ.ಟಿ.ರವಿ ದೂರಿದರು. ಸಮಾಜವಾದ, ಜಾತ್ಯತೀತ ಎಂಬುದು ಡಾ. ಬಿ.ಆರ್. ಅಂಬೇಡ್ಕರ್ ಕೊಟ್ಟಿದ್ದಲ್ಲ. ಭಾರತ ಯಾವುದೇ ಒಂದು 'ಇಸಂ'ನ ಅಡಿಯಲ್ಲಿ ಸಂವಿಧಾನ ಅಳವಡಿಸಿಕೊಂಡರೆ ಮುಕ್ತತತೆ ಅವಕಾಶ ಇರುವುದಿಲ್ಲ. ಜನರು ಯಾವುದಾದರೂ 'ಇಸಂ' ಇಟ್ಟುಕೊಳ್ಳಲಿ. ಭಾರತ ಮುಕ್ತವಾಗಿರಬೇಕು ಎಂಬ ಕಾರಣಕ್ಕೆ ಸಮಾಜವಾದ ಪದವನ್ನು ಸಂವಿಧಾನ ರಚನೆ ಸಂದರ್ಭದಲ್ಲಿ ಕೆ.ಟಿ.ಶಾ ಸ್ಪಷ್ಟವಾಗಿ ನಿರಾಕರಿಸಿದ್ದರು' ಎಂದರು. ಜಾತ್ಯತೀತ ಪದಕ್ಕೆ ಸಂಬಂಧಿಸಿದಂತೆ ಪಾಶ್ಚಾತ್ಯ ನಾಗರಿಕತೆ, ಸಂಸ್ಕೃತಿಗೂ, ಭಾರತೀಯ ನಾಗರಿಕತೆ ಮತ್ತು ಸಂಸ್ಕೃತಿ ನಡುವೆ ಅಪಾರ ವ್ಯತ್ಯಾಸ ಇದೆ. ಯುರೋಪಿನ ಅನುಕರಣೆ ಸೂಕ್ತವಲ್ಲ ಎಂದು ಹೇಳುತ್ತಾರೆ. ಆದರೆ, ತುರ್ತು ಪರಿಸ್ಥಿತಿ ಸಂದರ್ಭದಲ್ಲಿ ಚರ್ಚೆಯೇ ಇಲ್ಲದೇ ಸಮಾಜವಾದ, ಜಾತ್ಯತೀತ ಪದವನ್ನು ತುರುಕಿಬಿಟ್ಟರು ಎಂದು ಆರೋಪ ಮಾಡಿದರು.**

## ದಿನ ಭವಿಷ್ಯ

| | | |
|---|---|---|
| ರಾಹುಕಾಲ | ಬೆಳಿಗ್ಗೆ | 07:30 ರಿಂದ 09:00 |
| ಗುಳಿಕ ಕಾಲ | ಮಧ್ಯಾಹ್ನ | 01:30 ರಿಂದ 03:00 |
| ಯಮಗಂಡ ಕಾಲ | ಬೆಳಿಗ್ಗೆ | 10:30 ರಿಂದ 12:00 |

**ಮೇಷ** ಸಣ್ಣ ವಿಷಯಗಳು ನಿಮ್ಮ ಮನಸ್ಸು ಸಕೆಡಿಸಲು ಬಿಡಬೇಡಿ. ನಿಮಗೆ ತಿಳಿದ ಜನರ ಮೂಲಕ ಆದಾಯದ ಹೊಸ ಮೂಲಗಳು ಕಂಡು ಬರುತ್ತವೆ. ಸ್ನೇಹಿತರು ಮತ್ತು ಅಪರಿಚಿತರಿಬ್ಬರ ಬಗೆಗೂ ಎಚ್ಚರದಿಂದಿರಿ.

**ವೃಷಭ** ಧ್ಯಾನ ಮತ್ತು ಯೋಗ ಆಧ್ಯಾತ್ಮಿಕ ಹಾಗೂ ಭೌತಿಕ ಲಾಭಗಳೆರಡಕ್ಕೂ ಪ್ರಯೋಜನಕಾರಿಯಾಗುತ್ತದೆ. ನೀವು ಪ್ರಯಾಣ ಮಾಡುವ ಮತ್ತು ಹಣ ಖರ್ಚು ಮಾಡುವ ಮನಸ್ಥಿತಿಯಲ್ಲಿರುತ್ತೀರಿ.

**ಮಿಥುನ** ನಿಮ್ಮ ಶೀಘ್ರ ಕ್ರಮ ನಿಮ್ಮನ್ನು ಪ್ರೇರೇಪಿಸುತ್ತದೆ. ಯಶಸ್ಸುಸಾಧಿಸಲು- ಸಮಯದ ಜೊತೆ ನಿಮ್ಮ ಆಲೋಚನೆಗಳನ್ನು ಬದಲಾಯಿಸಿಕೊಳ್ಳಿ -ಇದು ನಿಮ್ಮ ದೃಷ್ಟಿಯನ್ನು ವಿಸ್ತಾರಗೊಳಿಸುತ್ತದೆ ವ್ಯಕ್ತಿತ್ವವನ್ನು ವೃದ್ಧಿಸುತ್ತದೆ.

**ಕರ್ಕಾಟಕ** ನೀವು ಪರಿಸ್ಥಿತಿಯ ನಿಯಂತ್ರಣ ಹೊಂದುತ್ತಿದ್ದಂತೆ ನಿಮ್ಮ ಆತಂಕ ಕಣ್ಮರೆ ಯಾಗುತ್ತದೆ. ಇದು ಧೈರ್ಯದ ಮೊದಲ ಸ್ಪರ್ಶದಲ್ಲಿ ಕುಸಿದುಹೋಗುವ ಸಾಬೂನಿನ ಗುಳ್ಳೆಯಷ್ಟೇ ಗಟ್ಟಿಯೆಂದು ಅರ್ಥ ಮಾಡಿಕೊಳ್ಳುತ್ತೀರಿ.

**ಸಿಂಹ** ನಿಮ್ಮ ಆಸಕ್ತಿಗಳನ್ನು ಮುಂದುವರಿಸಲು , ನೀವು ತುಂಬ ಆನಂದಿಸುವ ಕೆಲಸಗಳನ್ನು ಮಾಡಲು ಹೆಚ್ಚು ಸಮಯ ಕಳೆಯಬೇಕು. ನೀವು ಪ್ರಯಾಣ ಮಾಡುತ್ತಿದ್ದರೆ ಅಮೂಲ್ಯ ವಸ್ತುಗಳ ಬಗ್ಗೆ ವಿಶೇಷ ಗಮನ ಹರಿಸಿ.

**ಕನ್ಯಾ** ಒತ್ತಡದ ಕೆಲಸದ ವೇಳಾಪಟ್ಟಿ ನಿಮ್ಮ ಸಹನೆಯನ್ನು ಕೆಣಕಬಹುದು. ನಿಧಿಗಳ ಹಠಾತ್ ಒಳಹರಿವು ನಿಮ್ಮ ಪಾವತಿಗಳು ಮತ್ತು ತಕ್ಷಣದ ವೆಚ್ಚಗಳನ್ನು ನೋಡಿಕೊಳ್ಳುತ್ತದೆ.

**ತುಲಾ** ನಿಮ್ಮ ಸಂಜೆ ವಿಭಿನ್ನ ಪ್ರತಿಕ್ರಿಯೆಗಳಿಂದ ಗುರುತಿಸಲ್ಪಡುತ್ತದೆ, ಇದು ನಿಮ್ಮನ್ನು ಉದ್ವಿಗ್ನವಾಗಿರಿಸಬಹುದು. ಆದರೆ ಹೆಚ್ಚು ಚಿಂತಿಸುವ ಅಗತ್ಯವಿಲ್ಲ. ನಿಮ್ಮ ಸಂತೋಷ ನಿಮಗೆ ನಿರಾಸೆಗಿಂತ ಹೆಚ್ಚು ಆನಂದ ನೀಡುತ್ತದೆ.

**ವೃಶ್ಚಿಕ** ಪ್ರಭಾವಿ ಜನರ ಬೆಂಬಲ ನಿಮ್ಮ ನೈತಿಕ ಸ್ಥೈರ್ಯವನ್ನು ಹೆಚ್ಚಿಸುತ್ತದೆ. ನೀವು ಯಾವುದೇ ಅಜ್ಞಾತ ಮೂಲಗಳಿಂದ ಹಣವನ್ನು ಪಡೆಯಬಹುದು, ಇದರಿಂದ ನಿಮ್ಮ ಅನೇಕ ಆರ್ಥಿಕ ಸಮಸ್ಯೆಗಳು ದೂರವಾಗುತ್ತವೆ.

**ಧನಸ್ಸು** ಇಂದು ಮನೆಯಿಂದ ಹೊರಗೆ ಹಿರಿಯರ ಆಶೀರ್ವಾದವನ್ನು ತೆಗೆದುಕೊಂಡು ಹೋಗಿ, ಇದರಿಂದ ನೀವು ಹಣದ ಲಾಭವನ್ನು ಪಡೆಯಬಹುದು. ಸ್ನೇಹಿತರು ಉಪಯುಕ್ತವಾಗಿರುತ್ತಾರೆ

**ಮಕರ** ನೀವು ಯಾರನ್ನಾದರೂ ಮರಳಿ ಎರವಲು ಕೇಳುತ್ತಿದ್ದರೆ ಮತ್ತು ಇಲ್ಲಿಯವರೆಗೆ ಅವರು ನಿಮ್ಮ ಮಾತನ್ನು ತಪ್ಪಿಸುತ್ತಿದ್ದರೆ, ಇಂದು ಅವರು ಮಾತನಾಡದೆ ಹಣವನ್ನು ನಿಮಗೆ ಹಿಂದಿರುಗಿಸಬಹುದು.

**ಕುಂಭ** ನಿಮ್ಮ ಅಭ್ಯಾಸವನ್ನು ಬದಲಾಯಿಸಿಕೊಳ್ಳುವುದೊಳ್ಳೆಯದು. ಸಂಗಾತಿಯ ಕೆಟ್ಟ ಆರೋಗ್ಯದಿಂದಾಗಿ ಪ್ರಣಯಕ್ಕೆ ಧಕ್ಕೆಯಾಗುತ್ತದೆ. ನಿಮ್ಮ ವೃತ್ತಿ ಅವಕಾಶಗಳನ್ನು ಹೆಚ್ಚಿಸಲು ನಿಮ್ಮ ವೃತ್ತಿಪರ ಶಕ್ತಿಯನ್ನು ಬಳಸಿ.

**ಮೀನ** ನಿಮ್ಮ ನೀಡುವ ವರ್ತನೆ ಪರೋಕ್ಷವಾಗಿ ನಿಮಗೆ ಆಶೀರ್ವಾದವೇ ಆಗುತ್ತದೆ, ಏಕೆಂದರೆ ನೀವು ಅನುಮಾನ, ನಿರಾಸೆ, ಅಸೂಯೆಯಂಥ ಅನೇಕ ದುರ್ಗುಣಗಳಿಂದ ಮುಕ್ತಿ ಹೊಂದುವ ಸಾಧ್ಯತೆಗಳಿವೆ.

---

### ಕರ್ನಾಟಕ-ಗೋವಾ ಮಧ್ಯೆ ದುಪ್ಪಟ್ಟು ದರದ ವ್ಯತ್ಯಾಸ: ಎಗ್ಗಿಲ್ಲದೇ ನಡೆದಿದೆ ಮದ್ಯ ಅಕ್ರಮ ಸಾಗಣೆ

# ಬೆಳಗಾವಿ, ಮಹಾರಾಷ್ಟ್ರಗಡಿಯಲ್ಲಿ ಮದ್ಯ ಅಕ್ರಮ ಸಾಗಣೆ ನಿರಂತರ

• ಉದಯವಾಹಿನಿ ಬೆಳಗಾವಿ

ಮಧ್ಯರಾತ್ರಿ 2 ಗಂಟೆಗೆ ಗ್ಯಾಂಗ್‌ವಾಡಿ ಪ್ರದೇಶ, ಕಿರಿದಾದ ರಸ್ತೆ. ಮನೆ ಮುಂದೆ ಕುಳಿತಿದ್ದ ವ್ಯಕ್ತಿಯೊಬ್ಬ ಹುಬ್ಬು ಹಾರಿಸಿ 'ಮಾಲ್' ಬೇಕಾ ಎಂಬಂತೆ ಕೇಳಿದ. ಗೊತ್ತಿದ್ದವರಿಗೆ ಮಾತ್ರ ಅರ್ಥವಾಗುವ ಸನ್ನೆ ಅದು. 'ಯಾವುದಿದೆ' ಎಂದು ಕೇಳಿದೆ. ಯಾವುದು ಬೇಕಾದರೂ ಸಿಗುತ್ತದೆ. ಐನೂರು ರೂಪಾಯಿ ಎಕ್ಸ್ಟ್ರಾ ಅಂದ.

ಅಲ್ಲಿಂದ ತುಸು ಮುಂದಕ್ಕೆ ಸಾಗಿದಾಗ ಮತ್ತೆ ನಾಲ್ವರು ಬೈಕಿಗೆ ಮುತ್ತಿಕೊಂಡರು. 'ಕುಟ್ಲ ಪಾಹಿಜೆ ಎಂದು ಮರಾಠಿಯಲ್ಲಿ ಕೇಳಿದರು. 'ಕುಟ್ಲಕುಟ್ಟ ಹೈ (ಯಾವುದ್ಯಾವುದು ಇದೆ)' ಎಂದು ಕೇಳಿದೆ. ಅಷ್ಟರಲ್ಲಿ ಬಾಲಕನೊಬ್ಬ ವಿವಿಧ ಬ್ರ್ಯಾಂಡಿನ ನಾಲ್ಕು ಬಾಟಲಿ ತಂದ. ಅಂದಾಜು 14 ವರ್ಷ ವಯಸ್ಸಿನವ, ಬ್ರ್ಯಾಂಡಿನ ಹೆಸರು ಹಾಗೂ ದರ ಹೇಳಿದ. ದುಬಾರಿ ಎಂದು ನೆಪಹೇಳಿ ಮುಂದಕ್ಕೆ ಸಾಗಿದೆವು.

ತುಸು ಮುಂದೆ ಸಾಗಿ ಎಡಕ್ಕೆ ತಿರುಗಿದಾಗ ಐವರು ಯುವಕರಿದ್ದ ಕಾರು ನಿಂತಿತ್ತು. ವ್ಯಕ್ತಿಯೊಬ್ಬ ಮದ್ಯದ ಬಾಟಲಿಗಳನ್ನು ಕಾರಿಗೆ ತುಂಬುತ್ತಿದ್ದ. ನಮ್ಮ ಬೈಕು ಹತ್ತಿರ ಹೋಗುತ್ತಿದ್ದಂತೆಯೇ ಕಾರಿನ ಬಲ್ಬು ಆರಿಸಿದರು. ಗೋಪ್ಯ ವಿಡಿಯೋ ಮಾಡುತ್ತಿದ್ದಾರೆ ಎಂದು ನಮ್ಮ ಮೇಲೆ ಅನುಮಾನಗೊಂಡು, ಒಬ್ಬೊಬ್ಬರಾಗಿ ಗುಂಪುಗೂಡಲು ಶುರು ಮಾಡಿದ್ದರಿಂದ ಅಲ್ಲಿಂದ ಕಾಲ್ಕಿತ್ತೆವು. ಒಂದು ಕಾಲದಲ್ಲಿ ಮದ್ಯದ ಅಕ್ರಮ ಮಾರಾಟಕ್ಕೆ ಹೆಸರಾಗಿದ್ದ ಬೆಳಗಾವಿಯ ಗ್ಯಾಂಗ್‌ವಾಡಿಯ ಹೆಸರು ರಾಮನಗರ ಎಂದು ಬದಲಾಗಿದೆ. ಆದರೆ, ಕಸುಬು ಬದಲಾಗಿಲ್ಲ.


ಉದಯವಾಹಿನಿ ಚಿತ್ರ

**ಹಳ್ಳಿಗಳಲ್ಲಿ ಅಕ್ರಮ ಮಾರಾಟ ಅವ್ಯಾಹತ**

**ರಾಜ್ಯದ ಬಹುಪಾಲು ಗ್ರಾಮೀಣ ಭಾಗದಲ್ಲಿ ಮದ್ಯ ಅಕ್ರಮ ಮಾರಾಟ ರಾಜಾರೋಷವಾಗಿ ನಡೆಯುತ್ತಿದೆ. ಚಿತ್ರದುರ್ಗ ಜಿಲ್ಲೆಯ ಚಳ್ಳಕೆರೆ, ಮೊಳಕಾಲ್ಮುರು ಮುಂತಾದ ಗಡಿ ಭಾಗಗಳು, ಮಲೆನಾಡಿನ ಸಾಗರ, ಸೊರಬ, ತೀರ್ಥಹಳ್ಳಿ, ಬೆಳಗಾವಿ, ಯಾದಗಿರಿ ಮುಂತಾದ ಜಿಲ್ಲೆಗಳ ಗಡಿಯಲ್ಲಿ ಅಂಗಡಿಗಳು ಹಾಗೂ ಪ್ರವಾಸಿ ತಾಣಗಳಲ್ಲಿ ಚಿಲ್ಲರೆ ವ್ಯಾಪಾರ ಜೋರಾಗಿದೆ.**

ಮದ್ಯ ಅಕ್ರಮ ಮಾರಾಟ ಈಗಲೂ ನಡೆದಿದ್ದು ಕುಟುಕು ಕಾರ್ಯಾಚರಣೆಯಲ್ಲಿ ಪತ್ತೆಯಾಯಿತು. ಇಂಥದ್ದೇ ಕಸುಬಿಗೆ ಹೆಸರಾಗಿದ್ದು ಬಾದರವಾಡಿ. 'ಪಾರ್ಟಿ' ಮಾಡುವ ಸೋಗಿನಲ್ಲಿ ಅಲ್ಲಿಗೆ ಹೊರಟೆವು. ಆರಂಭದಲ್ಲೇ ಕಾಣಿಸಿದ ದೊಡ್ಡ ಬಂಗಲೆಗೆ ಹೋಗಿ 'ಗೋವಾ ಮಾಲು ಕೇಳಿದೆ. ಯುವಕನೊಬ್ಬ ಎಷ್ಟು ಬೇಕು ಅಂದ. ನೂರು ಜನರ ಪಾರ್ಟಿ ಇದೆ, ಜಾಸ್ತಿ ಬೇಕು ಎಂದೆ. ಸಾವಿರ ಜನರಿದ್ದರೂ ಕೊಡುತ್ತೇನೆ. ಯಾವುದು ಬೇಕು ಹೇಳು ಅಂದ. ರೊಕ್ಕ ತಂದಿಲ್ಲ 'ಫೋನ್ ಪೆ' ಮಾಡಬಹುದೇ ಎಂದೆ. ಅದೆಲ್ಲ ನಡೆಯುವುದಿಲ್ಲ ರೊಕ್ಕ ಮಾತ್ರ ಎಂದು ಹೊರಗೆ ಕಳುಹಿಸಿದ. ಅನುಮಾನದಿಂದ ನಮ್ಮನ್ನು ದೂರದವರೆಗೂ ಹಿಂಬಾಲಿಸಿದ. ಗೋವಾದಿಂದ ಮದ್ಯ ತಂದು ಮಾರಾಟ ಮಾಡುವ ಕೆಲವರು ಇಲ್ಲಿದ್ದಾರೆ. ಇದೇ ದಂಧೆ ಮಾಡಿ ಬಂಗಲೆ ಕಟ್ಟಿಕೊಂಡಿದ್ದಾರೆ. ಅಬಕಾರಿ ಅಧಿಕಾರಿಗಳು ಸಾಕಷ್ಟು ಬಾರಿ ದಾಳಿ ಮಾಡಿ, ಪ್ರಕರಣ ದಾಖಲಿಸಿದ್ದಾರೆ. ಪೂರ್ಣ ನಿಲ್ಲಿಸಲು ಆಗಿಲ್ಲ.

ಕಳ್ಳರು ವೈವಿಧ್ಯಮಯ ತಂತ್ರಗಳನ್ನು ಅನುಸರಿಸುತ್ತಿದ್ದಾರೆ. 'ಪುಷ್ಪ' ಸಿನಿಮಾದಲ್ಲಿ ರಕ್ತಚಂದನ ಕಟ್ಟಿಗೆ ಅಕ್ರಮವಾಗಿ ಸಾಗಿಸುವ ದೃಶ್ಯಗಳಿವೆ. ಅದೇ ರೀತಿ ಲಾರಿಯೊಂದರಲ್ಲಿ ಪ್ಲೈವುಡ್ ಹೇರಿಕೊಂಡು ಅದರ ಮಧ್ಯೆ ಮದ್ಯದ ಬಾಕ್ಸ್‌ಗಳ ಸಾಗಿಸಲಾಗುತ್ತಿತ್ತು. ಇದು ನಮ್ಮ ಗೂಢಾಚರ್ಯ ಮೂಲದಿಂದ ಮಾಹಿತಿ ಸಿಕ್ಕಿತು. ವಾಹನ ನಂಬರ್ ಜಾಲಾಡಿ, ಮಾಲು ವಶಕ್ಕೆ ಪಡೆದೆವು' ಎಂದು ಕಾರ್ಯಾಚರಣೆಯ ರೂಪ ವಿವರಿಸುತ್ತಾರೆ ಸ್ಥಳೀಯ ಅಬಕಾರಿ ಅಧಿಕಾರಿಗಳು.

**ಪ್ರವಾಸಿ ತಾಣಗಳಲ್ಲಿ ಚಿಲ್ಲರೆ ವ್ಯಾಪಾರ ಜೋರು**

ವಿದ್ಯುತ್ ಟ್ರಾನ್ಸ್‌ಫಾರ್ಮರ್‌ಗಳ ಒಳಭಾಗದಲ್ಲಿ ಮದ್ಯದ ಬಾಕ್ಸ್‌ಗಳನ್ನು ಮುಚ್ಚಿ ಸಾಗಿಸುವುದು, ಎಲೆಕ್ಟ್ರಾನಿಕ್ ತ್ಯಾಜ್ಯ ಸಾಗಣೆ ಮಾಡುವ ನೆಪದಲ್ಲಿ ಕಂಟೇನರ್‌ನಲ್ಲಿ ಮದ್ಯ ಸಾಗಿಸುವುದು, ಅಣಬೆ ಬೀಜ ಸಾಗಣೆ ನೆಪದಲ್ಲಿ ಲಾರಿಯಲ್ಲಿ ಮದ್ಯದ ಬಾಟಲಿ ಸಾಗಾಟ... ಹೀಗೆ ಹಲವು ತಂತ್ರಗಳನ್ನು ಖದೀಮರು ಅನುಸರಿಸುತ್ತಿದ್ದಾರೆ.

ಈ ರೀತಿಯ ವಾಹನ ಗೋವಾ ಗಡಿ ದಾಟಿದ ತಕ್ಷಣವೇ ನಮಗೆ ಮಾಹಿತಿ ಬರುತ್ತದೆ. ಪ್ರತಿತಂತ್ರ ರೂಪಿಸಿ ಪತ್ತೆ ಮಾಡುತ್ತೇವೆ. ಅತ್ಯಂತ ನಾಜೂಕಿನಿಂದ ಕಾರ್ಯಾಚರಣೆ ಮಾಡಿದರೆ ಮಾತ್ರ ಹಿಡಿಯಲು ಸಾಧ್ಯ' ಎನ್ನುವುದು ಅಧಿಕಾರಿಗಳ ಹೇಳಿಕೆ.

**ರಾಜ್ಯದ ಒಳಗೂ ಅಕ್ರಮ**

**ಗೋವಾದಿಂದ ಬರುವ ಮದ್ಯ ಕಳ್ಳಮಾರ್ಗದಲ್ಲಿ ಕರ್ನಾಟಕ ಮತ್ತು ಮಹಾರಾಷ್ಟ್ರವನ್ನು ಪ್ರವೇಶಿಸುತ್ತಿದೆ. ಇದರ ಜತೆಗೆ ರಾಜ್ಯದ ಮದ್ಯವೇ ಮಾರಾಟದ ಲೈಸೆನ್ಸ್ ಇಲ್ಲದ ರಾಜ್ಯದ ಮೂಲೆ ಮೂಲೆಯಲ್ಲಿರುವ ಅಂಗಡಿಗಳನ್ನು ಕಳ್ಳದಾರಿಯಲ್ಲಿ ತಲುಪುತ್ತಿದೆ. ಅಬಕಾರಿ ವಹಿವಾಟು ಹೆಚ್ಚಿಸಿ ಆದಾಯ ಹೆಚ್ಚಿಸಿಕೊಳ್ಳಲು, ತಿಂಗಳಿಗೆ ಇಂತಿಷ್ಟು ಮದ್ಯ ಮಾರಲೇಬೇಕೆಂದು ಇಲಾಖೆಯೇ 'ಗುರಿ' ನೀಡಿದೆ. 'ಗುರಿ' ಮುಟ್ಟದಿದ್ದರೆ ವ್ಯಾಪಾರಿಗೆ ನಷ್ಟ. ಹೀಗಾಗಿ ಆಟೋ, ಬೈಕುಗಳ ಮೇಲೆ ಚಿಲ್ಲರೆ ವ್ಯಾಪಾರಿಗಳು ಹಳ್ಳಿಹಳ್ಳಿಗೂ ಮದ್ಯವನ್ನು ತಲುಪಿಸುತ್ತಾರೆ. ನಗರ- ಪಟ್ಟಣಗಳಲ್ಲಿ ಖರೀದಿಸಿ ಹಳ್ಳಿಯ ಢಾಬಾ, ಹೋಟೆಲ್, ಕಿರಾಣಿ ಅಂಗಡಿ, ತಂಪುಪಾನೀಯ ಅಂಗಡಿಗಳಿಗೂ ಸರಬರಾಜು ಮಾಡುವುದು ಇದರ ಇನ್ನೊಂದು ಮುಖ. 'ಟಾರ್ಗೆಟ್' ನೀಡುವ ಮೂಲಕ ಇಲಾಖೆಯೇ ಅಕ್ರಮ ಸಾಗಣೆಗೆ ಪರೋಕ್ಷ ಪ್ರೋತ್ಸಾಹ ನೀಡುತ್ತಿದೆ ಎಂಬ ಮಾತಿದೆ.**

---

## ಜ್ಞಾನಪೀಠ ಕವಿಗಳ ಹೆಸರಿನಲ್ಲಿ ಕಂಗೊಳಿಸಿದ ತಂಡಗಳು: ಕನ್ನಡ ರಸಪ್ರಶ್ನೆ ಸ್ಪರ್ಧೆ ಯಶಸ್ವಿ

• ಉದಯವಾಹಿನಿ ಮುದ್ದೇಬಿಹಾಳ

ಕಸಾಪ ಮುದ್ದೇಬಿಹಾಳ ತಾಲ್ಲೂಕು ಘಟಕದ ವತಿಯಿಂದ ಪ್ರೌಢಶಾಲಾ ವಿದ್ಯಾರ್ಥಿಗಳಿಗೆ ಆಯೋಜಿಸಲಾದ ತಾಲ್ಲೂಕು ಮಟ್ಟದ ಕನ್ನಡ ರಸಪ್ರಶ್ನೆ ಸ್ಪರ್ಧೆ ಪಟ್ಟಣದ ಟಾಪ್ ಇನ್ ಟೌನ್ ಹಾಲ್ನಲ್ಲಿ ಭಾನುವಾರ ಅದ್ದೂರಿಯಾಗಿ ಜರುಗಿತು.

ಕನ್ನಡ ನುಡಿ-ಸಾಹಿತ್ಯದ ಸೊಬಗು, ವಚನ ಪರಂಪರೆ ಹಾಗೂ ಕನ್ನಡ ಕವಿಗಳ ಸಾಧನೆಗಳನ್ನು ಒಳಗೊಂಡ ಪ್ರಶ್ನೋತ್ತರ ಸ್ಪರ್ಧೆ ವಿದ್ಯಾರ್ಥಿಗಳಿಂದ ಭರ್ಜರಿ ಮೆಚ್ಚುಗೆ ಪಡೆದುಕೊಂಡಿತು.

ತಾಲ್ಲೂಕಿನ ವಿವಿಧ 8 ಪ್ರೌಢಶಾಲಾ ತಂಡಗಳು ಪಾಲ್ಗೊಂಡ ಈ ಸ್ಪರ್ಧೆಗೆ ಜ್ಞಾನಪೀಠ ಪ್ರಶಸ್ತಿ ಪಡೆದ ಕನ್ನಡ ಕವಿಗಳ ಹೆಸರನ್ನೇ ತಂಡಗಳಿಗೆ ಇಡಲಾಗಿತ್ತು. ಒಟ್ಟು ಎಂಟು ಸುತ್ತುಗಳಲ್ಲಿ ನಡೆದ ಪ್ರಶ್ನೋತ್ತರಗಳಲ್ಲಿ ವಚನಸಾಹಿತ್ಯ, ಕನ್ನಡ ಕವಿಗಳು, ಸಾಹಿತ್ಯ ಕೃತಿಗಳು, ಕನ್ನಡ ಗೀತೆಗಳನ್ನು ಆಲಿಸಿ ಗಾಯಕರನ್ನು ಗುರುತಿಸುವಂತಹ ವಿಭಿನ್ನ ರೀತಿಯ ಪ್ರಶ್ನೆಗಳು ಸೇರಿದ್ದವು. ಈ ರಸಪ್ರಶ್ನೆ ಸ್ಪರ್ಧೆಯನ್ನು ಸರಕಾರಿ ಪ್ರಥಮ ದರ್ಜೆ ಕಾಲೇಜಿನ ಸಹಾಯಕ ಪ್ರಾಧ್ಯಾಪಕ ಹೆಚ್.ಪಿ. ಹಡಪದ ಹಾಗೂ ತಂಡ ಸಿದ್ಧಪಡಿಸಿ ಅಚ್ಚುಕಟ್ಟಾಗಿ ನಿರ್ವಹಿಸಿದರು. ಕಾರ್ಯಕ್ರಮದಲ್ಲಿ ಕ್ಷೇತ್ರ ಶಿಕ್ಷಣಾಧಿಕಾರಿ ಬಿ.ಎಸ್. ಸಾವಳಗಿ ಹಾಗೂ ಅಕ್ಷರ ದಾಸೋಹ ಸಹಾಯಕ ನಿರ್ದೇಶಕ ಎಂ.ಎಂ. ಬೆಳಗಲ್ ಅವರು ''ರಸಪ್ರಶ್ನೆ ಸ್ಪರ್ಧೆಗಳು ವಿದ್ಯಾರ್ಥಿಗಳ ಬೌದ್ಧಿಕ ಸಾಮರ್ಥ್ಯವನ್ನು ಹೆಚ್ಚಿಸುವುದರೊಂದಿಗೆ ಕನ್ನಡ ನುಡಿ-ಸಾಹಿತ್ಯದ ಬಗ್ಗೆ ಅಭಿಮಾನ ಬೆಳೆಸುವಲ್ಲಿ ಸಹಕಾರಿಯಾಗುತ್ತವೆ'' ಎಂದರು. ಪುರಸಭೆ ಅಧ್ಯಕ್ಷ ಮಹೆಬೂಬ ಗೊಳಸಂಗಿ ಅವರು ''ಸ್ಪರ್ಧಾತ್ಮಕ ಯುಗದಲ್ಲಿ ಇಂತಹ ರಸಪ್ರಶ್ನೆ ಸ್ಪರ್ಧೆಗಳು ಮಕ್ಕಳ ಕಲಿಕೆಯನ್ನು ಇನ್ನಷ್ಟು ಪರಿಣಾಮಕಾರಿಯಾಗಿಸುತ್ತವೆ. ಪಟ್ಟಣದಲ್ಲಿ ಇಂತಹ ಕಾರ್ಯಕ್ರಮಗಳು ಹೆಚ್ಚಾಗಿ ನಡೆಯಬೇಕು'' ಎಂದು ಹೇಳಿದರು. ಕಾರ್ಯಕ್ರಮದಲ್ಲಿ ಹಿರಿಯ ಸಾಹಿತಿ ಅಶೋಕ ಮಣಿ, ಉದ್ಯಮಿ ಮಹೆಬೂಬ ಮುಲ್ಲಾ, ಕಸಾಪ ಗೌರವ ಸಲಹೆಗಾರ ಪ್ರಭುರಾಜ ಕಲಬುರಗಿ, ತಾ. ಪ್ರೌಢಶಾಲಾ ಮುಖ್ಯ ಶಿಕ್ಷಕರ ಸಂಘದ ಅಧ್ಯಕ್ಷ ಎಂ.ಎಸ್. ಕವಡಿಮಟ್ಟಿ, ಶಿಕ್ಷಕರು ಹಾಗೂ ಗಣ್ಯರು ಪಾಲ್ಗೊಂಡಿದ್ದರು. ಕಸಾಪ ಗೌರವ ಕಾರ್ಯದರ್ಶಿ ಸಿದ್ದನಗೌಡ ಬಿಜ್ಜೂರ ಕಾರ್ಯಕ್ರಮ ನಿರೂಪಣೆ ಮಾಡಿ ವಂದಿಸಿದರು.

**ಪ್ರಶಸ್ತಿ ವಿಜೇತರು:** ಪ್ರಥಮ ಬಹುಮಾನ,ಪ್ರಾರ್ಥನಾ ವಿದ್ಯಾಮಂದಿರ (ಮಾಸ್ತಿ ವೆಂಕಟೇಶ ಅಯ್ಯಂಗಾರ್ ತಂಡ) ದ್ವಿತೀಯ ಬಹುಮಾನ ಚಿನ್ಮಯ ಜೆಸಿ (ಗಿರೀಶ ಕಾರ್ನಾಡ್ ತಂಡ) ತೃತೀಯ ಬಹುಮಾನ ಶಾರದಾ ಸ್ಕೂಲ್ (ಚಂದ್ರಶೇಖರ ಕಂಬಾರ ತಂಡ) ವಿಜೇತರಿಗೆ ಪದಕ ಹಾಗೂ ಆಕರ್ಷಕ ಟ್ರೋಫಿಗಳನ್ನು ಪ್ರಧಾನ ಮಾಡಲಾಯಿತು. ಇತರೆ ಭಾಗವಹಿಸಿದ ಶಾಲೆಗಳಾದ ಸರಕಾರಿ ಪ್ರೌಢಶಾಲೆ ಮುದ್ದೇಬಿಹಾಳ, ಎಂಜಿಎಂಕೆ ಹೈಸ್ಕೂಲ್, ಕೆಪಿಎಸ್ ಯರಝರಿ, ಆರ್‌ಎಂಎಸ್‌ಎ ಬಿದರಕುಂದಿ ಹಾಗೂ ಜಿಹೆಚ್‌ಎಸ್ ಕೋಳೂರು ಶಾಲಾ ವಿದ್ಯಾರ್ಥಿಗಳಿಗೆ ಪ್ರಶಸ್ತಿ ಪತ್ರ ವಿತರಿಸಲಾಯಿತು.


ಉದಯವಾಹಿನಿ ಚಿತ್ರ

**ಕಸಾಪವು ಸಮಾಜಮುಖಿ ಕಾರ್ಯಕ್ರಮಗಳನ್ನು ನಿರಂತರವಾಗಿ ಹಮ್ಮಿಕೊಂಡು ವಿದ್ಯಾರ್ಥಿಗಳ ಭವಿಷ್ಯಕ್ಕೆ ದಾರಿ ಮಾಡಿಕೊಡುತ್ತಿದೆ. ಈ ರಸಪ್ರಶ್ನೆ ಅದರ ಉತ್ತಮ ಉದಾಹರಣೆ. -ಕಾಮರಾಜ ಬಿರಾದಾರ**
**ಕಸಾಪ ತಾಲ್ಲೂಕು ಘಟಕದ ಅಧ್ಯಕ್ಷ**

---

## ನಿರಂತರ ಮಳೆ: ರೈತನ ಸ್ಥಿತಿ ಚಿಂತಾಜನಕ

• ಉದಯವಾಹಿನಿ ನವಲಗುಂದ

ನಿರಂತರ ಮಳೆಯಿಂದ ರೈತನ ಸ್ಥಿತಿ ಚಿಂತಾಜನಕವಾಗಿದೆ. ಎಂದು ಮಾಜಿ ಸಚಿವ ಶಂಕರ ಪಾಟೀಲಮುನೇನಕೊಪ್ಪ ಹೇಳಿದರು.

ಕ್ಷೇತ್ರಕ್ಕೆ ಸಚಿವರು ಕರೆದುಕೊಂಡು ಬಂದು ಪ್ರಚಾರ ಪಡೆಯುವುದು ಮುಖ್ಯವಲ್ಲ. ರೈತರಿಗೆ ಪರಿಹಾರ ಕೊಡಿಸುವುದು ಮುಖ್ಯವಾಗಿದೆ. ಅಧಿವೇಶನದಲ್ಲಿ ಕಾಲಹರಣ ಮಾಡಿ ಬಂದು, ಈಗ ಪ್ರಚಾರ ಪಡೆದರೇ ಏನುಪಯೋಗ ಎಂದು ಪ್ರಶ್ನಿಸಿದ ತಕ್ಷಣವೇ ರೈತನ ಮನೆ ಮನೆಗೆ ಪರಿಹಾರ ತಲುಪಿಸಿ ಎಂದರು. ನವಲಗುಂದ ವಿಧಾನಸಭಾ ಕ್ಷೇತ್ರದಲ್ಲಿ ಬಹುತೇಕ ಬೆಳೆಗಳು ಹಾಳಾಗಿವೆ. ಆದರೆ, ಅಧಿಕಾರಿಗಳು ಸಮರ್ಪಕವಾಗಿ ಸರಕಾರಕ್ಕೆ ಮಾಹಿತಿಯನ್ನ ಕೊಟ್ಟಿಲ್ಲ. ಇದರಿಂದ ರೈತ ಕುಟುಂಬಕ್ಕೆ ತೊಂದರೆಯಾಗತ್ತೆ. ಬಿದ್ದ ಮನೆಗಳಿಗೆ ಬಿಜೆಪಿ ಸರಕಾರ ನೀಡಿದ್ದ ರೀತಿಯಲ್ಲಿ ಪರಿಹಾರವನ್ನ ಕೊಡಿ ಎಂದು ಆಗ್ರಹಿಸಿದರು.

## ಪ್ರತ್ಯೇಕ ಮೀಸಲಾತಿ ಕಲ್ಪಿಸಲು ಒತ್ತಾಯ

• ಉದಯವಾಹಿನಿ ಶಿವಮೊಗ್ಗ

ನಿವೃತ್ತ ನ್ಯಾಯಮೂರ್ತಿ ನಾಗಮೋಹನದಾಸ್ ವರದಿಯಂತೆ ಅಲೆಮಾರಿಗಳಿಗೆ ಪ್ರತ್ಯೇಕವಾಗಿ ಶೇ 1ರಷ್ಟು ಮೀಸಲಾತಿ ನೀಡಿದರೆ ಮಾತ್ರ ಸಾಮಾಜಿಕ ನ್ಯಾಯ ಸಿಗುತ್ತದೆ. ಸರ್ಕಾರ ಈ ನಿಟ್ಟಿನಲ್ಲಿ ಯೋಚಿಸಿ ಕ್ರಮ ಕೈಗೊಳ್ಳಬೇಕು' ಎಂದು ದಲಿತ ಸಂಘರ್ಷ ಸಮಿತಿ ರಾಜ್ಯ ಘಟಕ ಸಂಚಾಲಕ ಎಂ. ಗುರುಮೂರ್ತಿ ಒತ್ತಾಯಿಸಿದರು.

ವರದಿಯಲ್ಲಿ ಪರಿಶಿಷ್ಟ ಜಾತಿಯಲ್ಲಿ ತೀರಾ ಹಿಂದುಳಿದ ಅಲೆಮಾರಿ ಸಮುದಾಯಗಳಿಗೆ ಶೇ 1 ಮೀಸಲಾತಿ ಕಲ್ಪಿಸಲಾಗಿತ್ತು. ಸರ್ಕಾರವು ಅಲೆಮಾರಿ ಸಮುದಾಯಗಳನ್ನು ಸಸ್ಪೃಶ್ಯ ಜಾತಿಯವರೊಂದಿಗೆ ಸೇರಿಸುವ ಮೂಲಕ ಅನ್ಯಾಯ ಮಾಡಿದೆ ಎಂದು ಸುದ್ದಿಗೋಷ್ಠಿಯಲ್ಲಿ ದೂರಿದರು.

ಅಲೆಮಾರಿಗಳಲ್ಲಿ ಸೂಕ್ಷ್ಮ ಮತ್ತು ಅತಿಸೂಕ್ಷ್ಮ ಜಾತಿಗಳಾದ ಅಂದಾಜು 59 ಜಾತಿಗಳಿಗೆ ಇದರಿಂದ ತೊಂದರೆಯಾಗುತ್ತಿದ್ದು, ಅವರಿಗೆ ಈ ಹಿಂದೆ ಇದ್ದಂತೆ ಶೇ 1ರಷ್ಟು ಮೀಸಲಾತಿಯನ್ನು ಪ್ರತ್ಯೇಕವಾಗಿಯೇ ನೀಡಬೇಕು. ಹಾಗಾಗಿ ಸರ್ಕಾರ ಮತ್ತೊಮ್ಮೆ ತನ್ನ ನಿರ್ಧಾರವನ್ನು ಪರಿಷ್ಕರಣೆ ಮಾಡಿ ಅಲೆಮಾರಿಗಳಿಗೆ ಸಾಮಾಜಿಕ ನ್ಯಾಯ ಒದಗಿಸಬೇಕು' ಎಂದರು.

## ಬಾಲಕಿ ಮೇಲೆ ಅತ್ಯಾಚಾರ ಇಬ್ಬರಿಗೆ 10 ವರ್ಷ ಜೈಲು

• ಉದಯವಾಹಿನಿ ಕಡೂರು

ಬಾಲಕಿಗೆ ಪುಸಲಾಯಿಸಿ ಲಾಡ್ಜ್‌ವೊಂದಕ್ಕೆ ಕರೆದೊಯ್ದು ಅತ್ಯಾಚಾರ ಎಸಗಿ ಬೆದರಿಕೆ ಹಾಕಿದ್ದ ಇಬ್ಬರು ಅಪರಾಧಿಗಳಿಗೆ ತಲಾ 10 ವರ್ಷ ಜೈಲು ಶಿಕ್ಷೆ ಹಾಗೂ ದಂಡ ವಿಧಿಸಿದೆ.

ಕಡೂರು ತಾಲ್ಲೂಕಿನ ಚಿಕ್ಕಂಗಳದ ಕಿರಣ್ ನಾಯಕ, ಅಭಿಷೇಕ್ ನಾಯ್ಕ ಶಿಕ್ಷೆಗೆ ಒಳಗಾದವರು. ಮೊದಲ ಆರೋಪಿ ಕಿರಣ್‌ನಾಯಕಗೆ 41ಸಾವಿರ ದಂಡ, ಎರಡನೇ ಆರೋಪಿ ಅಭಿಷೇಕ್ ನಾಯ್ಕಗೆ 11 ಸಾವಿರ ದಂಡ ವಿಧಿಸಲಾಗಿದೆ. ನೊಂದ ಬಾಲಕಿಗೆ 1 ಲಕ್ಷ ಪರಿಹಾರ ನೀಡುವಂತೆ ಜಿಲ್ಲಾ ಕಾನೂನು ಸೇವಾ ಪ್ರಾಧಿಕಾರಕ್ಕೆ ಆದೇಶಿಸಿದೆ.

2023ರ ನವೆಂಬರ್‌ನಲ್ಲಿ ಪ್ರಕರಣ ನಡೆದಿದ್ದು, ಒಂದನೇ ಆರೋಪಿ ಕಿರಣ್ ನಾಯಕ, ಎರಡನೇ ಆರೋಪಿ ಅಭಿಷೇಕ್ ನಾಯ್ಕನ ಸಹಾಯದಿಂದ ಬಾಲಕಿಯನ್ನು ಲಾಡ್ಜ್‌ಗೆ ಕರೆದೊಯ್ದು ಅತ್ಯಾಚಾರ ಎಸಗಿದ್ದರು. ಈ ಕುರಿತು ನೀಡಿದ ದೂರಿನ ಅನ್ವಯ ಪೋಕ್ಸೋ ಪ್ರಕರಣ ದಾಖಲಾಗಿತ್ತು. ವೃತ್ತ ನಿರೀಕ್ಷಕ ಕೆ.ಆರ್.ಶಿವಕುಮಾರ್ ಪ್ರಕರಣದ ತನಿಖೆಯನ್ನು ನಡೆಸಿ, ಪ್ರಭಾರ ವೃತ್ತ ನಿರೀಕ್ಷಕ ಶ್ರೀಕಾಂತ್ ಎನ್.ಎಸ್.ಆರೋಪಿತರ ವಿರುದ್ಧ ಚಿಕ್ಕಮಗಳೂರಿನ ಪೋಕೋ ನ್ಯಾಯಾಲಯಕ್ಕೆ ದೋಷಾರೋಪಣ ಪಟ್ಟಿ ಸಲ್ಲಿಸಿದ್ದರು.ವಿಶೇಷ ಸರ್ಕಾರಿ ಅಭಿಯೋಜಕ ಭರತ್ ಕುಮಾರ್ ವಾದ ಮಂಡಿಸಿದ್ದರು.

---

## ಫೋಟೋಗ್ರಾಫಿಯಿಂದ ಮಾತ್ರ ಜಗತ್ತು ಅತ್ಯಂತ ಸುಂದರವಾಗಿ ತೋರಿಸಲು ಸಾಧ್ಯ

• ಉದಯವಾಹಿನಿ,ಚಿಂಚೋಳಿ

ಜಗತ್ತು ಅತ್ಯಂತ ಸುಂದರವಾಗಿವಿದೆ ಎಂದು ತೋರಿಸಲು ಫೋಟೋಗ್ರಾಫೀಯಿಂದ ಮಾತ್ರ ಸಾಧ್ಯವಿದೆ ಎಂದು ಪುರಸಭೆ ಅಧ್ಯಕ್ಷ ಆನಂದಕುಮಾರ ಟೈಗರ್ ಬಣ್ಣಿಸಿದರು.

ಪಟ್ಟಣದ ಚಂದಾಪೂರದ ನಿಜಶರಣ ಅಂಬಿಗರ ಚೌಡಯ್ಯ ಭವನದಲ್ಲಿ ತಾಲ್ಲೂಕಾ ಛಾಯಾಚಿತ್ರ ಗ್ರಾಹಕರ ಕ್ಷೇಮಾಭಿವೃದ್ಧಿ ಸಂಘದಿಂದ ಹಮ್ಮಿಕೊಂಡ 186ನೇ ವಿಶ್ವ ಛಾಯಾಗ್ರಹಣ ದಿನಾಚರಣೆ ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದ ಅವರು,ಈಗಿನ ಕಾಲದಲ್ಲಿ ಯಾವುದೇ ಸಭೆ ಸಮಾರಂಭಗಳಲ್ಲಿ ಫೋಟೋಗಳು ತೆಗೆಯುವುದು ಅತಿ ಅವಶ್ಯಕವಾಗಿ ಬಿಟ್ಟಿದೆ,ಫೋಟೋಗಳು ತೆಗೆದು ಸಂಗ್ರಹಿಸಿ ಸಂರಕ್ಷಣೆ ಮಾಡಿದರೆ ನೆನಪಿಗಾಗಿ ಸಾಕ್ಷಿಯಾಗಿ ಇಟ್ಟುಕೊಳ್ಳಬಹುದು. ತಾಲ್ಲೂಕಾ ಛಾಯಾಚಿತ್ರ,ಗ್ರಾಹಕರ ಕ್ಷೇಮಾಭಿವೃದ್ಧಿ ಸಂಘದ ಮಾಜಿ ಅಧ್ಯಕ್ಷ ಸಂಜೀವಕುಮಾರ ಗಾರಂಪಳ್ಳಿ ಮಾತನಾಡಿ ಒಂದು ಫೋಟೋ ಕಲೆ,ಸ್ಥಳ,ಸಾಹಿತ್ಯ ಗುರುತಿಸುತ್ತದೆ. ಫೋಟೋಗ್ರಾಫೀಯು ಇಂದಿನ ಕಾಲದಲ್ಲಿ ದೊಡ್ಡ ಉದ್ಯೋಮವಾಗಿದೆ, ಎಲ್ಲಾ ಕ್ಷೇತ್ರದಲ್ಲಿ ಛಾಪು ಮೂಡಿಸಿದೆ,ಮುಂದಿನ ಪೀಳಿಗೆಗೆ ತಾಂತ್ರಿಕ ಕೌಶಲ್ಯ ಪ್ರೇರಣೆ ನೀಡುತ್ತದೆ, ಲಕ್ಷಾಂತರ ಯುವಕರು ಬದುಕು ಕಟ್ಟಿಕೊಂಡಿದ್ದಾರೆ, ಫೋಟೋಗ್ರಾಫಿ 33 ವಿಧಗಳಿವೆ, ಛಾಯಾಚಿತ್ರ,ಗ್ರಾಹಕರ ಕ್ಷೇಮಾಭಿವೃದ್ಧಿ ಸಂಘವು 20220ರಲ್ಲಿ ಪ್ರಾರಂಭಿಸಿ 55ಜನರ ಸದಸ್ಯರ ಸಂಘವಾಗಿದೆ,ಕಡಿಮೆ ಅವಧಿಯಲ್ಲಿ ನಮ್ಮ ಸಂಘ ಜಿಲ್ಲಾ,ರಾಜ್ಯಮಟ್ಟದ ಪ್ರಶಸ್ತಿಗಳು ತನ್ನದಾಗಿಸಿಕೊಂಡಿವೆ, ಪುರಸಭೆ ವ್ಯಾಪ್ತಿಯಲ್ಲಿ ನಿವೇಶನ ನೀಡುವಂತೆ ಪುರಸಭೆ ಅಧ್ಯಕ್ಷರಿಗೆ ಮನವಿ ಮಾಡಿಕೊಂಡರು.

ತಾಲ್ಲೂಕಾ ಛಾಯಾಚಿತ್ರ,ಗ್ರಾಹಕರ ಕ್ಷೇಮಾಭಿವೃದ್ಧಿ ಸಂಘದ ಅಧ್ಯಕ್ಷ ಬಸವರಾಜ ಕೆರೋಳ್ಳಿ ಅಧ್ಯಕ್ಷತೆ ವಹಿಸಿದ್ದರು. ಶಿವಬಸಯ್ಯಸ್ವಾಮಿ ಸ್ವಾಗತಿಸಿದರು,ಕಾಶಿನಾಥ ಮಡಿವಾಳ ನಿರೂಪಿಸಿದರು, ಸುರೇಶ ಐನೋಳ್ಳಿ ವಂದಿಸಿದರು.


ಉದಯವಾಹಿನಿ ಚಿತ್ರ

**ಹೆಚ್ಚಿನ ಯುವಕರು ಫೋಟೋಗ್ರಾಫರ್ ಕೆಲಸಕ್ಕೆ ಮಹತ್ವ ನೀಡುತ್ತಿದ್ದಾರೆ,ಯಾವುದೇ ಕೆಲಸ ಇರಲಿ ಶ್ರದ್ಧೆಯಿಂದ ಮಾಡಿದರೆ ಪ್ರತಿಫಲ ಸಿಕ್ಕೆಸಿಗುತ್ತದೆ,ಪುರಸಭೆಯಿಂದ ಸರ್ಕಾರದಿಂದ ನಿಮ್ಮ ಸಂಘಕ್ಕೆ ಅನ್ವಯವಾಗುವ ಸೌಲಭ್ಯಗಳಿದ್ದರೆ ತಮ್ಮ ಸಂಘಕ್ಕೆ ನೀಡುವ ಭರವಸೆ ನೀಡುತ್ತೇನೆ.**
**-ಪುರಸಭೆ ಅಧ್ಯಕ್ಷ ಟೈಗರ್**

## ಯುವಜನತೆಯಲ್ಲಿ ಹೆಚ್ಚುತ್ತಿದೆ ಗಾಂಜಾ ಘಾಟು

• ಉದಯವಾಹಿನಿ ಕೊಪ್ಪಳ

ಜಿಲ್ಲೆಯ ಹಲವು ಕಡೆ ಗಾಂಜಾ ಸೇವನೆ ಮಾಡುತ್ತಿರುವ, ಬೆಳೆಯುತ್ತಿರುವವರ ಬೆನ್ನು ಬಿದ್ದಿರುವ ಪೊಲೀಸರು ನಿರಂತರ ಪ್ರಕರಣಗಳನ್ನು ದಾಖಲಿಸುತ್ತಿದ್ದಾರೆ. ಗಾಂಜಾ ಸೇವನೆ ಮಾಡುತ್ತಿರುವವರಲ್ಲಿ ಯುವಜನತೆಯೇ ಹೆಚ್ಚಿನ ಸಂಖ್ಯೆಯಲ್ಲಿದ್ದಾರೆ.

ಕೊಪ್ಪಳದ ರೈಲ್ವೆ ನಿಲ್ದಾಣಕ್ಕೆ ತೆರಳುವ ರಸ್ತೆಯ ಮಧ್ಯದ ಸೇತುವೆ ಕೆಳಗೆ ಗಾಂಜಾ ಸೇವಿಸುತ್ತಿದ್ದ ಭಾಗ್ಯನಗರದ ಪ್ರಕಾಶ ಕಬಾಡಿಯಾ, ನಗರದ ಲಾಲ್ ಬಹಾದ್ದೂರ ಶಾಸ್ತ್ರಿ ವೃತ್ತದಲ್ಲಿ ಸುದೀಪ್ ಬೋದೂರು, ಭಾಗ್ಯನಗರ ಸಾಯಿಬಾಬಾ ದೇವಸ್ಥಾನ ಹತ್ತಿರದ ರಸ್ತೆಯಲ್ಲಿ ಗಾಂಜಾ ಅಮಲಿನಲ್ಲಿದ್ದ ಯತ್ನಟ್ಟಿ ಗ್ರಾಮದ ವೇದಾಂತ ಪವಾರ್ ಎಂಬಾತನ ವಿರುದ್ಧ ಕೊಪ್ಪಳ ನಗರ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ. ಗಂಗಾವತಿ ನಗರದ ಗುಂಡಮ್ಮ ಕ್ಯಾಂಪ್ ಹತ್ತಿರದ ಹಳ್ಳದ ಬಳಿ ಮುಬಾರಕ್ ಎಂಬಾತ ಗಾಂಜಾ ಸೇವನೆ ಮಾಡುವಾಗ ಸಿಕ್ಕಿಬಿದ್ದಿದ್ದಾನೆ. ಎಲ್ಲರ ವಿರುದ್ಧ ಎನ್.ಡಿ.ಪಿ.ಎಸ್. ಅಡಿ ಪ್ರತ್ಯೇಕ ಪ್ರಕರಣ ದಾಖಲಿಸಲಾಗಿದೆ. ಕೊಪ್ಪಳ ಗ್ರಾಮೀಣ ಪೊಲೀಸ್ ಠಾಣೆ ವ್ಯಾಪ್ತಿಯ ಇರಕಲ್ಲಗಡ ಹೊರವಲಯದಲ್ಲಿ ಗಾಂಜಾ ಮಾರಾಟದಲ್ಲಿ ತೊಡಗಿದ್ದ ನಿಂಗಪ್ಪ ಗುರಿಕಾರ, ಮಾರುತಿ ಗುರಿಕಾರ, ರವಿ ಗುರಿಕಾರ, ಹಾಗೂ ನಾಗಪ್ಪ ಕುದುರಿಮೋತಿ ಎಂಬುವರನ್ನು ಬಂಧಿಸಿ 25,200 ಮೌಲ್ಯದ 630 ಗ್ರಾಂ ಗಾಂಜಾ ಮತ್ತು 15 ಗಾಂಜಾ ಸಸಿ ಜಪ್ತಿ ಮಾಡಲಾಗಿದೆ.


ಉದಯವಾಹಿನಿ ಚಿತ್ರ

---

## ಕೆಸರು ಗದ್ದೆಯಂತಾದ ಮೈಲಾಪುರ ಗ್ರಾಮದ ರಸ್ತೆ, ವಾಹನ ಚಾಲಕರು ಹಾಗೂ ಪಾದಾಚಾರಿಗಳು ಪರದಾಟ: ರಸ್ತೆ ಸುಧಾರಣೆಗೆ ಸಚಿವರಲ್ಲಿ ಮನವಿ

• ಉದಯವಾಹಿನಿ ಕಾರಟಗಿ

ತಾಲ್ಲೂಕಿನ ಮೈಲಾಪುರ ಗ್ರಾಮದಲ್ಲಿ ತಗ್ಗು ದಿನ್ನೆಗಳಿಂದ ಹದಗೆಟ್ಟ ರಸ್ತೆ ಮೇಲೆ ಮಳೆ ನೀರು ನಿಂತು ಸಾರ್ವಜನಿಕರು ಸಾಕಷ್ಟು ತೊಂದರೆ ಅನುಭವಿಸುತ್ತಿದ್ದಾರೆ, ಗ್ರಾಮದ 2 ಮತ್ತು 3 ನೆಯ ವಾರ್ಡಿನ ಮುಖ್ಯರಸ್ತೆಯು ಮಳೆ ಬಂದಾಗೆಲ್ಲ ಕೆರೆಯಂತಾಗುತ್ತದೆ. ಇದರಿಂದಾಗಿ ಜನರು ರಸ್ತೆಯಲ್ಲಿ ತಿರುಗಾಡಲು ಸಮಸ್ಯೆ ಎದುರಾಗಿದೆ, ಈಗಷ್ಟೇ ಒಂದು ವಾರದ ಹಿಂದೆ ಗ್ರಾಮ ಪಂಚಾಯಿತಿ ಅಧ್ಯಕ್ಷರಾದ ವೀರೇಶ್ ತಳವಾರ್ ಇವರು ಸ್ವಂತ ಖರ್ಚಿನಲ್ಲಿ ಮರಂ ಹಾಕಿಸಿದ್ದರು. ಆದರೆ ರಸ್ತೆಗೆ ಹಾಕಿಸಿದ ಮರಂ ಅನ್ನು ರಸ್ತೆ ಪಕ್ಕದ ಮನೆಗಳ ವ್ಯಕ್ತಿಗಳಾದ ಮೌನೇಶ್ ಹಾಗೂ ದುರುಗನಗೌಡ ಇವರು ರಸ್ತೆಯ ಮರಂ ತೆಗೆದು ಮನೆಯ ಮುಂದೆ ಒಡ್ಡು ನಿರ್ಮಿಸಿಕೊಂಡಿದ್ದಾರೆ. ಇದರಿಂದಾಗಿ ಸರಾಗವಾಗಿ ಹರಿಯಬೇಕಾದ ನೀರು ರಸ್ತೆಯಲ್ಲಿಯೇ ನಿಂತು ಅಸ್ತವ್ಯಸ್ತವಾಗಿ ಸಾರ್ವಜನಿಕರ ಸಂಚಾರಕ್ಕೆ ಅಡಚಣೆಯಾಗಿದೆ.

ಈ ಸಂದರ್ಭದಲ್ಲಿ ಗ್ರಾಮ ಪಂಚಾಯತಿ ಅಧ್ಯಕ್ಷರು ಒಡ್ಡು ನಿರ್ಮಿಸಿಕೊಂಡವರನ್ನು ತರಾಟೆಗೆ ತೆಗೆದುಕೊಂಡಾಗ ಸ್ವಲ್ಪ ಹೊತ್ತು ಮಾತಿನ ಚಕಮಕಿ ನಡೆಯಿತು, ಗ್ರಾಮದ ಅಭಿವೃದ್ಧಿ ಮತ್ತು ಸಂಚಾರ ಸುಗಮಕ್ಕೆ ಸಾರ್ವಜನಿಕರು ಸಹಕಾರ ಅತ್ಯಗತ್ಯ ಆದರೆ ಗ್ರಾಮದಲ್ಲಿ ಸಾರ್ವಜನಿಕರೇ ಸಾರ್ವಜನಿಕ ಹಿತಾಸಕ್ತಿಯನ್ನು ಬದಿಗೊತ್ತುತ್ತಿದ್ದಾರೆ ಇದರಿಂದ ಜನಗಳಿಗೆ ತೊಂದರೆ ಆಗ್ತಾ ಇದೆ ಎಂದು ಅಧ್ಯಕ್ಷರು ವಿವರಿಸಿದ್ದಾರೆ. ಈಗಾಗಲೇ ಸಚಿವರಾದ ಶಿವರಾಜ್ ಎಸ್ ತಂಗಡಗಿ ಅವರು ಗ್ರಾಮದ ರಸ್ತೆ ಮತ್ತು ಚರಂಡಿ ನಿರ್ಮಾಣಕ್ಕೆ ಅಂದಾಜು ಪತ್ರಿಕೆ ತಯಾರಿಸಿದ್ದಾರೆ ಅತೀ ಶೀಘ್ರದಲ್ಲಿ ಕಾಮಗಾರಿ ನಡೆಸುವ ಭರವಸೆಯನ್ನು ನೀಡಿದ್ದಾರೆ ಎಂದು ಪತ್ರಿಕೆಗೆ ತಿಳಿಸಿದ್ದಾರೆ. ರಸ್ತೆಯ ಪಕ್ಕದಲ್ಲಿಯೇ ಅಂಗನವಾಡಿ ಇರುವುದರಿಂದ ನಿಂತ ನೀರಿನಿಂದ ಮಕ್ಕಳು ಅಂಗನವಾಡಿಗೆ ಹೋಗಲು ಆಗ್ತಾ ಇಲ್ಲ ನಿರಂತರ ಸೊಳ್ಳೆಗಳ ಕಾಟವು ಜಾಸ್ತಿಯಾಗಿದೆ ಆದಷ್ಟು ಬೇಗ ರಸ್ತೆಯ ಕಾಮಗಾರಿಯನ್ನು ಪ್ರಾರಂಭಿಸುವಂತೆ ಸ್ಥಳೀಯರು ಸಚಿವರಲ್ಲಿ ಒತ್ತಾಯಿಸಿದ್ದಾರೆ.


ಉದಯವಾಹಿನಿ ಚಿತ್ರ

**ರಸ್ತೆಯ ಕಾಮಗಾರಿಗಾಗಿ ಸಚಿವರ ಗಮನಕ್ಕೆ ತರಲಾಗಿದೆ, ಈಗಾಗಲೇ ಎಸ್ಟಿಮೆಟ್ ಮಾಡಿದ್ದಾರೆ ಕಾಮಗಾರಿ ಪ್ರಾರಂಭವಾಗುವವರೆಗೂ ಸಂಚಾರಕ್ಕೆ ತೊಂದರೆ ಆಗದಂತೆ ಸ್ವಂತ ಖರ್ಚಿನಲ್ಲಿ ಮರಂ ಹಾಕಿಸಲಾಗಿದೆ, ಸಾರ್ವಜನಿಕರಿಗೆ ತೊಂದರೆಯಾಗದಂತೆ ಅಗತ್ಯ ಕ್ರಮ ಕೈಗೊಳ್ಳುತ್ತೇನೆ -ವೀರೇಶ್ ತಳವಾರ್ ಅಧ್ಯಕ್ಷರು ಗ್ರಾ ಪಂ**



---

### • ಅತಿವೃಷ್ಟಿಯಿಂದಾಗಿ ದಕ್ಷಿಣ ಕ್ಷೇತ್ರದಲ್ಲಿ 3 ಸಾವಿರ ಎಕರೆಗೂ ಅಧಿಕ ಬೆಳೆ ನಷ್ಟ, ನೂರಾರು ಮನೆಗಳು ಕುಸಿತ

# ಅತಿವೃಷ್ಟಿ ಪೀಡಿತ ಪ್ರದೇಶಗಳಿಗೆ ಶಾಸಕ ಶೈಲೇಂದ್ರ ಬೆಲ್ದಾಳೆ ಭೇಟಿ

• ಉದಯವಾಹಿನಿ ಬೀದರ್

ಶಾಸಕರಾದ ಡಾ. ಶೈಲೇಂದ್ರ ಬೆಲ್ದಾಳೆ ಅವರು ಬೀದರ್ ದಕ್ಷಿಣ ಕ್ಷೇತ್ರದ ವಿವಿಧೆಡೆ ದಿನವಿಡೀ ಸಂಚರಿಸಿ ಇತ್ತೀಚೆಗೆ ಅತಿವೃಷ್ಟಿಯಿಂದ ಆಗಿರುವ ಬೆಳೆ ನಷ್ಟ ಹಾಗೂ ಸಾರ್ವಜನಿಕ ಆಸ್ತಿಪಾಸ್ತಿ ಹಾನಿಯನ್ನು ಪರಿಶೀಲಿಸಿದರು.

ಕಮಠಾಣಾ, ಬಗದಲ್, ಮನ್ನಳ್ಳಿ ಹೋಬಳಿ ವ್ಯಾಪ್ತಿಯಲ್ಲಿ ಬರುವ ವಿವಿಧ ಗ್ರಾಮಗಳ ಹೊಲಗಳಿಗೆ ತೆರಳಿ ವ್ಯಾಪಕ ಮಳೆಯಿಂದ ಆಗಿರುವ ಬೆಳೆ ಹಾನಿ ವೀಕ್ಷಿಸಿದರು. ವಾಡಿಕೆಗಿಂತ ಸುರಿದ ಅಧಿಕ ಮಳೆ, ಕಾರಂಜಾ ಹಿನ್ನೀರು, ಕೊತ್ತುರ್ ಬ್ಯಾರೇಜಿನಿಂದ ನೀರು ಬಿಟ್ಟಿದ್ದರಿಂದ ಉದ್ಭವಿಸಿದ ಸಮಸ್ಯೆ, ಹಳ್ಳ-ಸೇತುವೆ ಪಕ್ಕಕ್ಕೆ ನೀರು ನುಗ್ಗಿ ಅಪಾರ ಹಾನಿಯಾಗಿರುವುದನ್ನು ಪರಿಶೀಲಿಸಿದರು. ಸಮೃದ್ಧವಾಗಿ ಬಂದಿದ್ದ ಉದ್ದು, ಹೆಸರು, ಸೋಯಾಬೀನ್, ತೊಗರಿ ತೋಟಗಾರಿಕೆಯ ಮುಂತಾದ ಬೆಳೆ ಹಾಳಾಗಿರುವುದು ವೀಕ್ಷಿಸಿ ಸಂತ್ರಸ್ತ ರೈತರಿಂದ ಮಾಹಿತಿ ಕಲೆ ಹಾಕಿದರು.

ಸ್ಥಳದಲ್ಲಿದ್ದ ವಿವಿಧ ಇಲಾಖೆ ಅಧಿಕಾರಿಗಳ ಜೊತೆಗೆ ಈ ಬಗ್ಗೆ ಚರ್ಚಿಸಿದ ಶಾಸಕರು, ಹಳ್ಳದಲ್ಲಿ ಹೂಳುತ್ತುವಿಕೆ, ಸಣ್ಣ ಸೇತುವೆ ಎತ್ತರಿಸುವಿಕೆ, ನೀರು ಸುಗಮ ಹೋಗುವ ನಿಟ್ಟಿನಲ್ಲಿ ಸಮಗ್ರ ಯೋಜನೆ ರೂಪಿಸಿ ವರದಿ ಸಿದ್ಧಪಡಿಸಲು ತಿಳಿಸಿದರು. ಕ್ಷೇತ್ರದಲ್ಲಿ ಹಾಳಾಗಿರುವ ರಸ್ತೆ, ಸೇತುವೆ ದುರಸ್ತಿಗೆ ಕ್ರಮ ಕೈಗೊಳ್ಳಬೇಕು.

ವಿದ್ಯುತ್ ಕಂಬ, ಟ್ರಾನ್ಸ್‌ಫರ್ಮರ್ ಸಾಕಷ್ಟು ಕಡೆ ಹಾಳಾಗಿದ್ದು, ಕೂಡಲೆ ಸರಿಪಡಿಸಿ ವಿದ್ಯುತ್ ಸಮಸ್ಯೆ ನಿವಾರಿಸಬೇಕು ಎಂದು ಅಧಿಕಾರಿಗಳಿಗೆ ಸೂಚಿಸಿದರು. ಕಂದಾಯ, ಕೃಷಿ, ತೋಟಗಾರಿಕೆ ಅಧಿಕಾರಿಗಳು ಬೆಳೆ ಹಾನಿ ಬಗ್ಗೆ ಸಮರ್ಪಕ ಸಮೀಕ್ಷೆ ನಡೆಸಬೇಕು. ಯಾವೊಬ್ಬ ರೈತರು ಸಹ ಸಮೀಕ್ಷೆಯಿಂದ ಹೊರಗಿರಬಾರದು ಎಂದು ತಾಕೀತು ಮಾಡಿದರು. ಅತಿವೃಷ್ಟಿಯಿಂದಾಗಿ ದಕ್ಷಿಣ ಕ್ಷೇತ್ರದಲ್ಲಿ 3 ಸಾವಿರ ಎಕರೆಗೂ ಅಧಿಕ ಬೆಳೆ ನಷ್ಟವಾಗಿದೆ. ನೂರಾರು ಮನೆಗಳು ಕುಸಿದಿವೆ. ಸಾರ್ವಜನಿಕ ಆಸ್ತಿಪಾಸ್ತಿ ನಷ್ಟವಾಗಿದೆ. ನಿಖರ ಹಾನಿ ಬಗ್ಗೆ ಸಮರ್ಪಕ ಸಮೀಕ್ಷೆ ಮಾಡಲು ಅಧಿಕಾರಿಗಳಿಗೆ ಸೂಚನೆ ನೀಡಲಾಗಿದೆ.

ಬೆಳೆ ನಷ್ಟದಿಂದ ಸಂಕಷ್ಟಕ್ಕೆ ಸಿಲುಕಿರುವ ರೈತರಿಗೆ ಸರ್ಕಾರ ಪ್ರತಿ ಹೆಕ್ಟೇರ್‌ಗೆ 50 ಸಾವಿರ ರೂ.ಪರಿಹಾರ ನೀಡಿ ನೆರವಿಗೆ ಬರಬೇಕು. ಈಗಾಗಲೇ ವಿಧಾನಸಭೆ ಅಧಿವೇಶನದಲ್ಲೂ ಕ್ಷೇತ್ರದ ಸಮಸ್ಯೆ ಕುರಿತು ಸರ್ಕಾರದ ಗಮನ ಸೆಳೆಯಲಾಗಿದೆ.

ಬೆಳೆ ನಷ್ಟ ಅನುಭವಿಸಿದ ರೈತರು ಧೃತಿಗೆಡುವ ಅಗತ್ಯವಿಲ್ಲ. ಅಗತ್ಯ ನೆರವು, ಪರಿಹಾರಕ್ಕೆ ನಿಮ್ಮ ಪರವಾಗಿ ಸರ್ಕಾರದ ಮಟ್ಟದಲ್ಲಿ ಪ್ರಯತ್ನ ಮಾಡುವುದಾಗಿ ಶಾಸಕರು ಅಭಯ ನೀಡಿದರು. ಬಳಿಕ ಅಧಿಕಾರಿಗಳ ಸಭೆ ನಡೆಸಿ ರೈತರಿಗೆ ನ್ಯಾಯ ಒದಗಿಸಿ ಕೊಡುವುದು ನಮ್ಮೆಲ್ಲರ ಕರ್ತವ್ಯ ಹೀಗಾ ಅಧಿಕಾರಿಗಳು ರೈತರ ಬೆಳೆ ಹಾನಿ ಕುರಿತು ಶೀಘ್ರ ಸರ್ಕಾರಕ್ಕೆ ವರದಿ ಸಲ್ಲಿಸಿ ಸಂತ್ರಸ್ತರಿಗೆ ಪರಿಹಾರ ದೊರೆಯುವಂತಾಗಬೇಕು ಎಂದು ಸೂಚಿಸಿದರು.

**ವಾಡಿಕೆಗಿಂತ ಸುರಿದ ಅಧಿಕ ಮಳೆ**


ಉದಯವಾಹಿನಿ ಚಿತ್ರ

**ಶಾಶ್ವತ ಪರಿಹಾರ ಕಲ್ಪಿಸಲು ರೈತರ ಆಗ್ರಹ**

**ಬುಧೇರಾ-ಮಿರ್ಜಾಪುರ(ಟಿ) ನಡುವಿನ ಹಳ್ಳ ತುಂಬಿ ಹರಿದ ಕಾರಣ ಅಕ್ಕಪಕ್ಕದ ನೂರಾರು ಎಕರೆ ಹೊಲದಲ್ಲಿನ ಬೆಳೆ ಸಂಪೂರ್ಣ ಕೊಚ್ಚಿಕೊಂಡು ಹೋಗಿವೆ. ಈ ಹಳ್ಳಕ್ಕೆ ಕಮಠಾಣಾ ಕಡೆಯಿಂದ ಭಾರಿ ನೀರು ಬರುತ್ತವೆ. ಹಳ್ಳದಲ್ಲಿ ಭಾರಿ ಹೂಳು ತುಂಬಿದ್ದರಿಂದ ಹಾಗೂ ನೀರು ಸುಗಮ ಹೋಗಲು ಮಾರ್ಗವಿಲ್ಲದ ಕಾರಣ ಸ್ವಲ್ಪವೇ ಜಾಸ್ತಿ ಮಳೆ ಬಿದ್ದರೂ ಅಕ್ಕಪಕ್ಕದ ಜಮೀನಿಗೆ ನೀರು ನುಗ್ಗಿ ಭಾರಿ ಹಾನಿಯಾಗುತ್ತಿದೆ. ಹಲವು ಜಮೀನಿನಿಂದ ಫಲವತ್ತಾದ ಮಣ್ಣು ಸಹ ಕೊಚ್ಚಿಹೋಗಿದೆ. ಈ ಸಮಸ್ಯೆಗೆ ಶಾಶ್ವತ ಪರಿಹಾರ ಕಲ್ಪಿಸಲು ರೈತರು ಶಾಸಕರೆದುರು ಗೋಳು ತೋಡಿಕೊಂಡರು.**

---

## ವಿರೋಧಿಗಳ ಬಂಧನಕ್ಕೆ ಆಗ್ರಹ

• ಉದಯವಾಹಿನಿ ಮುಂಡರಗಿ

ಧರ್ಮಸ್ಥಳ ಒಂದು ಪವಿತ್ರ, ಧಾರ್ಮಿಕ ಕ್ಷೇತ್ರವಾಗಿದ್ದು, ಅದರ ವಿರುದ್ಧ ಆಧಾರ ರಹಿತವಾಗಿ ಅಪಪ್ರಚಾರ ಮಾಡುತ್ತಿರುವ ವಿರೋಧಿಗಳನ್ನು ಬಂಧಿಸಿ ಕಠಿಣ ಶಿಕ್ಷೆ ವಿಧಿಸಬೇಕು' ಎಂದು ಒತ್ತಾಯಿಸಿ ತಾಲ್ಲೂಕಿನ ವಿವಿಧ ಸಂಘಟನೆಗಳ ಕಾರ್ಯಕರ್ತರು ಶನಿವಾರ ಬೃಹತ್ ಪ್ರತಿಭಟನೆ ನಡೆಸಿ, ತಹಶೀಲ್ದಾರರಿಗೆ ಮನವಿ ಸಲ್ಲಿಸಿದರು.

ಇಲ್ಲಿನ ಹೆಸ್ಕಾಂ ಕಚೇರಿ ಬಳಿಯ ಗಣೇಶ ದೇವಸ್ಥಾನದಿಂದ ಶಾಸಕ ಡಾ.ಚಂದ್ರು ಲಮಾಣಿ ಅವರ ನೇತೃತ್ವದಲ್ಲಿ ಆರಂಭಗೊಂಡ ಪ್ರತಿಭಟನಾ ಮೆರವಣಿಗೆ ಪಟ್ಟಣದ ಪ್ರಮುಖ ಬೀದಿಗಳಲ್ಲಿ ಸಂಚರಿಸಿ, ಕೊಪ್ಪಳ ವೃತ್ತದಲ್ಲಿ ಮಾನವ ಸರಪಳಿ ನಿರ್ಮಿಸುವ ಮೂಲಕ ಸರ್ಕಾರ ವಿರುದ್ಧ ಆಕ್ರೋಶ ವ್ಯಕ್ತ ಪಡಿಸಿದರು. ಶಾಸಕ ಡಾ.ಚಂದ್ರು ಲಮಾಣಿ ಮಾತನಾಡಿ, 'ರಾಜ್ಯ ಸರ್ಕಾರವು ಧರ್ಮಸ್ಥಳ ವಿರೋಧಿಗಳ ಗುಂಪಿಗೆ ಪರೋಕ್ಷವಾಗಿ ಸಹಕಾರ ನೀಡುತ್ತಿದ್ದು, ಯಾರೋ ಅನಾಮಧೇಯ ನೀಡಿದ ದೂರಿನನ್ವಯ ಎಸ್‌ಐಟಿ ರಚಿಸಿ ಹಿಂದೂಗಳ ಭಾವನೆಗಳನ್ನು ಕೆರಳಿಸಿದೆ' ಎಂದು ಆರೋಪಿಸಿದರು. ಆನಂದಗೌಡ ಪಾಟೀಲ, ಕೆ.ವಿ. ಹಂಚಿನಾಳ, ಕೊಟ್ರೇಶ ಆ ಉಪ್ಪಿನಬೆಟಗೇರಿ, ಬಸವರಾಜ ಬಿಳಿಮಗ್ಗದ, ಪ್ರಶಾಂತ ಗುಡದಪ್ಪನವರ, ಇದ್ದರು.

1956 ರಲ್ಲಿ ಭಾರತಕ್ಕೆ ಬಂದಿದ್ದ ಪಾಕಿಸ್ತಾನಿ ಮಹಿಳೆಯೊಬ್ಬರ ಹೆಸರನ್ನು ಮತದಾರರ ಪಟ್ಟಿಯಲ್ಲಿ ಸೇರಿಸಲಾಗಿದೆ

# ಮತದಾರರ ಪಟ್ಟಿಯಲ್ಲಿ ಪಾಕಿಸ್ತಾನ ಮಹಿಳೆಯ ಹೆಸರು ಪತ್ತೆ

**ಪಾಟ್ನಾ:** ಬಿಹಾರದಲ್ಲಿ ಮತದಾರರ ಪಟ್ಟಿ ಪರಿಷ್ಕರಣೆ ವಿಚಾರ ಬಹಳ ಚರ್ಚೆಯಾಗುತ್ತಿದೆ. ಈ ವೇಳೆ ಅಚ್ಚರಿಯ ಬೆಳವಣಿಗೆ ಕಂಡುಬಂದಿದೆ. 1956 ರಲ್ಲಿ ಭಾರತಕ್ಕೆ ಬಂದಿದ್ದ ಪಾಕಿಸ್ತಾನಿ ಮಹಿಳೆಯೊಬ್ಬರ ಹೆಸರನ್ನು ಮತದಾರರ ಪಟ್ಟಿಯಲ್ಲಿ ಸೇರಿಸಲಾಗಿದೆ. ಚುನಾವಣಾ ಆಯೋಗದ ಪರಿಷ್ಕರಣೆ ಪ್ರಕ್ರಿಯೆಯಲ್ಲೂ ಆಕೆಯ ಹೆಸರು ಪರಿಶೀಲನೆಯಾಗಿದೆ.

ಇಮ್ರಾನಾ ಖಾನಮ್ ವಯಸ್ಸಾದ ಕಾರಣ ಮಾತನಾಡಲು ಸಾಧ್ಯವಾಗುತ್ತಿಲ್ಲ. ಈ ಬಗ್ಗೆ ಬೂತ್ ಮಟ್ಟದ ಅಧಿಕಾರಿ ಫರ್ಜಾನಾ ಖಾನಮ್ ಮಾಹಿತಿ

- **ಬಿಹಾರದಲ್ಲಿ ಮತದಾರರ ಪಟ್ಟಿ ಪರಿಷ್ಕರಣೆ ವಿಚಾರ ಬಹಳ ಚರ್ಚೆ**
- **ಪಾಕಿಸ್ತಾನಿ ಮಹಿಳೆಯೊಬ್ಬರ ಹೆಸರು ಮತದಾರರ ಪಟ್ಟಿಯಲ್ಲಿ ಪತ್ತೆ**
- **ಚುನಾವಣಾ ಆಯೋಗದ ಪರಿಷ್ಕರಣೆ ಪ್ರಕ್ರಿಯೆಯಲ್ಲೂ ಆಕೆಯ ಹೆಸರು ಪರಿಶೀಲನೆ**

ನೀಡಿದ್ದಾರೆ. ಅವರು ಮಾತನಾಡಲು ಸಾಧ್ಯವಾಗದ ಸ್ಥಿತಿಯಲ್ಲಿದ್ದಾರೆ. ಅವರು ವಯಸ್ಸಾದವರು ಮತ್ತು ಅನಾರೋಗ್ಯದಿಂದ ಬಳಲುತ್ತಿದ್ದಾರೆ. ಇಲಾಖೆಯ ಆದೇಶದಂತೆ, ನಾನು ಫಾರ್ಮ್ ಅನ್ನು ಭರ್ತಿ ಮಾಡಿ ಅವರ ಹೆಸರನ್ನು ತೆಗೆದುಹಾಕುವ ಪ್ರಕ್ರಿಯೆಯನ್ನು



**ಪರಿಷ್ಕರಣೆ ವಿಚಾರ ಚರ್ಚೆ**

ಪ್ರಾರಂಭಿಸಿದೆ. ಅವರು ಪಾಕಿಸ್ತಾನದಿಂದ ಬಂದವರು. ತನಿಖೆಯ ಮುಂದಿನ ಹಂತವನ್ನು ಇಲಾಖೆ ನಡೆಸುತ್ತದೆ. ನನಗೆ ಆಗಸ್ಟ್ 11 ರಂದು ಗೃಹ ಸಚಿವಾಲಯದಿಂದ ನೋಟಿಸ್ ಬಂದಿತ್ತು ಎಂದು ಫರ್ಜಾನಾ ಖಾನಮ್ ಹೇಳಿದ್ದಾರೆ.

ಭಾರತದ ಚುನಾವಣಾ ಆಯೋಗವು 65 ಲಕ್ಷ ಮತದಾರರ ಹೆಸರನ್ನು ತೆಗೆದುಹಾಕಿದೆ. ಈ ಪಟ್ಟಿಯನ್ನು ಪ್ರಕ್ರಿಯೆಯ ನಂತರ ಬಿಡುಗಡೆ ಮಾಡಲಾಗಿದೆ. ಸುಪ್ರೀಂ ಕೋರ್ಟ್‌ನ ಆದೇಶದಂತೆ ಆಗಸ್ಟ್ 14 ರಂದು ಈ ಪಟ್ಟಿಯನ್ನು ಪ್ರಕಟಿಸಲಾಗಿದೆ. ಈ ಪಟ್ಟಿಯನ್ನು ಚುನಾವಣಾ ಆಯೋಗದ ಅಧಿಕೃತ ವೆಬ್‌ಸೈಟ್‌ನಲ್ಲಿ ನೋಡಬಹುದು.

ಜಿಲ್ಲಾ ಕಚೇರಿಗಳಲ್ಲಿ ಈ ಪಟ್ಟಿಗಳನ್ನು ಪ್ರದರ್ಶಿಸಲು ಮತ್ತು ಸಾಮಾಜಿಕ ಮಾಧ್ಯಮಗಳ ಮೂಲಕ ವ್ಯಾಪಕವಾಗಿ ಪ್ರಚಾರ ಮಾಡಲು ಉನ್ನತ ನ್ಯಾಯಾಲಯವು ಚುನಾವಣಾ ಅಧಿಕಾರಿಗಳಿಗೆ ನಿರ್ದೇಶನ ನೀಡಿದೆ. ಬೂತ್ ಮಟ್ಟದ ಕಚೇರಿಗಳು ಮತ್ತು ಗ್ರಾಮ ಪಂಚಾಯತ್ ಕಚೇರಿಗಳು ಈ ಪಟ್ಟಿಗಳನ್ನು ಪ್ರಚಾರ ಮಾಡುವ ಜವಾಬ್ದಾರಿಯನ್ನು ಹೊಂದಿವೆ.

ಇನ್ನೊಂದು ಬೆಳವಣಿಗೆಯಲ್ಲಿ, ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಅವರು ಚುನಾವಣಾ ಆಯೋಗದ ವಿರುದ್ಧ ವೋಟ್ ಚೋರಿ ಆರೋಪ ಮಾಡಿದ್ದರು. ಇದಕ್ಕೆ ಪ್ರತಿಕ್ರಿಯಿಸಿದ ಮುಖ್ಯ ಚುನಾವಣಾ ಆಯುಕ್ತ ಜ್ಞಾನೇಶ್ ಕುಮಾರ್, ಗಾಂಧಿಯವರು ಏಳು ದಿನಗಳ ಒಳಗೆ ಪ್ರಮಾಣ ಪತ್ರ ಸಲ್ಲಿಸಬೇಕು ಅಥವಾ ಸಾರ್ವಜನಿಕವಾಗಿ ಕ್ಷಮೆಯಾಚಿಸಬೇಕು ಎಂದು ಆಗ್ರಹಿಸಿದ್ದಾರೆ.

ಈ ನಡುವೆ, ಮತದಾರರ ಪಟ್ಟಿಯನ್ನು ನಿಖರವಾಗಿ ನಿರ್ವಹಿಸುವಲ್ಲಿನ ಸವಾಲುಗಳನ್ನು ಪಾಕಿಸ್ತಾನಿ ಮಹಿಳೆಯ ಪ್ರಕರಣವು ಎತ್ತಿ ತೋರಿಸುತ್ತದೆ. ಚುನಾವಣಾ ಆಯೋಗವು ವ್ಯವಸ್ಥಿತ ಪರಿಷ್ಕರಣೆಗಳು ಮತ್ತು ಪಾರದರ್ಶಕ ಪ್ರಕ್ರಿಯೆಗಳ ಮೂಲಕ ಈ ಸಮಸ್ಯೆಯನ್ನು ಪರಿಹರಿಸಲು ಪ್ರಯತ್ನಿಸುತ್ತಿದೆ.

### ಸುಪ್ರೀಂಕೋರ್ಟ್ ಸೂಚನೆ

**ಚುನಾವಣಾ ಆಯೋಗವು ಬಿಹಾರದ ವೆಬ್‌ಸೈಟ್‌ನಲ್ಲಿ ಹೊಸ ಲಿಂಕ್ ಅನ್ನು ನೀಡಿದೆ. ಇದರ ಮೂಲಕ ಮತದಾರರು ತಮ್ಮ ಹೆಸರನ್ನು ಪಟ್ಟಿಯಲ್ಲಿ ಪರಿಶೀಲಿಸಿಕೊಳ್ಳಬಹುದು. ಮರಣ, ವಲಸೆ ಅಥವಾ ನಕಲಿ ನೋಂದಣಿಯಂತಹ ಕಾರಣಗಳನ್ನು ಪಟ್ಟಿ ಮಾಡಿ ಜಿಲ್ಲಾವಾರು ತೆಗೆದುಹಾಕಲಾದ ಹೆಸರುಗಳ ಪಟ್ಟಿಯನ್ನು ಪ್ರಕಟಿಸುವಂತೆ ಸುಪ್ರೀಂ ಕೋರ್ಟ್ ಸೂಚಿಸಿದೆ.**

### ಚುನಾವಣಾ ಆಯೋಗದ ಕಾರ್ಯವೈಖರಿ ಬಗ್ಗೆ ಪ್ರಶ್ನೆ

**ಗೃಹ ಸಚಿವಾಲಯದ ತನಿಖೆಯಿಂದ ಈ ವಿಷಯ ಬೆಳಕಿಗೆ ಬಂದಿದೆ. ವೀಸಾ ಅವಧಿ ಮುಗಿದರೂ ಭಾರತದಲ್ಲಿ ಉಳಿದುಕೊಂಡಿರುವ ವಿದೇಶಿಯರ ಬಗ್ಗೆ ತನಿಖೆ ನಡೆಸಲಾಗುತ್ತಿತ್ತು. ಆಗ ಭಾಗಲ್ಪುರದ ಇಮ್ರಾನಾ ಖಾನಮ್ ಎಂಬ ಮಹಿಳೆ ಬಗ್ಗೆ ಮಾಹಿತಿ ಸಿಕ್ಕಿದೆ. ಈ ಘಟನೆ ಚುನಾವಣಾ ಆಯೋಗದ ಕಾರ್ಯವೈಖರಿಯ ಬಗ್ಗೆ ಪ್ರಶ್ನೆಗಳನ್ನು ಹುಟ್ಟುಹಾಕಿದೆ. ಮತದಾರರ ಪಟ್ಟಿಯ ನಿಖರತೆ ಕಾಪಾಡುವಲ್ಲಿನ ಸವಾಲುಗಳನ್ನು ಇದು ಎತ್ತಿ ತೋರಿಸುತ್ತದೆ.**

ಸುಪ್ರೀಂ ಕೋರ್ಟ್ ಚುನಾವಣಾ ಆಯೋಗಕ್ಕೆ ಕೆಲವು ನಿರ್ದೇಶನಗಳನ್ನು ನೀಡಿದೆ. ತೆಗೆದುಹಾಕಲಾದ ಹೆಸರುಗಳ ಪಟ್ಟಿಯನ್ನು ಸಾರ್ವಜನಿಕರಿಗೆ ತಿಳಿಸಬೇಕು. ಈ ಪಟ್ಟಿಯನ್ನು ಜಿಲ್ಲಾ ಕಚೇರಿಗಳಲ್ಲಿ ಪ್ರದರ್ಶಿಸಬೇಕು ಮತ್ತು ಸಾಮಾಜಿಕ ಮಾಧ್ಯಮಗಳಲ್ಲಿ ಪ್ರಚಾರ ಮಾಡಬೇಕು. ಇದರಿಂದ ಜನರು ತಮ್ಮ ಹೆಸರುಗಳನ್ನು ಪರಿಶೀಲಿಸಿಕೊಳ್ಳಬಹುದು ಮತ್ತು ತಪ್ಪುಗಳಿದ್ದರೆ ಸರಿಪಡಿಸಿಕೊಳ್ಳಬಹುದು.


ಉದಯ ವಾಹಿನಿ

ದೇಶ/ವಿದೇಶ

ಸೋಮವಾರ 25 ಆಗಸ್ಟ್ 2025




## ಮಿನಿ ನ್ಯೂಸ್

### ಮಕ್ಕಳಿಗೆ ವಿಷವುಣಿಸಿ ಆತ್ಮಹತ್ಯೆಗೆ ಶರಣಾದ ತಾಯಿ

ಬಂದಾ: ಮಕ್ಕಳಿಗೆ ವಿಷ ಉಣಿಸಿ ತಾಯಿ ಕೂಡ ವಿಷ ಸೇವಿಸಿ ಆತಹತ್ಯೆ ಮಾಡಿಕೊಂಡಿರುವ ಘಟನೆ ಉ. ಪ್ರದೇಶದ ಚಿತ್ರಕೂಟ ಜಿಲ್ಲೆಯ ಇಟ್ವಾ ದುಡೈಲಾ ಗ್ರಾಮದಲ್ಲಿ ನಡೆದಿದೆ. ಮೃತರನ್ನು ಜ್ಯೋತಿ ಯಾದವ್(28) ಬುಲ್ಬುಲ್(1) ಮತ್ತು ಚಂದ್ರಮಾ(3)ಎಂದು ಗುರುತಿಸಲಾಗಿದೆ. ಆಕೆಯ ಮತ್ತೊಬ್ಬ 5 ವರ್ಷದ ಮಗ ದೀಪಚಂದ್ರ ಚಿಕಿತ್ಸೆ ಪಡೆಯುತ್ತಿದ್ದು, ಗಂಭೀರ ಸ್ಥಿತಿಯಲ್ಲಿದ್ದಾನೆ ಎಂದು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಅರುಣ್ ಕುಮಾರ್ ಸಿಂಗ್ ತಿಳಿಸಿದ್ದಾರೆ. ಜ್ಯೋತಿ ಪತಿ ಬಬ್ಬು ಯಾದವ್ ಟೆಂಪೋ ಚಾಲಕನಾಗಿದ್ದು ಇಟ್ವಾ ದುಡೈಲಾ ಗ್ರಾಮದಲ್ಲಿ ನೆಲೆಸಿದ್ದರು. ನಿನ್ನೆ ರಾತ್ರಿ ದಂಪತಿ ನಡುವೆ ಜಗಳವಾಗಿತ್ತು ಎಂದು ಸ್ಥಳೀಯರು ತಿಳಿಸಿದ್ದಾರೆ.

ಪತಿ ಹೊರಗೆ ಹೋದಾಗ ಜ್ಯೋತಿ ಯಾದವ್ ತಾನೆತ್ತ ಮಕ್ಕಳಿಗೆ ವಿಷ ಉಣಿಸಿ ನಂತರ ತಾವು ಸೇವಿಸಿದ್ದಾರೆ. ವಿವಯ ತಿಳಿದು ನೆರೆಹೊರೆಯವರು ನಾಲ್ವರನ್ನು ಮಜ್ಗವಾನ್ ಆಸ್ಪತ್ರೆಗೆ ಕರೆದೊಯ್ಯದರು ಆದರೆ ಚಿಕಿತ್ಸೆ ವೇಳೆ ಮಗು ಬುಲ್ಬುಲ್ ಸಾವನ್ನಪ್ಪಿದೆ.

## ಎಲ್‌ಪಿಜಿ ಟ್ಯಾಂಕ್ ಸ್ಫೋಟಗೊಂಡು 7 ಮಂದಿ ಸಜೀವ ದಹನ

**ಜಲಂಧರ್:** ಹೋಶಿಯಾರ್ಪುರ-ಜಲಂಧರ್ ರಸ್ತೆಯ ಮಂಡಿಯಾಲ ಅಡ್ಡಾ ಬಳಿ ಪಿಕಪ್ ವಾಹನಕ್ಕೆ ಡಿಕ್ಕಿ ಹೊಡೆದು ಎಲ್‌ಪಿಜಿ ಟ್ಯಾಂಕರ್ ಸ್ಫೋಟಗೊಂಡಿರುವ ಘಟನೆ ತಡರಾತ್ರಿ ನಡೆದಿದ್ದು, ದುರಂತದಲ್ಲಿ 7 ಜನರು ಸಾವನ್ನಪ್ಪಿದ್ದು 15 ಮಂದಿಗೆ ಸುಟ್ಟಗಾಯಗಳಾಗಿವೆ.

ಮೃತರನ್ನು ಸುಖ್‌ಜೀತ್ ಸಿಂಗ್ (ಚಾಲಕ), ಬಲ್ವಂತ್ ರೈ, ಧರ್ಮೇಂದರ್ ವರ್ಮಾ, ಮಂಜಿತ್ ಸಿಂಗ್, ವಿಜಯ್, ಜಸ್ವಿಂದರ್ ಕೌರ್ ಮತ್ತು ಆರಾಧನಾ ವರ್ಮಾ ಎಂದು ಗುರುತಿಸಲಾಗಿದೆ. ಬಲ್ವಂತ್ ಸಿಂಗ್, ಹರ್ಬನ್ಸ್ ಲಾಲ್, ಅಮರಜೀತ್ ಕೌರ್, ಸುಖಜೀತ್ ಕೌರ್, ಜ್ಯೋತಿ, ಸುಮನ್, ಗುರುಮುಖ್ ಸಿಂಗ್, ಹರ್‌ಪ್ರೀತ್ ಕೌರ್, ಕುಸುಮಾ, ಭಗವಾನ್ ದಾಸ್, ಲಾಲಿ ವರ್ಮಾ, ಸೀತಾ, ಅಜಯ್, ಸಂಜಯ್, ರಾಘವ್ ಮತ್ತು ಪೂಜಾ ಅವರುಗಳು ಗಾಯಾಗೊಂಡಿದ್ದು ಆಸ್ಪತ್ರೆಗೆ ದಾಖಲಾಗಿದ್ದು, ಇವರಲ್ಲಿ ಕೆಲವರು ಈಗಾಗಲೇ ಆಸ್ಪತ್ರೆಯಿಂದ ಡಿಸ್ಚಾರ್ಜ್ ಆಗಿದ್ದಾರೆ.

ಭಾರತೀಯ ನ್ಯಾಯ ಸಂಹಿತಾ ಸೆಕ್ಷನ್ 105 (ಕೊಲೆಗೆ ಸಮಾನವಲ್ಲದ ಅಪರಾಧಿ ನರಹತ್ಯೆ) ಮತ್ತು 324(4) (ಆಸ್ತಿಗೆ ಹಾನಿ ಉಂಟುಮಾಡುವ ದುಷ್ಕೃತ್ಯ)



ರಡಿ ಎಫ್‌ಐಆರ್ ದಾಖಲಿಸಲಾಗಿದೆ. ಪಂಜಾಬ್ ಮುಖ್ಯಮಂತ್ರಿ ಭಗವಂತ್ ಮಾನ್ ಅವರು ಮೃತರ ಕುಟುಂಬಗಳಿಗೆ ತಲಾ 2 ಲಕ್ಷ ರೂ. ಆರ್ಥಿಕ ನೆರವು ಘೋಷಿಸಿದ್ದು, ಗಾಯಾಳುಗಳಿಗೆ ಉಚಿತ ವೈದ್ಯಕೀಯ ಚಿಕಿತ್ಸೆ ನೀಡುವುದಾಗಿ ಭರವಸೆ ನೀಡಿದ್ದಾರೆ.

ಪರಿಹಾರ ಮತ್ತು ತ್ವರಿತ ಕ್ರಮ ಕೈಗೊಳ್ಳಬೇಕೆಂದು ಒತ್ತಾಯಿಸಿ ಮಂಡಿಯಾಲ ಮತ್ತು ಪಕ್ಕದ ಹಳ್ಳಿಗಳ ನಿವಾಸಿಗಳು ಮೂರು ಗಂಟೆಗಳಿಗೂ ವಾಹನಗಳನ್ನು ತಡೆದು ಹೆಚ್ಚು ಕಾಲ ಧರಣಿ ನಡೆಸಿದ್ದಾರೆ. ಎಸ್‌ಡಿಎಂ ಗುರುಸಿಮ್ರನ್ ಜೀತ್ ಕೌರ್ ಅವರು, ಪರಿಹಾರ ನೀಡಲಾಗುವುದು ಮತ್ತು ಹೊಣೆಗಾರರ ಮೇಲೆ ಕ್ರಮ ಕೈಗೊಳ್ಳಲಾಗುವುದು ಎಂದು ಭರವಸೆ ನೀಡಿದ ನಂತರ ಪ್ರತಿಭಟನೆ ಹಿಂಪಡೆಯಲಾಗಿದೆ.

> **ಮುಗ್ಧ ಜೀವಗಳನ್ನು ಬಲಿ ತೆಗೆದುಕೊಂಡ ಮತ್ತು ಅನೇಕರಿಗೆ ಗಾಯಗಳನ್ನುಂಟು ಮಾಡಿದ ದುರಂತದ ಬಗ್ಗೆ ತಿಳಿದು ತುಂಬಾ ನೋವಾಗಿದೆ. ಈ ವಿನಾಶಕಾರಿ ಅಪಘಾತದಲ್ಲಿ ತಮ್ಮ ಪ್ರೀತಿಪಾತ್ರರನ್ನು ಕಳೆದುಕೊಂಡ ಕುಟುಂಬಗಳಿಗೆ ನನ್ನ ಸಂತಾಪಗಳು.**
> **-ಗುಲಾಬ್ ಚಂದ್, ಪಂಜಾಬ್ ರಾಜ್ಯಪಾಲ**

ಸಂಪುಟ ಸಚಿವ ಡಾ. ರವಜೋತ್ ಸಿಂಗ್, ಶಾಸಕ ಬ್ರಾಮ್ ಶಂಕರ್ ಜಿಂಪಾ, ಸಂಸದ ರಾಜ್ ಕುಮಾರ್ ಚಬ್ಬೇವಾಲ್ ಮತ್ತು ಜಿಲ್ಲಾಧಿಕಾರಿ ಆಶಿಕಾ ಜೈನ್ ಅವರು ಮೃತರ ಕುಟುಂಬಗಳಿಗೆ ಸ್ವಾಂತ್ವಾನ ಹೇಳಿದ್ದಾರೆ.

ಪ್ರೀತಿಪಾತ್ರರನ್ನು ಕಳೆದುಕೊಂಡ ಕುಟುಂಬಗಳಿಗೆ 1 ಕೋಟಿ ರೂ. ಪರಿಹಾರ ನೀಡಬೇಕು, ಹಾನಿಗೊಳಗಾದ ಮನೆಗಳು ಮತ್ತು ಅಂಗಡಿಗಳಿಗೆ ಸಂಪೂರ್ಣ ನಷ್ಟ ಭರಿಸಬೇಕೆಂದು ಎಂದು ಪಂಜಾಬ್ ಕಾಂಗ್ರೆಸ್ ಮುಖ್ಯಸ್ಥ ಅಮರಿಂದರ್ ಸಿಂಗ್ ರಾಜಾ ವಾರಿಂಗ್ ಅವರು ಆಗ್ರಹಿಸಿದ್ದಾರೆ.

## ವಾಯು ರಕ್ಷಣಾ ಶಸ್ತ್ರಾಸ್ತ್ರ ಹಾರಾಟ ಪರೀಕ್ಷೆ ಯಶಸ್ವಿ

**ನವದೆಹಲಿ:** ಒಡಿಶಾ ಕರಾವಳಿಯಲ್ಲಿ ಭಾರತವು ಸಮಗ್ರ ವಾಯು ರಕ್ಷಣಾ ಶಸ್ತ್ರಾಸ್ತ್ರ ವ್ಯವಸ್ಥೆಯ (ಐಎಡಿಡಬ್ಲ್ಯುಎಸ್) ಮೊದಲ ಹಾರಾಟ ಪರೀಕ್ಷೆಗಳನ್ನು ಯಶಸ್ವಿಯಾಗಿ ನಡೆಸಿದೆ.

ರಕ್ಷಣಾ ಸಚಿವ ರಾಜನಾಥ್ ಸಿಂಗ್ ಅವರು ಈ ಹಾರಾಟ ಪರೀಕ್ಷೆಗಳಲ್ಲಿ ರಕ್ಷಣಾ ಸಂಶೋಧನೆ ಮತ್ತು ಅಭಿವೃದ್ಧಿ ಸಂಸ್ಥೆ (ಡಿಆರ್‌ಡಿಒ), ವೇದಿಕೆಯ ಅಭಿವೃದ್ಧಿ ಸಂಸ್ಥೆ ಮತ್ತು ಸಶಸ್ತ್ರ ಪಡೆಗಳನ್ನು ಅಭಿನಂದಿಸಿದರು. ಒಡಿಶಾ ಕರಾವಳಿಯಲ್ಲಿ 1230 ಗಂಟೆಗಳ ಕಾಲ ಸ್ಥಳೀಯ ವಾಯು ರಕ್ಷಣಾ ವ್ಯವಸ್ಥೆಯನ್ನು ಹಾರಾಟ-ಪರೀಕ್ಷೆ ಮಾಡಲಾಯಿತು.

ಆಪರೇಷನ್ ಸಿಂಧೂರ್ ನಂತರ ಮೂರುವರೆ ತಿಂಗಳ ನಂತರ ಹೊಸ ವಾಯು ರಕ್ಷಣಾ ವ್ಯವಸ್ಥೆಯ ಹಾರಾಟ ಪರೀಕ್ಷೆಗಳು ನಡೆದವು. ಐಎಡಿಡಬ್ಲ್ಯುಎಸ್ ಬಹು-ಪದರದ ವಾಯು ರಕ್ಷಣಾ ವ್ಯವಸ್ಥೆಯಾಗಿದ್ದು, ಎಲ್ಲಾ ಸ್ಥಳೀಯ ತ್ವರಿತ ಪ್ರತಿಕ್ರಿಯೆ ಮೇಲ್ಮೈಯಿಂದ ಗಾಳಿಗೆ ಹಾರುವ ಕ್ಷಿಪಣಿಗಳು, ಬಹಳ ಕಡಿಮೆ ವ್ಯಾಪ್ತಿಯ ವಾಯು ರಕ್ಷಣಾ ವ್ಯವಸ್ಥೆ (ವಿಎಸ್‌ಎಚ್‌ಒಆರ್‌ಎಡಿಎಸ್) ಕ್ಷಿಪಣಿಗಳು ಮತ್ತು ಹೆಚ್ಚಿನ



ಶಕ್ತಿಯ ಲೇಸರ್ ಆಧಾರಿತ ನಿರ್ದೇಶನ ಶಕ್ತಿ ಶಸ್ತ್ರಾಸ್ತ್ರಗಳು (ಡಿಇಡಬ್ಲ್ಯು) ವ್ಯವಸ್ಥೆಯನ್ನು ಒಳಗೊಂಡಿದೆ. ಐಎಡಿಡಬ್ಲ್ಯುಎಸ್‌ನ ಯಶಸ್ವಿ ಅಭಿವೃದ್ಧಿಗಾಗಿ ಡಿಆರ್‌ಡಿಒ, ಭಾರತೀಯ ಸಶಸ್ತ್ರ ಪಡೆಗಳು ಮತ್ತು ಉದ್ಯಮವನ್ನು ನಾನು ಅಭಿನಂದಿಸುತ್ತೇನೆ ಎಂದು ಸಿಂಗ್ ಸಾಮಾಜಿಕ ಮಾಧ್ಯಮದಲ್ಲಿ ಹೇಳಿದರು.

ಈ ವಿಶಿಷ್ಟ ಹಾರಾಟ ಪರೀಕ್ಷೆಯು ನಮ್ಮ ದೇಶದ ಬಹು-ಪದರದ ವಾಯು-ರಕ್ಷಣಾ ಸಾಮರ್ಥ್ಯವನ್ನು ಸ್ಥಾಪಿಸಿದೆ ಮತ್ತು ಶತ್ರುಗಳ ವೈಮಾನಿಕ ಬೆದರಿಕೆಗಳ ವಿರುದ್ಧ ಪ್ರಮುಖ ಸೌಲಭ್ಯಗಳಿಗಾಗಿ ಪ್ರದೇಶದ ರಕ್ಷಣೆಯನ್ನು ಬಲಪಡಿಸಲಿದೆ ಎಂದು ಅವರು ಹೇಳಿದರು.

### ಗುಜರಾತ್‌ನ ಕಚ್‌ನ ಗಡಿಯ ಬಳಿ 15 ಪಾಕಿಸ್ತಾನಿ ಮೀನುಗಾರರ ಬಂಧನ

**ಭುಜ್:** ಗುಜರಾತ್‌ನ ಕಚ್ ಜಿಲ್ಲೆಯ ಭಾರತ-ಪಾಕ್ ಗಡಿಯ ಬಳಿ ಗಡಿ ಭದ್ರತಾ ಪಡೆ 15 ಪಾಕಿಸ್ತಾನಿ ಮೀನುಗಾರರನ್ನು ಬಂಧಿಸಿದೆ. ರಾಜ್ಯದ ಕಚ್ ಪ್ರದೇಶದ ಕೋರಿ ಕ್ರೀಕ್‌ನಲ್ಲಿರುವ ಗಡಿ ಔಟ್ ಪೋಸ್ಟ್‌ನ ಸಾಮಾನ್ಯ ಪ್ರದೇಶದಲ್ಲಿ ಪತ್ತೆಯಾದ ಅಪರಿಚಿತ ದೋಣಿಯ ಬಗ್ಗೆ ನಿರ್ದಿಷ್ಟ ಮಾಹಿತಿಯ ಆಧಾರದ ಮೇಲೆ ಬಿಎಸ್‌ಎಫ್ ಶೋಧ ಕಾರ್ಯಾಚರಣೆ ನಡೆಸಿದೆ.

ಪಕ್ಕದ ಬೆಟ್ಟಗಳಲ್ಲಿ ವ್ಯಾಪಕ ಶೋಧ ನಡೆಸಲಾಯಿತು , ಶೋಧದ ಸಮಯದಲ್ಲಿ, 15 ಪಾಕಿಸ್ತಾನಿ ಮೀನುಗಾರರನ್ನು ಬಂಧಿಸಿ, ಎಂಜಿನ್ ಅಳವಡಿಸಿದ ಕಂಟ್ರಿ ಬೋಟ್‌ಅನ್ನುವಶಕ್ಕೆ ಪಡೆಯಲಾಗಿದೆ ಎಂದು ಬಿಎಸ್‌ಎಫ್ ತಿಳಿಸಿದೆ. ಇವರು ಮೀನುಗಾರರಾಗಿದ್ದು, ಪಾಕ್‌ನ ಸಿಂಧಿ ಪ್ರಾಂತ್ಯದ ಸುಜಾವಲ್ ಜಿಲ್ಲೆಯವರು, ಬಿಎಸ್‌ಎಫ್‌ನ 68ನೇ ಬೆಟಾಲಿಯನ್‌ನ ಗಡಿ ಔಟ್‌ಪೋಸ್ಟ್‌ನ ಪ್ರದೇಶದಲ್ಲಿ ಇವರು ಕಂಡುಬಂದಿದ್ದಾರೆ ಎಂದು ಅದು ಹೇಳಿದೆ. ದೋಣಿಯಲ್ಲಿ ಸುಮಾರು 60 ಕೆಜಿ ಮೀನು, ಒಂಬತ್ತು ಮೀನುಗಾರಿಕಾ ಬಲೆಗಳು, ಡೀಸೆಲ್, ಐಸ್, ಆಹಾರ ಪದಾರ್ಥಗಳು ಮತ್ತು ಮರದ ಕೋಲುಗಳು ಇದ್ದವು. ಅವರ ಬಳಿಯಿಂದ ಒಂದು ಮೊಬೈಲ್ ಫೋನ್ ಮತ್ತು ಪಾಕಿಸ್ತಾನಿ ಕರೆನ್ಸಿಯಲ್ಲಿ 200 ರೂ.ಗಳನ್ನು ವಶಪಡಿಸಿಕೊಳ್ಳಲಾಗಿದೆ ಹೆಚ್ಚಿನ ತನಿಖೆ ನಡೆದಿದೆ ಎಂದು ಬಿಎಸ್‌ಎಫ್ ತಿಳಿಸಿದೆ.

### ನಟ ವಿಜಯ್‌ಗೆ ರಾಜಕೀಯ ಸಭ್ಯತೆ ಕೊರತೆ ಇದೆ ; ಸಚಿವ ಪನ್ನೀರ್ ಸೆಲ್ವಂ


**ಕಡಲೂರು:** ತಮಿಳುನಾಡು ಮುಖ್ಯಮಂತ್ರಿ ಸ್ಟಾಲಿನ್ ಅವರನ್ನು ಅಂಕಲ್ ಎಂದು ಕರೆದಿದ್ದ ನಟ ಕಮ್ ರಾಜಕಾರಣಿ ಟಿವಿಕೆ ಪಕ್ಷದ ಸಂಸ್ಥಾಪಕ ವಿಜಯ್ ಅವರನ್ನು ತಮಿಳುನಾಡು ಕೃಷಿ ಸಚಿವ ಎಂ ಆರ್ ಕೆ ಪನ್ನೀರ್‌ಸೆಲ್ವಂ ತರಾಟೆಗೆ ತೆಗೆದುಕೊಂಡಿದ್ದಾರೆ. ವಿಜಯ್‌ಗೆ ರಾಜಕೀಯ ಸಭ್ಯತೆಯ ಕೊರತೆಯಿದೆ ಎಂದು ಆರೋಪಿಸಿರುವ ಅವರು, ಸಿನಿಮಾ ಮತ್ತು ರಾಜಕೀಯ ಒಂದೇ ಅಲ್ಲ ಮತ್ತು ಅವರ ಅಭಿಮಾನಿಗಳ ಸಭೆಯಿಂದ ಪ್ರಭಾವಿತರಾದ ನಟ, ಬಹುಶಃ ಚಲನಚಿತ್ರ ಸಂಭಾಷಣೆ ನೀಡುತ್ತಿರುವಂತೆ ಮಾತನಾಡಿದರು ಎಂದು ಸಚಿವರು ಹೇಳಿದ್ದಾರೆ. ಇದು ಅವರ ಪ್ರಬುದ್ಧತೆಯ ಕೊರತೆಯನ್ನು ತೋರಿಸುತ್ತದೆ. ಇದು ಅವರ ರಾಜಕೀಯ ಉದ್ದೇಶಕ್ಕೆ ಸಹಾಯ ಮಾಡುತ್ತದೆ ಎಂದು ಭಾವಿಸಿ ಅವರು ಡಿಎಂಕೆ ನಾಯಕತ್ವವನ್ನು ಗುರಿಯಾಗಿಸಿಕೊಂಡಿದ್ದಾರೆ. ಸಿನಿಮಾ ಮತ್ತು ರಾಜಕೀಯ ಒಂದೇ ಅಲ್ಲ ಎನ್ನುವುದನ್ನು ವಿಜಯ್ ಮರೆಯಬಾರದು ಎಂದು ಹೇಳಿದರು. ಡಿಎಂಕೆ ಮಹಿಳೆಯರಿಗೆ ಮಾಸಿಕ 1,000 ರೂ. ಅನುದಾನ ಸೇರಿದಂತೆ ಹಲವಾರು ಕಲ್ಯಾಣ ಉಪಕ್ರಮಗಳನ್ನು ಜಾರಿಗೆ ತರುತ್ತಿದೆ ಎಂದು ಹೇಳಿದರು.ನಾವು ಹಿಂದೆ ಹಲವಾರು ಪ್ರತಿಭಟನೆಗಳಲ್ಲಿ ಭಾಗವಹಿಸಿದ್ದೇವೆ, ಕಠಿಣ ಸಮಯಗಳನ್ನು ಕಂಡಿದ್ದೇವೆ. ನಮ್ಮ ನಾಯಕ (ಸ್ಟಾಲಿನ್) ಜನಪರ ಕಾರ್ಯಕ್ರಮಗಳನ್ನು ಜಾರಿಗೆ ತರುವ ಮೂಲಕ ಜನರ ಸ್ಥಿತಿಯನ್ನು ಸುಧಾರಿಸಲು ಶ್ರಮಿಸುತ್ತಿದ್ದಾರೆ ಎಂದು ಅವರು ಹೇಳಿದರು.

## ವೇಳೆ ಜಲಪಾತದಲ್ಲಿ ಕೊಚ್ಚಿ ಹೋದ ಯೂಟ್ಯೂಬರ್

**ಭುವನೇಶ್ವರ:** ರೀಲ್ಸ್ ಹುಚ್ಚಾಟಕ್ಕೆ ಮತ್ತೊಂದು ಬಲಿಯಾಗಿದ್ದು, ಉಕ್ಕಿ ಹರಿಯುತ್ತಿದ್ದ ಜಲಪಾತದಲ್ಲಿ ವಿಡಿಯೋ ಚಿತ್ರೀಕರಿಸುತ್ತಿದ್ದಾಗ ಯೂಟ್ಯೂಬರ್ ಕೊಚ್ಚಿ ಹೋದ ಘಟನೆ ವರದಿಯಾಗಿದೆ. ಒಡಿಶಾದ ಕೊರಾಪುಟ್ ಜಿಲ್ಲೆಯ ದುಡುಮಾ ಜಲಪಾತದಲ್ಲಿ ರೀಲ್ಸ್ ಚಿತ್ರೀಕರಿಸುವಾಗ ಯೂಟ್ಯೂಬರ್ ಒಬ್ಬರು ನೀರಿನಲ್ಲಿ ಕೊಚ್ಚಿ ಹೋಗಿ ನಾಪತ್ತೆಯಾಗಿದ್ದಾರೆ ಎಂದು ವರದಿಯಾಗಿದೆ. ಕೊಚ್ಚಿ ಹೋದ ಯೂಟ್ಯೂಬರ್ ನನ್ನು ಗಂಜಾಂ ಜಿಲ್ಲೆಯ ಬೆರ್ಹಾಂಪುರ್‌ನ 22 ವರ್ಷದ ಸಾಗರ್ ತುಡು ಎಂದು ಗುರುತಿಸಲಾಗಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಪೊಲೀಸ್ ಮೂಲಗಳ ಪ್ರಕಾರ ಸಾಗರ್ ಮಧ್ಯಾಹ್ನ ಡ್ರೋನ್ ಕ್ಯಾಮೆರಾ ಬಳಸಿ ಜಲಪಾತದಲ್ಲಿ ರೀಲ್‌ಗಳನ್ನು ರೆಕಾರ್ಡ್ ಮಾಡುತ್ತಿದ್ದಾಗ ಈ ದುರ್ಘಟನೆ ನಡೆದಿದೆ. ಸಾಗರ್ ತಮ್ಮ ಯೂಟ್ಯೂಬ್ ಚಾನೆಲ್‌ಗಾಗಿ ವಿವಿಧ ಪ್ರವಾಸಿ ಸ್ಥಳಗಳ ವಿಡಿಯೋಗಳನ್ನು ರೆಕಾರ್ಡ್ ಮಾಡಲು ತಮ್ಮ ಸ್ನೇಹಿತ ಅಭಿಜಿತ್ ಬೆಹೆರಾ ಜೊತೆಗೆ ಕೊರಾಪುಟ್‌ಗೆ ಭೇಟಿ ನೀಡಿದ್ದರು.

ಈ ವೇಳೆ ಸಾಗರ್ ಬಂಡೆಯ ಮೇಲೆ ನಿಂತಿದ್ದರು.



ಈ ವೇಳೆ ಮಚಕುಂಡಾ ಅಣೆಕಟ್ಟಿನಿಂದ ನೀರು ಹೊರಕ್ಕೆ ಬಿಡಲಾಗಿದ್ದು, ಏಕಾಏಕಿ ನೀರಿನ ರಭಸ ಏರಿದ್ದರಿಂದ ಯೂಟ್ಯೂಬರ್ ಸಾಗರ್ ನೀರಿನಲ್ಲಿ ಕೊಚ್ಚಿಕೊಂಡು ಹೋಗಿದ್ದಾರೆ.

ಈ ಕುರಿತು ಮಾತನಾಡಿರುವ ಸ್ಥಳೀಯ ಅಧಿಕಾರಿಗಳು ಕೊರಾಪುಟ್‌ನ ಲ್ಯಾಮ್ಟಾಪುಟ್ ಪ್ರದೇಶದಲ್ಲಿ ಮಳೆಯಾದ ನಂತರ ಮಚಕುಂಡಾ ಅಣೆಕಟ್ಟಿನ ಅಧಿಕಾರಿಗಳು ಅಣೆಕಟ್ಟಿನ ಕೆಳಭಾಗದಲ್ಲಿ ವಾಸಿಸುವ ಜನರನ್ನು ನೀರು ಬಿಡುವ ಕುರಿತು ಎಚ್ಚರಿಸಿದ್ದರು. ಆ ಬಳಿಕವಷ್ಟೇ ಅಣೆಕಟ್ಟಿನಿಂದ ನೀರು ಬಿಡಲಾಗಿದೆ. ಇದರ ಅರಿವಿಲ್ಲದೇ ಸಾಗರ್ ಜಲಪಾತದ ಮಧ್ಯಕ್ಕೆ ಹೋಗಿದ್ದಾರೆ ಎಂದು ಹೇಳಿದ್ದಾರೆ.

## ಬೈಕ್ ಓಡಿಸಿದ ಸ್ಪೈಡರ್ ಮ್ಯಾನ್‌ಗೆ ಪೊಲೀಸರಿಂದ ಸಿಕ್ತು ಫೈನ್ ಪ್ರಶಸ್ತಿ

**ಭುವನೇಶ್ವರ:** ಪ್ರತಿ ರಾಜ್ಯದಲ್ಲೂ ಅವರದ್ದೇ ಆದ ಕೆಲವೊಂದು ರಸ್ತೆ ಸಂಚಾರ ನಿಯಮಗಳಿರುತ್ತದೆ. ಬೈಕ್ ಸ್ಟಂಟ್, ವ್ಹೀಲಿಂಗ್ ಮಾಡುವುದು ಒನ್ ವೇನಲ್ಲಿ ಸಂಚಾರ ಮಾಡುವುದು ಎಲ್ಲವೂ ಅಪರಾಧ.

ಒಡಿಶಾದಲ್ಲೊಬ್ಬ ವ್ಯಕ್ತಿ ಸ್ಪೈಡರ್‌ಮ್ಯಾನ್ ನಂತೆ ಬಟ್ಟೆ ಧರಿಸಿ ಅಪಾಯಕಾರಿಯಾಗಿ ಸ್ಟಂಟ್ ಮಾಡುತ್ತಿದ್ದಾತನಿಗೆ ಸಂಕಷ್ಟ ಎದುರಾಗಿದೆ. ಟ್ರಾಫಿಕ್ ನಿಯಮ ಉಲ್ಲಂಘಿಸಿದ್ದಕ್ಕಾಗಿ ಆತನಿಗೆ ರೂ 15,000 ದಂಡ ವಿಧಿಸಲಾಗಿದೆ. ಇದು ದೇಶದ ಎಲ್ಲ ಬೈಕಸ್‌ರ್‌ಗೂ ಟ್ರಾಫಿಕ್ ಪೊಲೀಸರು ಕೊಟ್ಟಿರುವ ಒಂದು ಎಚ್ಚರಿಕೆಯಾಗಿದೆ.

ದೇಶದಲ್ಲಿ ರಸ್ತೆ ಅಪಘಾತ ಹಾಗೂ ಅದರಿಂದ ಮೃತಪಡುವವರ ಸಂಖ್ಯೆ ಪ್ರತಿ ವರ್ಷ ಏರಿಕೆಯಾಗುತ್ತಲೇ ಇದೆ. ವಿಶ್ವದ ಬೇರೆಲ್ಲಾ ದೇಶಗಳಲ್ಲಿ ರಸ್ತೆ ಅಪಘಾತಗಳ ಸಂಖ್ಯೆ ಹೆಚ್ಚಿದೆ. ಆದರೆ ಅದರಿಂದ ಮೃತಪಡುವವರ ಸಂಖ್ಯೆ ಕಡಿಮೆ ಇದೆ. ರಸ್ತೆ ಅಪಘಾತಗಳಲ್ಲಿ ಹೆಚ್ಚು ಜನರು ಮೃತಪಡುವ ದೇಶಗಳ ಪಟ್ಟಿಯಲ್ಲಿ ಭಾರತ ಮೊದಲ ಸಾಲಿನಲ್ಲಿದೆ. ಇದು 2023ರ ವರದಿಯ ಪ್ರಕಾರವಾಗಿದೆ. ವ್ಹೀಲಿಂಗ್, ಸ್ಟಂಟ್ ಮಾಡುತ್ತಾ



ಭಯಾನಕವಾಗಿ ಗಾಡಿ ಓಡಿಸುವುದರಿಂದ ಕೆಲವೊಮ್ಮೆ ಕೈ ಮೀರಿ ಅಪಘಾತ ನಡೆದೇ ಹೋಗುತ್ತದೆ. ಬೈಕ್ ಸ್ಕಿಡ್ ಆಗಿ ಹಲವಾರು ಜನರು ಮೃತಪಟ್ಟಿರುವ ಉದಾಹರಣೆಗಳಿವೆ. ದೇಶದಲ್ಲಿ ಪ್ರತಿದಿನ ಕನಿಷ್ಠ 1,264 ರಸ್ತೆ ಅಪಘಾತಗಳಾಗುತ್ತಿದೆ ಎಂದು ರಸ್ತೆ ಸಾರಿಗೆ ಮತ್ತು ಹೆದ್ದಾರಿ ಸಚಿವಾಲಯದ ವರದಿ ಬಹಿರಂಗಪಡಿಸಿದೆ. ಎಲ್ಲಾ ಬೈಕ್ ಸವಾರರಿಗೂ

- **ಒಡಿಶಾದ ರೂರ್ಕೆಲಾದಲ್ಲಿ ಸಸ್ಪೈಡರ್ ಮ್ಯಾನ್ ವೇಷ ಧರಿಸಿ ಸ್ಟಂಟ್ ಮಾಡಿದ ವ್ಯಕ್ತಿ**
- **ಸಂಚಾರ ನಿಯಮ ಉಲ್ಲಂಘಿಸಿದ್ದಕ್ಕಾಗಿ ಬಿತ್ತು ಹದಿನೈದು ಸಾವಿರ ದಂಡ**
- **ರಸ್ತೆ ಅಪಘಾತಗಳಲ್ಲಿ ಮೃತಪಡುವ ದೇಶಗಳ ಪಟ್ಟಿಯಲ್ಲಿ ಭಾರತ ಮೊದಲ ಸ್ಥಾನ**


ಇದೊಂದು ಎಚ್ಚರಿಕೆ ಹೀಗಾಗಿ ಕೇಂದ್ರ ಮತ್ತು ಆಯಾ ರಾಜ್ಯ ಸರ್ಕಾರಗಳು ನಾನಾ ರೀತಿಯಲ್ಲಿ ಅಪಘಾತ ತಪ್ಪಿಸುವ ಯೋಜನೆಗಳನ್ನು ರೂಪಿಸುತ್ತಿದೆ. ಕರ್ನಾಟಕದಲ್ಲಿ ಯಮ ಮತ್ತು ಕಿಂಕರನ ವೇಷ ಧರಿಸಿದ ಕಲಾವಿದರನ್ನು ರಸ್ತೆಗೆ ಬಿಟ್ಟು ಜಾಗೃತಿ ಮೂಡಿಸವ ಕೆಲಸ ಮಾಡುತ್ತಿದ್ದರೂ ಎಚ್ಚೆತ್ತು ಕೊಳ್ಳದ ಸವಾರರು. ನಿಯಮ ಮರೆತು, ಹೆಲ್ಮೆಟ್ ಧರಿಸದೆ, ಒಂದೇ ಗಾಡಿಯಲ್ಲಿ ಮೂರ್ನಾಲ್ಕು ಜನ ಕೂತು ಓಡಿಸುವುದು ಹೀಗೆ ನಾನಾ ತಪ್ಪುಗಳನ್ನು ಮಾಡುತ್ತಿರುತ್ತಾರೆ. ಅಂತವರಿಗೆ ಒಡಿಶಾ ಪೊಲೀಸರು ಮಾಡಿರುವ ಕೆಲಸ ನಿರ್ದರ್ಶನವಾಗಿದೆ.

## ಹಿಂದೂಗಳ ಕ್ಷಮೆ ಕೇಳಿ ಇಲ್ಲವೇ, ಅಯ್ಯಪ್ಪ ಸಂಗಮದಿಂದ ದೂರ ಇರಿ ಕೇರಳ, ತಮಿಳುನಾಡು ಸಿಎಂಗಳಿಗೆ ಚಂದ್ರಶೇಖರ್ ಖಡಕ್ ವಾರ್ನಿಂಗ್

**ಕೊಚ್ಚಿ:** ಕೇರಳ ಮುಖ್ಯಮಂತ್ರಿ ಪಿಣರಾಯಿ ವಿಜಯನ್ ಮತ್ತು ತಮಿಳುನಾಡು ಮುಖ್ಯಮಂತ್ರಿ ಎಂಕೆ ಸ್ಟಾಲಿನ್ ಅವರು ಹಿಂದೂ ನಂಬಿಕೆ ಮತ್ತು ಶಬರಿಮಲೆಯ ಧಾರ್ಮಿಕ ನಂಬಿಕೆ, ಸಂಪ್ರದಾಯಗಳನ್ನು ಅಗೌರವಿಸಿದ್ದಾರೆ ಎಂದು ಬಿಜೆಪಿ ನಾಯಕ ಹಾಗೂ ಮಾಜಿ ಕೇಂದ್ರ ಸಚಿವ ರಾಜೀವ್ ಚಂದ್ರಶೇಖರ್ ಆರೋಪಿಸಿದ್ದಾರೆ.

ಕೇರಳದ ಮಾರ್ಕ್ಸ್‌ವಾದಿ ಸರ್ಕಾರವು ಅಯ್ಯಪ್ಪ ಸಂಗಮಂ ಎಂಬ ಧಾರ್ಮಿಕ ಕಾರ್ಯಕ್ರಮವನ್ನು ಆಯೋಜಿಸುತ್ತಿದ್ದು, ಇದಕ್ಕೆ ತಮಿಳುನಾಡು ಮುಖ್ಯಮಂತ್ರಿ ಎಂಕೆ ಸ್ಟಾಲಿನ್ ಅವರನ್ನು ಆಹ್ವಾನಿಸುತ್ತಿದೆ ಎಂಬ ವರದಿಗಳ ಹಿನ್ನೆಲೆಯಲ್ಲಿ ಅವರು ಈ ರೀತಿಯ ಹೇಳಿಕೆ ನೀಡಿದ್ದಾರೆ. ಈ ಕುರಿತು ಸಾಮಾಜಿಕ ಜಾಲತಾಣ ಎಕ್ಸ್ ನಲ್ಲಿ ಪೋಸ್ಟ್ ಮಾಡಿರುವ ಚಂದ್ರಶೇಖರ್ ಇದು ಜನರನ್ನು ಮೂರ್ಖರನ್ನಾಗಿಸುವ ನಾಟಕ ಎಂದು ಬಣ್ಣಿಸಿದ್ದು, ಹಿಂದೂಗಳು ಮತ್ತು ಅಯ್ಯಪ್ಪ ಭಕ್ತರಿಗೆ ಅವಮಾನ ಮಾಡಿದ್ದಕ್ಕಾಗಿ ಇಬ್ಬರೂ ನಾಯಕರು ಸಾರ್ವಜನಿಕವಾಗಿ ಕ್ಷಮೆಯಾಚಿಸಬೇಕು ಎಂದು ಒತ್ತಾಯಿಸಿದ್ದಾರೆ. ಇದು ಬಿಜೆಪಿ ಎಲ್ಲಾ ಕಾರ್ಯಕರ್ತರು ಮತ್ತು ಕೇರಳ-ತಮಿಳುನಾಡಿನ ಹಿಂದೂಗಳಿಂದ ಪಿಣರಾಯಿ ವಿಜಯನ್ ಹಾಗೂ ಎಂಕೆ ಸ್ಟಾಲಿನ್ ಅವರಿಗೆ ಸ್ಪಷ್ಟ ಸಂದೇಶವಾಗಿದೆ.

ನೀವಿಬ್ಬರೂ ಹಲವು ವರ್ಷಗಳಿಂದ ಶಬರಿಮಲೆ, ಅಯಪ್ಪ ಭಕ್ತರು ಮತ್ತು ಹಿಂದೂ ನಂಬಿಕೆಗೆ ಹಾನಿ ಮತ್ತು ಅವಮಾನ ಮಾಡಿದ್ದೀರಿ ಎಂದು ಆರೋಪಿಸಿದ್ದಾರೆ. ಪಿಣರಾಯಿ ವಿಜಯನ್ ಅವರು ಅನೇಕ ಅಯ್ಯಪ್ಪ ಭಕ್ತರನ್ನು ಜೈಲಿಗೆ ಹಾಕಿದ್ದಾರೆ, ಇನ್ನೂ ಹಲವರ ವಿರುದ್ಧ ಕೇಸುಗಳನ್ನು ಹಾಕಿದ್ದಾರೆ, ಅಯ್ಯಪ್ಪ ಭಕ್ತರ ಮೇಲೆ ಪೊಲೀಸ್ ದೌರ್ಜನ್ಯವನ್ನು ಮಾಡಿದ್ದಾರೆ ಮತ್ತು ಶಬರಿಮಲೆಯ ಪವಿತ್ರ ಸಂಪ್ರದಾಯಗಳ ಉಲ್ಲಂಘನೆ, ಅವಮಾನಿಸಲು ಎಲ್ಲವನ್ನೂ ಮಾಡಿದ್ದಾರೆ. ಸ್ಟಾಲಿನ್ ಮತ್ತು ಅವರ ಮಗ ಪದೇ ಪದೇ ಹಿಂದೂಗಳನ್ನು ಅವಮಾನಿಸಿದ್ದಾರೆ ಮತ್ತು ಇತರ ವಿಷಯಗಳ ಜೊತೆಗೆ ಹಿಂದೂ ನಂಬಿಕೆಯನ್ನು ವೈರಸ್ ಎಂದು ಉಲ್ಲೇಖಿಸಿದ್ದಾರೆ. ಇವುಗಳು ಪ್ರತಿಯೊಬ್ಬ ಹಿಂದೂಗಳ ಸ್ಮರಣೆಯಲ್ಲಿ ಉಳಿದಿದ್ದು, ಎಂದಿಗೂ ಮರೆಯಲಾಗುವುದಿಲ್ಲ ಅಥವಾ ಕ್ಷಮಿಸುವುದಿಲ್ಲ.



**ಹಿಂದೂಗಳು, ಅಯ್ಯಪ್ಪ ಭಕ್ತರಿಗೆ ಅವಮಾನ**

ಆದ್ದರಿಂದ, ಸಿಪಿಎಂ ಸರ್ಕಾರವು ಚುನಾವಣೆಗೆ ಕೆಲವು ತಿಂಗಳುಗಳ ಮೊದಲು ಆಯಪ್ಪ ಸಂಗಮ ನಡೆಸುವುದು ನಾಟಕ ಮತ್ತು ಜನರನ್ನು ಮರಳು ಮಾಡುವ ತಂತ್ರವಾಗಿದೆ ಎಂದು ಅವರು ಕಿಡಿಕಾರಿದ್ದಾರೆ. ಪಿಣರಾಯಿ ವಿಜಯನ್ ಅವರು ಅಯ್ಯಪ್ಪ ಭಕ್ತರ ಮೇಲಿನ ಎಲ್ಲಾ ಪ್ರಕರಣಗಳನ್ನು ಹಿಂಪಡೆಯಬೇಕು, ಜೈಲಿನಲ್ಲಿರುವವರ ಕ್ಷಮೆಯಾಚಿಸಬೇಕು ಮತ್ತು ಶಬರಿಮಲೆ ಸಂಪ್ರದಾಯಗಳನ್ನು ಉಲ್ಲಂಘಿಸಿದ್ದಕ್ಕಾಗಿ ಅಯ್ಯಪ್ಪ ದೇವರಲ್ಲಿ ಕ್ಷಮೆ ಕೇಳಬೇಕು ಎಂದು ಚಂದ್ರಶೇಖರ್ ಒತ್ತಾಯಿಸಿದರು.

### ಮಕ್ಕಳಾಗುವಂತೆ ಆಶೀರ್ವದಿಸುವ ಭರವಸೆ ನೀಡಿ ಅತ್ಯಾಚಾರವೆಸಗಿದ ತಾಂತ್ರಿಕ

**ಮಥುರಾ:** ಮಕ್ಕಳಾಗುವಂತೆ ಆಶೀರ್ವದಿಸುವ ಭರವಸೆ ನೀಡಿದ ತಾಂತ್ರಿಕನೊಬ್ಬ ಅಮಾಯಕ ಮಹಿಳೆ ಮೇಲೆ ಅತ್ಯಾಚಾರ ನಡೆಸಿರುವ ಘಟನೆ ಕೃಷ್ಣ ನಗರಿ ಮಥುರಾದಲ್ಲಿ ನಡೆದಿದೆ. ಇಲ್ಲಿನ ನೌಝೀಲ್ ಪ್ರದೇಶದಲ್ಲಿ 35 ವರ್ಷದ ಮಹಿಳೆಯ ಮೇಲೆ ಮಗುವನ್ನು ಗರ್ಭಧರಿಸಲು ತಾಂತ್ರಿಕನೊಬ್ಬ ಅತ್ಯಾಚಾರ ಎಸಗಿದ್ದಾನೆ ಎಂದು ಪೊಲೀಸರು ತಿಳಿಸಿದ್ದಾರೆ. ಸಂತ್ರಸ್ಥೆಗೆ ಮದುವೆಯಾಗಿ ಎಂಟು ವರ್ಷಗಳಾಗಿವೆ ಮತ್ತು ಮಗುವಾಗಿರಲಿಲ್ಲ ಎಂದು ಪೊಲೀಸ್ ವರಿಷ್ಠಾಧಿಕಾರಿ (ಗ್ರಾಮೀಣ) ಸುರೇಶ್ ಚಂದ್ರ ರಾವತ್ ವರದಿಗಾರರಿಗೆ ತಿಳಿಸಿದರು. ಅವರು 45 ವರ್ಷದ ತಂತ್ರಿ ಮುಷ್ತಾಕ್ ಅಲಿ ಅವರನ್ನು ಸಂಪರ್ಕಿಸಿದರು, ಅವರು ಕೆಲವು ಆಚರಣೆಗಳ ಮೂಲಕ ತಾನು ಗರ್ಭಧರಿಸಲು ಸಹಾಯ ಮಾಡಬಹುದೆಂದು ಹೇಳಿಕೊಂಡರು, ಆದರೆ ಅವರು ಆಕೆಯ ಮೇಲೆ ಅತ್ಯಾಚಾರ ಎಸಗಿದರು ಎಂದು ರಾವತ್ ಹೇಳಿದರು. ತಲೆಮರೆಸಿಕೊಂಡಿರುವ ಅಲಿ ವಿರುದ್ಧ ಬಿಎನ್‌ಎಸ್ ಸೆಕ್ಷನ್ 63 ರ ಅಡಿಯಲ್ಲಿ ಅತ್ಯಾಚಾರ ಪ್ರಕರಣ ದಾಖಲಿಸಲಾಗಿದೆ ಎಂದು ಅವರು ಹೇಳಿದರು.

### ಪಾಕ್ ಜೊತೆ ದ್ವಿಪಕ್ಷೀಯ ಸರಣಿ ಆಡಲ್ಲ

**ಮುಂಬೈ:** ಭಾರತ ಯಾವುದೇ ಕಾರಣಕ್ಕೂ ಪಾಕಿಸ್ತಾನದ ಜೊತೆಗೆ ದ್ವಿಪಕ್ಷೀಯ ಸರಣಿ ಆಡುವುದಿಲ್ಲ ಎಂದು ಕ್ರೀಡಾ ಸಚಿವ ಮನ್ಸುಖ್ ಮಾಂಡವಿಯಾ ಹೇಳಿದ್ದಾರೆ. ಸಂದರ್ಶನವೊಂದರಲ್ಲಿ ಮಾತನಾಡಿರು ಅವರು, ನಾವು ಪಾಕಿಸ್ತಾನದೊಂದಿಗೆ ದ್ವಿಪಕ್ಷೀಯ ಸರಣಿ ಆಡುತ್ತಿಲ್ಲ. ಅಂತಾರಾಷ್ಟ್ರೀಯ ಸರಣಿಗಳಲ್ಲಿ ಮಾತ್ರವೇ ಆಡಲಾಗುತ್ತಿದೆ. ಏಕೆಂದರಡ ಐಸಿಸಿ ನಿಯಮವನ್ನು ಗೌರವಿಸಬೇಕು ಎಂದು ತಿಳಿಸಿದರು.

ಕ್ರೀಡಾ ಮಸೂದೆ ಅಡಿಯಲ್ಲಿ ವೀಸಾಗಳನ್ನು ಸಕಾಲಿಕವಾಗಿ ನೀಡುವುದು ಮೂಲ ನಿಯಮವಾಗಿದೆ. ಹಾಗಾಗಿ ಯಾವುದೇ ದೇಶವು ಮತ್ತೊಂದು ರಾಷ್ಟ್ರದ ಕ್ರೀಡಾಪಟುಗಳಿಗೆ ವೀಸಾ ನಿರಾಕರಿಸಲು ಸಾಧ್ಯವಿಲ್ಲ. ಅಲ್ಲದೇ ವಿಶ್ವ ದರ್ಜೆಯ, ಎಲ್ಲಾ ಸೌಲಭ್ಯಗಳೊಂದಿಗೆ ಭಾರತವನ್ನ ಜಾಗತಿಕ ಕ್ರೀಡಾ ಕೇಂದ್ರವಾಗಿ ಸ್ಥಾಪಿಸುವುದು, ಇತರ ರಾಷ್ಟ್ರಗಳು ದೇಶದಲ್ಲಿ ಟೂರ್ನಿ ಆಯೋಜಿಸಲು ಪ್ರೋತ್ಸಾಹಿಸುವುದು ಸರ್ಕಾರ ಗುರಿಯಾಗಿದೆ ಎಂದು ಸ್ಪಷ್ಟಪಡಿಸಿದರು. ಪ್ರಧಾನಿ ಮೋದಿ ಅವರ ದೂರದೃಷ್ಟಿಯಿಂದ ಹೊಸದಾಗಿ ಪರಿಚಯಿಸಲಾದ ಕ್ರೀಡಾ ಮಸೂದೆಯು ಐತಿಹಾಸಿಕ ಮತ್ತು ಪರಿವರ್ತನಾತ್ಮಕ ಶಾಸನವಾಗಿದೆ. 1985ರಿಂದ ಇಂತಹ ಮಸೂದೆಗೆ ಕರಡು ಅಸ್ತಿತ್ವದಲ್ಲಿದ್ದರೂ, ಇದು ಶಾಸನ ಆಗಿರಲಿಲ್ಲ. ಭಾರತವು ಮುಂದೆ ಒಲಿಂಪಿಕ್ಸ್‌ಗೆ ಬಿಡ್ ಮಾಡುವ ಹಿನ್ನೆಲೆಯಲ್ಲಿ ಈ ಮಸೂದೆ ಐತಿಹಾಸಿಕ ಕೂಡ ಎಂದು ಅವರು ಬಣ್ಣಿಸಿದರು.

ರಷ್ಯಾದೊಂದಿಗಿನ ತೈಲ ಸಂಬಂಧದ ಬಗ್ಗೆ ಡೊನಾಲ್ಡ್ ಟ್ರಂಪ್ ಆಕ್ಷೇಪಣೆ ಪರಿಗಣಿಸುವಂತೆ ಭಾರತಕ್ಕೆ ಸಲಹೆ

# ಸಂಬಂಧ ಮುರಿಯುವ ಹಂತ ತಲುಪಿದೆ, ಪ್ಲೀಸ್ ಮಾತಾಡಿ

**ವಾಷಿಂಗ್ಟನ್ ಡಿಸಿ:** ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಅವರ ಭಾರತೀಯ-ಅಮೆರಿಕನ್ ರಿಪಬ್ಲಿಕನ್ ಸಹೋದ್ಯೋಗಿ ನಿಕ್ಕಿ ಹ್ಯಾಲಿ,ಭಾರತಕ್ಕೆ ರಷ್ಯಾದ ತೈಲ ಆಮದುಗಳ ಬಗ್ಗೆ ಎಚ್ಚರಿಕೆ ನೀಡಿದ್ದಾರೆ. ಅಲ್ಲದೇ ಉತ್ತಮ ಪರಿಹಾರಕ್ಕಾಗಿ ಆದಷ್ಟು ಬೇಗ ಉತ್ತಮ ಪರಿಹಾರಕ್ಕಾಗಿ ಮಾತುಕತೆ ಆರಂಭಿಸುವಂತೆ ಸಲಹೆ ನೀಡಿದ್ದಾರೆ.

ಈ ಕುರಿತು ತಮ್ಮ ಅಧಿಕೃತ ಎಕ್ಸ್ ಅಕೌಂಟ್‌ನಲ್ಲಿ ಪೋಸ್ಟ್ ಮಾಡಿರುವ ನಿಕ್ಕಿ ಹ್ಯಾಲಿ, ದಶಕಗಳ ಸ್ನೇಹ ಕೇವಲ ಒಂದು ಸಮಸ್ಯೆಯಿಂದಾಗಿ ದ್ವೇಷವಾಗಿ ಬದಲಾಗದಂತೆ ನೋಡಿಕೊಳ್ಳಬೇಕಿದೆ. ಈ ಪ್ರಕ್ಷುಬ್ಧತೆಯನ್ನು ಮೀರಿ ನಮ್ಮ ಸ್ನೇಹ ಸಂಬಂಧವನ್ನು ಗಟ್ಟಿಗೊಳಿಸಲು ಮಾತುಕತೆಗಳು ಅತ್ಯಂತ ಅಗತ್ಯ ಎಂದು ಅಭಿಪ್ರಾಯಪಟ್ಟಿದ್ದಾರೆ. ಭಾರತ-ರಷ್ಯಾ ತೈಲ ಸಂಬಂಧ ಅಮೆರಿಕದ ನಿದ್ದೆಗೆಡೆಸಿದೆ.

ರಷ್ಯಾದೊಂದಿಗಿನ ಭಾರತದ ತೈಲ ಸಂಬಂಧದ ಬಗ್ಗೆ ಡೊನಾಲ್ಡ್ ಟ್ರಂಪ್ ಅವರ ಆಕ್ಷೇಪಣೆಗಳ ಬಗ್ಗೆ ಭಾರತ ಗಂಭೀರವಾಗಿ ಯೋಚಿಸಬೇಕು. ಈ ಕುರಿತು ಪರಿಹಾರಗಳನ್ನು ಕಂಡುಕೊಳ್ಳಲು ಶೀಘ್ರವೇ ವಾಷಿಂಗ್ಟನ್‌ನೊಂದಿಗೆ ಮಾತುಕತೆ ಆರಂಭಿಸಬೇಕು. ವಿಶ್ವದ ಎರಡು ದೊಡ್ಡ ಪ್ರಜಾಪ್ರಭುತ್ವ ರಾಷ್ಟ್ರಗಳ ನಡುವಿನ ದಶಕಗಳ ಸ್ನೇಹ ಮತ್ತು ಉತ್ತಮ ಇಚ್ಛೆಯು ಪ್ರಸ್ತುತ ಪ್ರಕ್ಷುಬ್ಧತೆಯನ್ನು ಮೀರಲು ಘನವಾದ ಆಧಾರವನ್ನು ಒದಗಿಸುತ್ತದೆ. ವ್ಯಾಪಾರ ಭಿನ್ನಾಭಿಪ್ರಾಯಗಳು ಮತ್ತು ರಷ್ಯಾದ ತೈಲ ಆಮದುಗಳಂತಹ ಸಮಸ್ಯೆಗಳನ್ನು ನ್ಯಾವಿಗೇಟ್ ಮಾಡುವುದು ಕಠಿಣ ಸಂಭಾಷಣೆಯನ್ನು ಬಯಸುತ್ತದೆ ಎಂದು ನಿಕ್ಕಿ ಹ್ಯಾಲಿ ತಮ್ಮ ಪೋಸ್ಟ್‌ನಲ್ಲಿ ಹೇಳಿದ್ದಾರೆ.

ಚೀನಾವನ್ನು ಎದುರಿಸುವ ಹಂಚಿಕೆಯ ಗುರಿಗಳನ್ನು ಎರಡೂ ದೇಶಗಳು ಕಳೆದುಕೊಳ್ಳಬಾರದು ಎಂದು ಪ್ರತಿಪಾದಿಸಿರುವ ನಿಕ್ಕಿ ಹ್ಯಾಲಿ, ಉಭಯ ದೇಶಗಳು ಪರಸ್ಪರರಿಗೆ ಅತ್ಯಂತ ಅವಶ್ಯ ಎಂಬುದನ್ನು ನಾವು ಮರೆಯಬಾರದು ಎಂದು ಸಲಹೆ ನೀಡಿದ್ದಾರೆ. ನಿಕ್ಕಿ ಹ್ಯಾಲಿ ಇತ್ತೀಚಿಗೆ, ಭಾರತದೊಂದಿಗೆ ಸಂಬಂಧ ಹಾಳು ಮಾಡಿಕೊಂಡರೆ ಅಮೆರಿಕಕ್ಕೆ ನಷ್ಟ ಎಂದು ಹೇಳಿದ್ದರು.

ಇದಕ್ಕೂ ಮುನ್ನ ವಿಶ್ವಸಂಸ್ಥೆಗೆ ಅಮೆರಿಕದ ಮಾಜಿ ರಾಯಭಾರಿ, ವಾಷಿಂಗ್ಟನ್ ಮತ್ತು ನವದೆಹಲಿ ನಡುವಿನ ಸಂಬಂಧಗಳು ಮುರಿಯುವ ಹಂತಕ್ಕೆ ಸಮೀಪಿಸಿವೆ ಎಂದು ಎಚ್ಚರಿಸಿದ್ದರು. ಚೀನಾದ ಬೆಳೆಯುತ್ತಿರುವ ಜಾಗತಿಕ ಮಹತ್ವಾಕಾಂಕ್ಷೆಗಳನ್ನು ಅಮೆರಿಕ ನಿಯಂತ್ರಿಸಲು ಬಯಸಿದರೆ, ಭಾರತದೊಂದಿಗಿನ ಸಂಬಂಧಗಳನ್ನು ಮತ್ತೆ ಹಳಿಗೆ ತರುವುದು ನಿರ್ಣಾಯಕ ಎಂದು ನಿಕ್ಕಿ ಹ್ಯಾಲಿ ಸೂಚ್ಯವಾಗಿ ಹೇಳಿದ್ದಾರೆ.

ಅಮೆರಿಕವು ಭಾರತವನ್ನು ಚೀನಾದಂತೆ ತನ್ನ ಎದುರಾಳಿಯಾಗಿ ಪರಿಗಣಿಸಬಾರದು. ಡೊನಾಲ್ಡ್ ಟ್ರಂಪ್ ಆಡಳಿತವು ಸುಂಕದ ಸಮಸ್ಯೆಗಳು ಅಥವಾ ಭಾರತ-ಪಾಕಿಸ್ತಾನ ಒಪ್ಪಂದದಲ್ಲಿ ಅಮೆರಿಕದ ಪಾತ್ರದ ಕುರಿತ ಭಿನ್ನಾಭಿಪ್ರಾಯಗಳು, ವಿಶ್ವದ ಎರಡು ದೊಡ್ಡ ಪ್ರಜಾ ಪ್ರಭುತ್ವಗಳ ನಡುವೆ ಬಿರುಕು ಬಿಡಲು ಬಿಡುವುದಿಲ್ಲ ಎಂದು




**ಭಾರತವನ್ನು ಒತ್ತಾಯಿಸಿದ ನಿಕ್ಕಿ ಹ್ಯಾಲಿ**

- **ಭಾರತ-ಅಮೆರಿಕ ಸಂಬಂಧ ಕೊನೆಯಾಗುವ ಹಂತ ತಲುಪಿದೆ ಎಂದ ನಿಕ್ಕಿ ಹ್ಯಾಲಿ.**
- **ಅಮೆರಿಕದೊಂದಿಗೆ ಮಾತನಾಡುವಂತೆ ಭಾರತವನ್ನು ಒತ್ತಾಯಿಸಿದ ನಿಕ್ಕಿ ಹ್ಯಾಲಿ.**
- **ರಷ್ಯಾದೊಂದಿಗಿನ ತೈಲ ಸಂಬಂಧದ ಬಗ್ಗೆ ಡೊನಾಲ್ಡ್ ಟ್ರಂಪ್ ಆಕ್ಷೇಪಣೆ ಪರಿಗಣಿಸುವಂತೆ ಭಾರತಕ್ಕೆ ಸಲಹೆ.**

ನಿಕ್ಕಿ ಹ್ಯಾಲಿ ಭರವಸೆ ವ್ಯಕ್ತಪಡಿಸಿದ್ದಾರೆ. ಸುಂಕದ ಸಮಸ್ಯೆಗಳನ್ನು ಪರಿಹರಿಸಲು ಡೊನಾಲ್ಡ್ ಟ್ರಂಪ್ ಮತ್ತು ಪ್ರಧಾನಿ ಮೋದಿ ನೇರ ಭೇಟಿ ಅಗತ್ಯ ಎಂದು ಪ್ರತಿಪಾದಿಸಿರುವ ನಿಕ್ಕಿ ಹ್ಯಾಲಿ, ಈ ವಿಚಾರದಲ್ಲಿ ತಡ ಮಾಡಬಾರದು ಎಂದು ಉಭಯ ರಾಷ್ಟ್ರಗಳನ್ನು ಒತ್ತಾಯಿಸಿದ್ದಾರೆ.

ನಿಕ್ಕಿ ಹ್ಯಾಲಿ ಅವರು ಭಾರತ-ಅಮೆರಿಕ ನಡುವಿನ ಹದಗೆಡುತ್ತಿರುವ ಸಂಬಂಧದ ಕುರಿತು ಉಭಯ ರಾಷ್ಟ್ರಗಳನ್ನೂ ಎಚ್ಚರಿಸುತ್ತಿದ್ದು, ಈ ವಿಚಾರವಾಗಿ ಭಾರತ ಮತ್ತ ಅಮೆರಿಕ ಏನು ನಿಲುವು ತಳೆಯಲಿವೆ ಎಂಬುದನ್ನು ಕಾದು ನೋಡಬೇಕಿದೆ.



# ತೆಲುಗು ರಾಜ್ಯಗಳಲ್ಲಿ ಭಾರಿ ಬೇಡಿಕೆ

ರಿಷಬ್ ಶೆಟ್ಟಿ ನಟಿಸಿ ನಿರ್ದೇಶನ ಮಾಡಿರುವ 'ಕಾಂತಾರ ಚಾಪ್ಟರ್ 1' ಸಿನಿಮಾ ಭಾರತದ ಬಲು ನಿರೀಕ್ಷಿತ ಸಿನಿಮಾಗಳಲ್ಲಿ ಒಂದು. ಸಿನಿಮಾ ಬಿಡುಗಡೆ ಆಗುವ ಮುಂಚೆಯೇ ಸಿನಿಮಾದ ವಿತರಣೆ ಮಾಡಲು ದೊಡ್ಡ ದೊಡ್ಡ ನಿರ್ಮಾಪಕರು, ವಿತರಣಾ ಸಂಸ್ಥೆಗಳು ನಾ ಮುಂದು-ತಾ ಮುಂದು ಎಂದು ಹಕ್ಕು ಖರೀದಿಗೆ ಸಾಲು ನಿಂತಿವೆ. ಇದೀಗ ತೆಲುಗು ರಾಜ್ಯಗಳ ವಿತರಣೆ ಹಕ್ಕು ದಾಖಲೆ ಮೊತ್ತಕ್ಕೆ ಮಾರಾಟವಾಗಿದೆ. ರಿಷಬ್ ಶೆಟ್ಟಿ ನಟಿಸಿ, ನಿರ್ದೇಶನ ಮಾಡಿರುವ 'ಕಾಂತಾರ ಚಾಪ್ಟರ್ 1' ಸಿನಿಮಾ ಬಿಡುಗಡೆಗೆ ಇನ್ನೂ ಸಮಯವಿದೆ. ಆದರೆ ಈಗಲೇ ಸಿನಿಮಾದ ವಿತರಣೆ ಹಕ್ಕು ಖರೀದಿಗೆ ದೊಡ್ಡ ದೊಡ್ಡ ನಿರ್ಮಾಪಕರು, ವಿತರಣಾ ಸಂಸ್ಥೆಗಳು ಮುಗಿಬಿದ್ದಿವೆ. ತೆಲುಗು ರಾಜ್ಯಗಳಲ್ಲಂತೂ 'ಕಾಂತಾರ: ಚಾಪ್ಟರ್ 1'ಗೆ ಭಾರಿ ಬೇಡಿಕೆ ಇದ್ದು, ಕೋಟಿಗಟ್ಟಲೆ ಹಣ ಮುಂಗಡವಾಗಿ ಕೊಟ್ಟು ಹಕ್ಕು ಖರೀದಿ ಮಾಡಲಾಗಿದೆ. 'ಕಾಂತಾರ ಚಾಪ್ಟರ್ 1' ಸಿನಿಮಾದ ತೆಲುಗು ರಾಜ್ಯಗಳ ಬಿಡುಗಡೆ ಹಕ್ಕು ಬರೋಬ್ಬರಿ 100 ಕೋಟಿಗೆ ಮಾರಾಟವಾಗಿದೆ.

ನೆನಪಿರಲಿ, ತೆಲುಗಿನ ಸ್ಟಾರ್ ನಟರಾದ ಜೂ ಎನ್ ಟಿಆರ್ ಅವರ ಜೊತೆಗೆ ಬಾಲಿವುಡ್ ಸ್ಟಾರ್ ನಟ ಹೃತಿಕ್ ರೋಷನ್ ಒಟ್ಟಿಗೆ ನಟಿಸಿದ್ದ 'ವಾರ್ 2' ಸಿನಿಮಾದ ಬಿಡುಗಡೆ ಹಕ್ಕಿಗೂ ಇಷ್ಟು ದೊಡ್ಡ ಮೊತ್ತದ ಹಣ ನೀಡಲಾಗಿಲ್ಲ.

# ಡಿಸೆಂಬರ್ 12ಕ್ಕೆ ದಿ ಡೆವಿಲ್ ಬಿಡುಗಡೆ

ದರ್ಶನ್ ಅಭಿಮಾನಿಗಳ ಪಾಲಿನ ಬಹುನಿರೀಕ್ಷಿತ 'ದಿ ಡೆವಿಲ್' ಸಿನಿಮಾ ಈ ವರ್ಷವೇ ತೆರೆಕಾಣಲಿದೆ. ಡಿಸೆಂಬರ್ 12ರಂದು ಸಿನಿಮಾ ಬಿಡುಗಡೆ ಮಾಡಲು ತೀರ್ಮಾನಿಸಲಾಗಿದೆ. ರಿಲೀಸ್ ಡೇಟ್ ಅನೌನ್ಸ್ ಆಗಿದೆ. ದರ್ಶನ್ ಅವರು ಜೈಲಿನಲ್ಲಿ ಇದ್ದರೂ ಕೂಡ ಸಿನಿಮಾದ ಬಿಡುಗಡೆಗೆ ತೊಂದರೆ ಆಗದಂತೆ ನೋಡಿಕೊಳ್ಳಲಾಗುತ್ತಿದೆ. ನಟ ದರ್ಶನ್ ಅವರು 'ದಿ ಡೆವಿಲ್' ಸಿನಿಮಾದ ತಮ್ಮ ಪಾಲಿನ ಎಲ್ಲಾ ಕೆಲಸಗಳನ್ನು ಮುಗಿಸಿಕೊಟ್ಟಿದ್ದಾರೆ. ರೇಣುಕಾಸ್ವಾಮಿ ಕೊಲೆ ಪ್ರಕರಣದ ಆರೋಪಿಯಾಗಿ ಅವರು ಜೈಲು ಸೇರಿದ್ದಾರೆ. ಹಾಗಿದ್ದರೂ ಕೂಡ ಸಿನಿಮಾ ಬಿಡುಗಡೆಗೆ ತೊಂದರೆ ಆಗಬಾರದು ಎಂದು ಅವರು ನಿರ್ಧರಿಸಿದ್ದಾರೆ. ಆದ್ದರಿಂದ ದರ್ಶನ್ ಅನುಪಸ್ಥಿತಿಯಲ್ಲೇ 'ದಿ ಡೆವಿಲ್' ಸಿನಿಮಾವನ್ನು ಬಿಡುಗಡೆ ಮಾಡಲು ಚಿತ್ರತಂಡ ತೀರ್ಮಾನಿಸಿದೆ. ಈಗ ಈ ಚಿತ್ರದ ರಿಲೀಸ್ ದಿನಾಂಕ ಪ್ರಕಟಿಸಲಾಗಿದೆ. ಇದೇ ವರ್ಷ ಈ ಸಿನಿಮಾ ಬಿಡುಗಡೆ ಆಗಲಿದೆ. ಡಿಸೆಂಬರ್ 12ರಂದು 'ದಿ ಡೆವಿಲ್' ಸಿನಿಮಾ ಅದ್ದೂರಿಯಾಗಿ ತೆರೆಕಾಣಲಿದೆ. ದರ್ಶನ್, ರಚನಾ ರೈ, ಶರ್ಮಿಳಾ ಮಾಂಡ್ರೆ ಮುಂತಾದವರು 'ದಿ ಡೆವಿಲ್' ಸಿನಿಮಾದಲ್ಲಿ ನಟಿಸಿದ್ದಾರೆ.




# ವಾರ್ 2 ವಿತರಕನಿಗೆ ನಷ್ಟ ತುಂಬಿಕೊಟ್ಟ ಯಶ್ ರಾಜ್

ಹೃತಿಕ್ ರೋಷನ್-ಜೂ ಎನ್ ಟಿಆರ್ ಒಟ್ಟಿಗೆ ನಟಿಸಿರುವ 'ವಾರ್ 2' ಸಿನಿಮಾ ಕೆಲ ದಿನಗಳ ಹಿಂದಷ್ಟೆ ಬಿಡುಗಡೆ ಆಗಿತ್ತು. ಸಿನಿಮಾದ ಬಗ್ಗೆ ಭಾರಿ ನಿರೀಕ್ಷೆಗಳಿದ್ದವು ಆದರೆ ಸಿನಿಮಾ ಹೀನಾಯ ಸೋಲು ಕಂಡಿದೆ. ಸಿನಿಮಾ ಸೋಲಿನಿಂದ ನಷ್ಟ ಅನುಭವಿಸಿದ ವಿತರಕ ನಾಗವಂಶಿಗೆ ನಷ್ಟ ತುಂಬಿಕೊಟ್ಟಿದೆ ವೈಆರ್‌ಎಫ್. ಹತ್ತು ದಿನದ ಹಿಂದೆ ಬಿಡುಗಡೆ ಆಗಿದ್ದ ಭಾರಿ ನಿರೀಕ್ಷಿತ ಸಿನಿಮಾ 'ವಾರ್ 2' ಬಾಕ್ಸ್ ಆಫೀಸ್‌ನಲ್ಲಿ ಸೋಲು ಕಂಡಿದೆ. ಸಿನಿಮಾನಲ್ಲಿ ಹೃತಿಕ್ ರೋಷನ್ ಮತ್ತು ಜೂ ಎನ್‌ಟಿಆರ್ ಒಟ್ಟಾಗಿ ನಟಿಸಿದ್ದರು. ಹಾಗಾಗಿ ಸಿನಿಮಾದ ಬಗ್ಗೆ ಭಾರಿ ನಿರೀಕ್ಷೆಗಳು ಗರಿಗೆದರಿದ್ದವು. ಆದರೆ ಸಿನಿಮಾ ಸೋಲು ಕಂಡಿದೆ. ಅದರಲ್ಲೂ ತೆಲುಗು ರಾಜ್ಯಗಳಲ್ಲಿಯೂ ಸಹ ಜೂ ಎನ್‌ಟಿಆರ್ ಮ್ಯಾಜಿಕ್ ನಡೆದಿಲ್ಲ. ಜೂ ಎನ್‌ಟಿಆರ್ ಇದ್ದಾರೆಂಬ ಕಾರಣಕ್ಕೆ ಭಾರಿ ಮೊತ್ತ ಹೂಡಿ ಬಿಡುಗಡೆ ಹಕ್ಕು ಖರೀದಿಸಿದ್ದ ಖ್ಯಾತ ನಿರ್ಮಾಪಕ ಕಮ್ ವಿತರಕ ನಾಗವಂಶಿ ಭಾರಿ ನಷ್ಟ ಅನುಭವಿಸಿದ್ದಾರೆ.



ಆದರೆ ಯಶ್ ರಾಜ್ ಫಿಲಮ್ಸ್ ಇದೀಗ ಹಣವನ್ನು ಮರಳಿ ನೀಡುತ್ತಿದೆ. ಜೂ ಎನ್ ಟಿಆರ್ ಅವರಿಗೆ ಬಲು ಆಪ್ತರೂ ಆಗಿರುವ ನಿರ್ಮಾಪಕ ಮತ್ತು ವಿತರಕ ನಾಗವಂಶಿ ತೆಲಂಗಾಣ ಮತ್ತು ಆಂಧ್ರ ಪ್ರದೇಶದಲ್ಲಿ 'ವಾರ್ 2' ಸಿನಿಮಾದ ಬಿಡುಗಡೆ ಹಕ್ಕು ಖರೀದಿ ಮಾಡಿದ್ದರು. ಭಾರಿ ಹಣ ತೆತ್ತು ಹೈದರಾಬಾದ್‌ನಲ್ಲಿ ಪ್ರೀ ರಿಲೀಸ್ ಕಾರ್ಯಕ್ರಮವನ್ನೂ ಸಹ ಮಾಡಿದ್ದರು. ಪ್ರಚಾರಕ್ಕಾಗಿ ಭಾರಿ ದೊಡ್ಡ ಮೊತ್ತವನ್ನೂ ಸಹ ಖರ್ಚು ಮಾಡಿದ್ದರು. ಆದರೆ ಖರ್ಚು ಮಾಡಿದ್ದೆಲ್ಲ ನೀರಿನಲ್ಲಿ ಹೋಮವಾಗಿದೆ. ಬರೋಬ್ಬರಿ 80 ಕೋಟಿ ರೂಪಾಯಿ ಹಣ ನೀಡಿ ಆಂಧ್ರ ಮತ್ತು ತೆಲಂಗಾಣದ ಸಿನಿಮಾ ಬಿಡುಗಡೆ ಹಕ್ಕನ್ನು ನಾಗವಂಶಿ ಖರೀದಿ ಮಾಡಿದ್ದರು.





# ದಾಖಲೆ ಸೃಷ್ಟಿಸಿದೆ ವಿಜಯ್ ಸೆಲ್ಫಿ

## ಕೊರಳಲ್ಲಿ ಕನ್ನಡ ಧ್ವಜ

ನಟ ದಳಪತಿ ವಿಜಯ್ ಸಿನಿಮಾಗಳು ಬಾಕ್ಸ್ ಆಫೀಸ್‌ನಲ್ಲಿ ದಾಖಲೆ ಮಾಡುವುದು ಸಾಮಾನ್ಯ. ಆದರೆ ಅವರ ಇನ್‌ಸ್ಟಾಗ್ರಾಂ ಪೋಸ್ಟ್‌ಗಳು ಸಹ ದಾಖಲೆಗಳನ್ನು ಬರೆಯುತ್ತಿವೆ. ಇತ್ತೀಚೆಗೆ ದಳಪತಿ ವಿಜಯ್ ಸೆಲ್ಫಿ ವಿಡಿಯೋ ಒಂದನ್ನು ಇನ್‌ಸ್ಟಾಗ್ರಾಂನಲ್ಲಿ ಅಪ್‌ಲೋಡ್ ಮಾಡಿದ್ದರು. ಆ ವಿಡಿಯೋ ದಾಖಲೆ ಬರೆದಿದೆ. ಅಂದಹಾಗೆ ವಿಜಯ್, ಕನ್ನಡ ಧ್ವಜ ಧರಿಸಿದ್ದಾರೆಯೇ ದಳಪತಿ ವಿಜಯ್ ತಮ್ಮ ಕೊನೆಯ ಸಿನಿಮಾನಲ್ಲಿ ನಟಿಸುತ್ತಿದ್ದಾರೆ. ರಾಜಕೀಯಕ್ಕೆ ಪ್ರವೇಶಿಸಿರುವ ದಳಪತಿ ವಿಜಯ್ ಚಿತ್ರರಂಗಕ್ಕೆ ಗುಡ್ ಬೈ ಹೇಳುತ್ತಿದ್ದಾರೆ. ವಿಜಯ್ ನಟನೆಯ 'ಜನ ನಾಯಗನ್' ಸಿನಿಮಾದ ಚಿತ್ರೀಕರಣ ಚಾಲ್ತಿಯಲ್ಲಿದ್ದು, ಸಿನಿಮಾ ಶೀಘ್ರವೇ ಬಿಡುಗಡೆ ಆಗಲಿದೆ. ವಿಜಯ್ ಸಿನಿಮಾಗಳು ಗಳಿಕೆಯಲ್ಲಿ ದಾಖಲೆಗಳನ್ನು ಬರೆಯುವುದು ಸಾಮಾನ್ಯ. ಅವರ ಇನ್‌ಸ್ಟಾಗ್ರಾಂ ಪೋಸ್ಟ್‌ಗಳು ಸಹ ದಾಖಲೆಗಳನ್ನು ಬರೆಯುತ್ತಿವೆ. ಈ ಹಿಂದೆ ವಿಜಯ್ ಸೆಲ್ಫಿ ಒಂದನ್ನು ತೆಗೆದು ಅದನ್ನು ತಮ್ಮ ಇನ್‌ಸ್ಟಾಗ್ರಾಂ ಖಾತೆಯಲ್ಲಿ ಹಂಚಿಕೊಂಡಿದ್ದರು. ಆ ಸೆಲ್ಫಿ ಭಾರತದಲ್ಲಿ ಅತಿ ಹೆಚ್ಚು ಲೈಕ್ ಆದ, ಶೇರ್ ಆದ ಸೆಲ್ಫಿ ಎನಿಸಿಕೊಂಡಿತ್ತು. ಇದೀಗ ವಿಜಯ್ ಅವರ ಸೆಲ್ಫಿ ವಿಡಿಯೋ ಇದೇ ರೀತಿಯ ಹೊಸ ದಾಖಲೆಯೊಂದನ್ನು ಸೃಷ್ಟಿಸಿದೆ. ವಿಜಯ್ ಇತ್ತೀಚೆಗಷ್ಟೆ ಮಧುರೈನಲ್ಲಿ ತಮ್ಮ ಪಕ್ಷದ ಸಮಾವೇಶವನ್ನು ಬಲು ಅದ್ದೂರಿಯಾಗಿ ಮಾಡಿದರು.

ವಿಜಯ್ ಅವರ ಈ ರಾಜಕೀಯ ಸಮಾವೇಶಕ್ಕೆ ಲಕ್ಷಾಂತರ ಜನ ಆಗಮಿಸಿ ಭಾಗವಹಿಸಿದ್ದರು. ಜನಸಾಗರವೇ ಕಾರ್ಯಕ್ರಮದಲ್ಲಿ ನೆರೆದಿತ್ತು. ಅಂದು ವೇದಿಕೆಯಿಂದ ವಿಜಯ್ ಅವರು ಸೆಲ್ಫಿ ವಿಡಿಯೋ ಒಂದನ್ನು ಮಾಡಿದ್ದರು. ಅದನ್ನು ಸಾಮಾಜಿಕ ಜಾಲತಾಣದಲ್ಲಿ ಹಂಚಿಕೊಂಡಿದ್ದರು. ಆ ವಿಡಿಯೋ ಇದೀಗ ದಾಖಲೆಗಳನ್ನು ಬರೆದಿದೆ.

ವಿಜಯ್, ಹಂಚಿಕೊಂಡಿದ್ದ ಆ ಸೆಲ್ಫಿ ವಿಡಿಯೋ ಅನ್ನು ಕೇವಲ ಎರಡು ದಿನಗಳಲ್ಲಿ ಒಂದು ಕೋಟಿಗೂ ಹೆಚ್ಚು ಮಂದಿ ಲೈಕ್ ಮಾಡಿದ್ದಾರೆ. ವಿಜಯ್ ಹಂಚಿಕೊಂಡಿರುವ ಆ ವಿಡಿಯೋಕ್ಕೆ ಕಮೆಂಟ್ ಸೆಕ್ಷನ್ ಆಫ್ ಮಾಡಲಾಗಿದೆ. ಇಲ್ಲವಾದರೆ ಕಮೆಂಟ್ ವಿಭಾಗದಲ್ಲಿಯೂ ವಿಡಿಯೋ ದಾಖಲೆ ಬರೆಯುತ್ತಿತ್ತೇನೋ. ಆ ವಿಡಿಯೋನಲ್ಲಿ ವಿಜಯ್ ಹಣೆಗೆ ಹಾಗೂ ಕೊರಳಿಗೆ, ಕನ್ನಡ ರಕ್ಷಣಾ ಪಡೆಯವರ ರೀತಿ ಕನ್ನಡ ಧ್ವಜದ ಬಣ್ಣದ ಪಟ್ಟಿ ಮತ್ತು ಶಾಲನ್ನು ಹೊದ್ದಿಕೊಂಡಿದ್ದಾರೆ. ಇದು ವಿಡಿಯೋ ನೋಡಿದ ಕನ್ನಡಿಗರಿಗೆ ತುಸು ಆಶ್ಚರ್ಯ ತಂದಿದೆ. ವಿಜಯ್ ಏನಾದರೂ ತಮಿಳುನಾಡಿನಲ್ಲಿ ಕನ್ನಡ ರಕ್ಷಣಾ ವೇದಿಕೆ ತೆರೆದರಾ ಎಂಬ ಅನುಮಾನವೂ ಮೂಡಿರಬಹುದು. ಆದರೆ ಹಾಗೆಲ್ಲ ಏನಿಲ್ಲ. ವಿಜಯ್ ಧರಿಸಿರುವುದು ಅವರ ತಮಿಳಗ ವೆಟ್ರಿ ಕಳಗಮ್ ಪಕ್ಷದ ಬಾವುಟದ ಶಾಲು. ಕನ್ನಡ ಧ್ವಜದಲ್ಲಿ ಹಳದಿ ಮತ್ತು ಕೆಂಪು ಬಣ್ಣವಿದೆ. ವಿಜಯ್ ಅವರ ತಮಿಳಗ ವೆಟ್ರಿ ಕಳಗಮ್ ಪಕ್ಷದ ಧ್ವಜದಲ್ಲಿ ಕೆಂಪು ಹಳದಿ ಮತ್ತು ಕೆಂಪು ಬಣ್ಣವಿದೆ. ಆದರೆ ಶಾಲು, ಪಟ್ಟಿ ನೋಡಿದರೆ ಅದು ಕನ್ನಡದ ಧ್ವಜದ ರೀತಿಯೇ ಕಾಣುತ್ತಿದೆ.



# ವಿಕ್ರಮ್ ಜೊತೆ ಕೈ ಜೋಡಿಸಿದ ಅಮೃತಾ ಸಿನಿ ಕ್ರಾಫ್ಟ್

## ಸಾಥ್ ಕೊಟ್ಟ ನಿರ್ಮಾಪಕಿ ರಕ್ಷಾ


ರವಿಚಂದ್ರನ್ ಮಕ್ಕಳಾದ ಮನೋರಂಜನ್ ಮತ್ತು ವಿಕ್ರಮ್ ಅವರು ಚಿತ್ರರಂಗದಲ್ಲಿ ಆಕ್ಟೀವ್ ಆಗಿದ್ದಾರೆ. ವಿಕ್ರಮ್ ರವಿಚಂದ್ರನ್ ಅವರ ಹೊಸ ಚಿತ್ರಗಳ ಬಗ್ಗೆ ಇತ್ತೀಚೆಗೆ ಸುದ್ದಿಗೋಷ್ಠಿಯಲ್ಲಿ ಮಾಹಿತಿ ನೀಡಲಾಯಿತು. ಅಮೃತಾ ಸಿನಿ ಕ್ರಾಫ್ಟ್ ಮೂಲಕ ಉದ್ಯಮಿ ವಿಜಯ್ ಟಾಟಾ ಜೊತೆ ವಿಕ್ರಮ್ ರವಿಚಂದ್ರನ್ ಕೈ ಜೋಡಿಸಿದ್ದಾರೆ. ನಟ ವಿಕ್ರಮ್ ರವಿಚಂದ್ರನ್ ಅವರು ಇತ್ತೀಚೆಗೆ ಹುಟ್ಟುಹಬ್ಬ ಆಚರಿಸಿಕೊಂಡರು. ಇದೇ ವೇಳೆ ಸುದ್ದಿಗೋಷ್ಠಿ ನಡೆಸಿ ಸಿನಿಮಾಗಳ ಬಗ್ಗೆ ಅಪ್‌ಡೇಟ್ ನೀಡಲಾಯಿತು.

ಉದ್ಯಮಿ ವಿಜಯ್ ಟಾಟಾ ಅವರು ತಮ್ಮ 'ಅಮೃತಾ ಸಿನಿ ಕ್ರಾಫ್ಟ್' ಮೂಲಕ ವಿಕ್ರಮ್ ಅವರ ಹೊಸ ಸಿನಿಮಾವನ್ನು ನಿರ್ಮಿಸಲು ಮುಂದಾಗಿದ್ದಾರೆ. ಸಿನಿಮಾ ನಿರ್ಮಾಣದ ಜೊತೆಯಲ್ಲಿ ವಿತರಣೆ , ಮಾರ್ಕೆಟಿಂಗ್ ಸೇರಿದಂತೆ ಬೇರೆ ಸಿನಿಮಾಗಳ ಜೊತೆ ಕೈ ಜೋಡಿಸಲು ಅವರು ಸಜ್ಜಾಗಿದ್ದಾರೆ. ಸುದ್ದಿಗೋಷ್ಠಿಯಲ್ಲಿ ವಿಕ್ರಮ್ ರವಿಚಂದ್ರನ್, 'ಮುಧೋಳ್' ಸಿನಿಮಾದ ನಿರ್ಮಾಪಕಿ ರಕ್ಷಾ, ಉದ್ಯಮಿ, ನಿರ್ಮಾಪಕ ವಿಜಯ್ ಟಾಟಾ ಮುಂತಾದವರು ಪಾಲ್ಗೊಂಡಿದ್ದರು. ಸುದ್ದಿಗೋಷ್ಠಿಯಲ್ಲಿ ವಿಕ್ರಮ್ ರವಿಚಂದ್ರನ್ ಅವರು ಮಾತನಾಡಿದರು. 'ಸಾಮಾನ್ಯವಾಗಿ ನಾನು ಹುಟ್ಟುಹಬ್ಬ ಆಚರಿಸಿಕೊಳ್ಳುವುದಿಲ್ಲ. ಬೇರೆ ಬೇರೆ ಕೆಲಸದಲ್ಲಿ ತೊಡಗಿಕೊಂಡಿರುತ್ತೇನೆ. ಈ ಬಾರಿ ನನ್ನ ಬರ್ತಡೇ ದಿನವೇ ಒಂದೆರಡು ದೊಡ್ಡ ಅನೌನ್ಸ್ಮೆಂಟ್ ಮಾಡಬೇಕು ಎಂದು ನಮ್ಮ ವಿಜಯ್ ಸರ್ ಹೇಳಿದ್ದರಿಂದ ನಿಮ್ಮ ಮುಂದೆ ಹೇಳಬೇಕೆಂದು ನಿರ್ಧರಿಸಿದ್ದೇವೆ' ಎಂದು ಅವರು ಮಾತು ಆರಂಭಿಸಿದರು. 'ನಾನು ಏನೇ ಹೇಳಿದರೂ ರವಿಚಂದ್ರನ್ ಮಗ ಎಂಬುದು ಎಲ್ಲರಿಗೂ ಗೊತ್ತೇ ಇದೆ. ನಾನು 2ನೇ ಸಿನಿಮಾ ಮಾಡಿದಾಗ ನಮ್ಮ ಅಣ್ಣ ನಟಿಸಿದ 'ಮುಗಿಲು ಪೇಟೆ' ಸಿನಿಮಾದ ನಿರ್ಮಾಣಕ್ಕೆ ಸಾಥ್ ಕೊಟ್ಟ ನಿರ್ಮಾಪಕಿ ರಕ್ಷಾ ಅವರು ನನಗೂ ಬೆಂಬಲವಾಗಿ ನಿಂತರು. ನನ್ನ ಡ್ರೀಮ್ ಪ್ರಾಜೆಕ್ಟ್‌ಗೆ ಸಪೋರ್ಟ್ ಮಾಡುತ್ತಾ ಬಂದಿದ್ದಾರೆ.

# 276 ರನ್‌ಗಳಿಂದ ಗೆದ್ದ ಆಸ್ಟ್ರೇಲಿಯಾ

## ದಕ್ಷಿಣ ಆಫ್ರಿಕಾ ಪಾಲಾದ ಏಕದಿನ ಸರಣಿ

ಆಸ್ಟ್ರೇಲಿಯಾ ಭಾನುವಾರ ಮೆಲ್ಬೋರ್ನ್‌ನಲ್ಲಿ ನಡೆದ ಕೊನೆಯ ಏಕದಿನ ಪಂದ್ಯದಲ್ಲಿ ದಕ್ಷಿಣ ಆಫ್ರಿಕಾವನ್ನು 276 ರನ್‌ಗಳಿಂದ ಸೋಲಿಸಿತು. ಮೊದಲು ಬ್ಯಾಟ್ ಮಾಡಿದ ಆಸ್ಟ್ರೇಲಿಯಾ 431 ರನ್ ಗಳಿಸಿತು. ದಕ್ಷಿಣ ಆಫ್ರಿಕಾ 155 ರನ್‌ಗಳಿಗೆ ಆಲೌಟ್ ಆಯಿತು. ಆದರೂ, ದಕ್ಷಿಣ ಆಫ್ರಿಕಾ 2-1 ಅಂತರದಿಂದ ಸರಣಿಯನ್ನು ಗೆದ್ದುಕೊಂಡಿತು. ಇದಕ್ಕೂ ಮೊದಲು, ಆಸ್ಟ್ರೇಲಿಯಾ ಟಿ20 ಸರಣಿಯನ್ನು 2-1 ಅಂತರದಿಂದ ಗೆದ್ದಿತ್ತು. ಕೊನೆಯ ಏಕದಿನ ಪಂದ್ಯದಲ್ಲಿ ಆಸ್ಟ್ರೇಲಿಯಾ, ದಕ್ಷಿಣ ಆಫ್ರಿಕಾವನ್ನು 276 ರನ್‌ಗಳಿಂದ ಸೋಲಿಸಿ ವೈಟ್ ವಾಶ್ ಮುಖಭಂಗದಿಂದ ಪಾರಾಗಿದೆ. ಉಭಯ ತಂಡಗಳ ನಡುವಿನ ಮೂರು ಪಂದ್ಯಗಳ ಏಕದಿನ ಸರಣಿಯ ಅಂತಿಮ ಪಂದ್ಯ ಭಾನುವಾರ ಮೆಕೆಯಲ್ಲಿ



ನಡೆಯಿತು. ಈ ಪಂದ್ಯದಲ್ಲಿ, ಮೊದಲು ಬ್ಯಾಟ್ ಮಾಡಿದ ಆಸ್ಟ್ರೇಲಿಯಾ ಎರಡು ವಿಕೆಟ್ ನಷ್ಟಕ್ಕೆ 431 ರನ್ ಗಳಿಸಿತು. ಇದಕ್ಕೆ ಉತ್ತರವಾಗಿ, ದಕ್ಷಿಣ ಆಫ್ರಿಕಾ 24.5 ಓವರ್‌ಗಳಲ್ಲಿ 155 ರನ್‌ಗಳಿಗೆ ಆಲೌಟ್ ಆಯಿತು. ಈ ಸೋಲಿನ ಹೊರತಾಗಿಯೂ, ದಕ್ಷಿಣ ಆಫ್ರಿಕಾ ಆಸ್ಟ್ರೇಲಿಯಾ ವಿರುದ್ಧದ ಸರಣಿಯನ್ನು 2-1 ಅಂತರದಿಂದ ಗೆದ್ದುಕೊಂಡಿತು. ಇದಕ್ಕೂ ಮೊದಲು, ಆಸ್ಟ್ರೇಲಿಯಾ ಮೂರು ಪಂದ್ಯಗಳ ಟಿ20 ಸರಣಿಯಲ್ಲಿ ದಕ್ಷಿಣ ಆಫ್ರಿಕಾವನ್ನು 2-1 ಅಂತರದಿಂದ ಸೋಲಿಸಿತ್ತು. ಈ ಪಂದ್ಯದಲ್ಲಿ ಮೊದಲು ಬ್ಯಾಟಿಂಗ್ ಮಾಡಿದ ಆಸ್ಟ್ರೇಲಿಯಾ 50 ಓವರ್‌ಗಳಲ್ಲಿ 2 ವಿಕೆಟ್‌ಗಳ ನಷ್ಟಕ್ಕೆ 431 ರನ್‌ಗಳ ಬೃಹತ್ ಸ್ಕೋರ್ ಗಳಿಸಿತು. ತಂಡದ ಪರ 3 ಬ್ಯಾಟ್ಸ್‌ಮನ್‌ಗಳ ಶತಕ ಬಾರಿಸಿದರು. ಅವರಲ್ಲಿ ಟ್ರಾವಿಸ್ ಹೆಡ್, ನಾಯಕ ಮಿಚೆಲ್ ಮಾರ್ಷ್ ಮತ್ತು ಕ್ಯಾಮರೂನ್ ಗ್ರೀನ್ ಕೂಡ ಸೇರಿದ್ದಾರೆ. ಆಸ್ಟ್ರೇಲಿಯಾದ ಪರ್ವತದಂತಹ ಸ್ಕೋರ್‌ಗೆ ಪ್ರತಿಕ್ರಿಯೆಯಾಗಿ, ದಕ್ಷಿಣ ಆಫ್ರಿಕಾ ತಂಡವು ಕೇವಲ 24.5 ಓವರ್‌ಗಳಲ್ಲಿ 155 ರನ್‌ಗಳಿಗೆ ಆಲೌಟ್ ಆಯಿತು. ಈ ರೀತಿಯಾಗಿ, ದಕ್ಷಿಣ ಆಫ್ರಿಕಾ ಏಕದಿನ ಕ್ರಿಕೆಟ್ ಇತಿಹಾಸದಲ್ಲಿ ತನ್ನ ಅತಿದೊಡ್ಡ ಸೋಲನ್ನು ಎದುರಿಸಬೇಕಾಯಿತು. ಈ ಹಿಂದೆ, 2023 ರಲ್ಲಿ ಭಾರತದ ವಿರುದ್ಧದ ಏಕದಿನ ಪಂದ್ಯದಲ್ಲಿ ದಕ್ಷಿಣ ಆಫ್ರಿಕಾ ತನ್ನ ಅತಿದೊಡ್ಡ ಸೋಲನ್ನು ಅನುಭವಿಸಿತ್ತು. ಆ ಪಂದ್ಯದಲ್ಲಿ ಟೀಂ ಇಂಡಿಯಾ, ದಕ್ಷಿಣ ಆಫ್ರಿಕಾವನ್ನು 243 ರನ್‌ಗಳಿಂದ ಸೋಲಿಸಿತ್ತು. ಈಗ ಭಾರತ ತಂಡದ ಆ ದಾಖಲೆ ಆಸ್ಟ್ರೇಲಿಯಾ ಪಾಲಾಗಿದೆ. ರನ್‌ಗಳ ವಿಷಯದಲ್ಲಿ ಏಕದಿನದಲ್ಲಿ ಇದು ಆಸ್ಟ್ರೇಲಿಯಾದ ಎರಡನೇ ಅತಿದೊಡ್ಡ ಗೆಲುವಾಗಿದೆ. ದಕ್ಷಿಣ ಆಫ್ರಿಕಾ ಪರ ಡೆವಾಲ್ಡ್ ಬ್ರೆವಿಸ್ 49 ರನ್‌ಗಳ ಅತ್ಯಧಿಕ ಇನ್ನಿಂಗ್ಸ್ ಆಡಿದರು.

# ಮಹಾರಾಜ ಟೂರ್ನಿಯಲ್ಲಿ ಸ್ಮರಣ್ ದರ್ಬಾರ್

ಇಂಡಿಯನ್ ಪ್ರೀಮಿಯರ್ ಲೀಗ್ ಸೀಸನ್ 18 ರಲ್ಲಿ ಸ್ಮರಣ್ ರವಿಚಂದ್ರನ್ ಸನ್‌ರೈಸರ್ಸ್ ಹೈದರಾಬಾದ್ ತಂಡದಲ್ಲಿ ಕಾಣಿಸಿಕೊಂಡಿದ್ದರು. ಇದಾಗ್ಯೂ, ಕರ್ನಾಟಕದ ಯುವ ದಾಂಡಿಗನಿಗೆ ಎಸ್‌ಆರ್‌ಹೆಚ್ ಪರ ಕಣಕ್ಕಿಳಿಯಲು ಅವಕಾಶ ಸಿಕ್ಕಿರಲಿಲ್ಲ. ಇದೀಗ ಮಹಾರಾಜ ಟಿ20 ಲೀಗ್‌ನಲ್ಲಿ ಅಬ್ಬರಿಸುವ ಮೂಲಕ ಸ್ಮರಣ್ ಎಲ್ಲರ ಗಮನ ಸೆಳೆಯುತ್ತಿದ್ದಾರೆ. ಮೈಸೂರಿನ ಶ್ರೀಕಂಠದತ್ತ ನರಸಿಂಹ ರಾಜ ಒಡೆಯರ್ ಮೈದಾನದಲ್ಲಿ ನಡೆಯುತ್ತಿರುವ ಮಹಾರಾಜ ಟಿ20 ಟೂರ್ನಿಯಲ್ಲಿ ಕರ್ನಾಟಕದ ಯುವ ಎಡಗೈ ದಾಂಡಿಗ ಸ್ಮರಣ್ ರವಿಚಂದ್ರನ್ ಅಬ್ಬರ ಮುಂದುವರೆದಿದೆ. ಈ ಟೂರ್ನಿಯ 26ನೇ ಪಂದ್ಯದಲ್ಲಿ ಅಜೇಯ ಅರ್ಧಶತಕ ಬಾರಿಸುವ ಮೂಲಕ ಗುಲ್ಬರ್ಗ ಮಿಸ್ಟಿಕ್ಸ್ ತಂಡ ಭರ್ಜರಿ ಜಯ ತಂದುಕೊಟ್ಟಿದ್ದಾರೆ.

ಅದು ಕೂಡ ಬಲಿಷ್ಠ ಬೆಂಗಳೂರು ಬ್ಲಾಸ್ಟರ್ಸ್ ತಂಡದ ವಿರುದ್ಧ ಎಂಬುದು ವಿಶೇಷ. ಈ ಪಂದ್ಯದಲ್ಲಿ ಮೊದಲು ಬ್ಯಾಟ್ ಮಾಡಿದ ಬೆಂಗಳೂರು ಬ್ಲಾಸ್ಟರ್ಸ್ ತಂಡವು 20 ಓವರ್‌ಗಳಲ್ಲಿ 7 ವಿಕೆಟ್ ಕಳೆದುಕೊಂಡು 164 ರನ್ ಕಲೆಹಾಕಿತು.

ಈ ಗುರಿಯನ್ನು ಬೆನ್ನತ್ತಿದ ಗುಲ್ಬರ್ಗ ಮಿಸ್ಟಿಕ್ಸ್ ಪರ 4ನೇ ಕ್ರಮಾಂಕದಲ್ಲಿ ಕಣಕ್ಕಿಳಿದ ಸ್ಮರಣ್ ಜವಾಬ್ದಾರಿಯುತ ಬ್ಯಾಟಿಂಗ್ ಪ್ರದರ್ಶಿಸಿದರು. ಆರಂಭದಲ್ಲಿ ಎಚ್ಚರಿಕೆಯ ಬ್ಯಾಟಿಂಗ್‌ಗೆ ಒತ್ತು ನೀಡಿದ್ದ ಯುವ ದಾಂಡಿಗ ಆ ಬಳಿಕ ಬಿರುಸಿನ ಬ್ಯಾಟಿಂಗ್ ಪ್ರದರ್ಶಿಸಿದರು. ಪರಿಣಾಮ ಸ್ಮರಣ್ ಬ್ಯಾಟ್‌ನಿಂದ 52 ಎಸೆತಗಳಲ್ಲಿ 5 ಭರ್ಜರಿ ಸಿಕ್ಸ್ ಹಾಗೂ 8 ಫೋರ್‌ಗಳೊಂದಿಗೆ 89 ರನ್ ಮೂಡಿಬಂತು. ಈ ಅಜೇಯ ಅರ್ಧಶತಕದ ನೆರವಿನೊಂದಿಗೆ ಗುಲ್ಬರ್ಗ ಮಿಸ್ಟಿಕ್ಸ್ ತಂಡವು 19.2 ಓವರ್‌ಗಳಲ್ಲಿ 167 ರನ್‌ಗಳಿಸಿ 6 ವಿಕೆಟ್‌ಗಳ ಜಯ ಸಾಧಿಸಿತು.

ವಿಶೇಷ ಎಂದರೆ ಇದು ಗುಲ್ಬರ್ಗ ಮಿಸ್ಟಿಕ್ಸ್ ತಂಡದ 6ನೇ ಗೆಲುವು. ಈ ಆರು ಗೆಲುವುಗಳಲ್ಲಿ ಪ್ರಮುಖ ಪಾತ್ರವಹಿಸಿರುವುದೇ ಸ್ಮರಣ್ ರವಿಚಂದ್ರನ್. ಈ ಬಾರಿಯ ಮಹಾರಾಜ ಟಿ20 ಟೂರ್ನಿಯಲ್ಲಿ ಈವರೆಗೆ 8 ಇನಿಂಗ್ಸ್ ಆಡಿರುವ ಸ್ಮರಣ್ ರವಿಚಂದ್ರನ್ ಒಟ್ಟು 391 ರನ್ ಗಳಿಸಿದ್ದಾರೆ.

ಈ ಮೂಲಕ ಪ್ರಸ್ತುತ ಟೂರ್ನಿಯಲ್ಲಿ ಅತ್ಯಧಿಕ ರನ್ ಕಲೆಹಾಕಿದ ಬ್ಯಾಟರ್ ಎನಿಸಿಕೊಂಡಿದ್ದಾರೆ.

ಇನ್ನು 391 ರನ್ ಕಲೆಹಾಕಿರುವ ಸ್ಮರಣ್ ಬ್ಯಾಟ್‌ನಿಂದ ಈವರೆಗೆ ಸಿಡಿದಿರುವುದು ಬರೋಬ್ಬರಿ 25 ಸಿಕ್ಸರ್‌ಗಳು. ಅಂದರೆ ಪ್ರಸ್ತುತ ಟೂರ್ನಿಯಲ್ಲಿ ಯಾವುದೇ ಬ್ಯಾಟರ್ 20 ಕ್ಕಿಂತ ಹೆಚ್ಚು ಸಿಕ್ಸ್ ಬಾರಿಸಿಲ್ಲ. ಆದರೆ ಇತ್ತ ಕಡೆ ಸ್ಮರಣ್ ರವಿಚಂದ್ರನ್ ಭರ್ಜರಿ ಬ್ಯಾಟಿಂಗ್‌ನೊಂದಿಗೆ ಅಬ್ಬರಿಸುತ್ತಿದ್ದಾರೆ. ಹಾಗೆಯೇ ಈವರೆಗೆ ಆಡಿದ 8 ಇನಿಂಗ್ಸ್‌ಗಳಲ್ಲಿ ಸ್ಮರಣ್ ರವಿಚಂದ್ರನ್ ಒಟ್ಟು 5 ಅರ್ಧಶತಕಗಳನ್ನು ಬಾರಿಸಿದ್ದಾರೆ.

ಈ ಮೂಲಕ ಪ್ರಸ್ತುತ ಟೂರ್ನಿಯಲ್ಲಿ ಅತೀ ಹೆಚ್ಚು ಹಾಫ್ ಸೆಂಚುರಿ ಸಿಡಿಸಿದ ಬ್ಯಾಟರ್ ಎನಿಸಿಕೊಂಡಿದ್ದಾರೆ. ಇದರ ಹೊರತಾಗಿ, ಪ್ರಸ್ತುತ ಟೂರ್ನಿಯಲ್ಲಿ ಅತ್ಯಧಿಕ ಬ್ಯಾಟಿಂಗ್ ಸರಾಸರಿ ಹೊಂದಿರುವ ಆಟಗಾರನಾಗಿ ಗುರುತಿಸಿಕೊಂಡಿದ್ದಾರೆ.

ಸ್ಮರಣ್ ಅವರ ಸದ್ಯದ ಬ್ಯಾಟಿಂಗ್ ಸರಾಸರಿ 97.75 ರನ್. ಹೀಗೆ ಪ್ರತಿಯೊಂದು ಪಂದ್ಯದಲ್ಲೂ ಮಿಂಚುವ ಮೂಲಕ ಸ್ಮರಣ್ ರವಿಚಂದ್ರನ್ ಕರ್ನಾಟಕ ಟಿ20 ಲೀಗ್‌ನಲ್ಲಿ ಸಂಚಲನ ಸೃಷ್ಟಿಸಿದ್ದು, ಈ ಮೂಲಕ ಐಪಿಎಲ್ ಫ್ರಾಂಚೈಸಿಗಳ ಗಮನ ಸೆಳೆಯುತ್ತಿದ್ದಾರೆ.



# ಮೂವರ ಶತಕ ಬರೋಬ್ಬರಿ 431 ರನ್

ದಕ್ಷಿಣ ಆಫ್ರಿಕಾ ವಿರುದ್ಧದ ಏಕದಿನ ಸರಣಿಯಲ್ಲಿ ಆಸ್ಟ್ರೇಲಿಯಾ ತಂಡ 431 ರನ್‌ಗಳ ಬೃಹತ್ ಮೊತ್ತವನ್ನು ಗಳಿಸಿದೆ. ಆರಂಭಿಕರಾದ ಟ್ರಾವಿಸ್ ಹೆಡ್ (142), ಮಿಚೆಲ್ ಮಾರ್ಷ್ (100), ಮತ್ತು ಕ್ಯಾಮರೂನ್ ಗ್ರೀನ್ (118) ಶತಕಗಳನ್ನು ಬಾರಿಸಿ ಆಸ್ಟ್ರೇಲಿಯಾ ತಂಡ ಈ ಬೃಹತ್ ಮೊತ್ತ ಕಲೆಹಾಕುವಲ್ಲಿ ಪ್ರಮುಖ ಪಾತ್ರವಹಿಸಿದರು. ಈ ಮೊತ್ತವು ಆಸ್ಟ್ರೇಲಿಯಾದ ಎರಡನೇ ಅತ್ಯಧಿಕ ಏಕದಿನ ಸ್ಕೋರ್ ಆಗಿದ್ದು, 19 ವರ್ಷಗಳ ನಂತರ ದಕ್ಷಿಣ ಆಫ್ರಿಕಾ ವಿರುದ್ಧ ಈ ರೀತಿಯ ಅದ್ಭುತ ಸಾಧನೆ ಮಾಡಿದೆ.

ದಕ್ಷಿಣ ಆಫ್ರಿಕಾ ವಿರುದ್ಧ ತವರಿನಲ್ಲೇ ಏಕದಿನ ಸರಣಿ ಸೋತು ಮುಜುಗರಕ್ಕೀಡಾಗಿದ್ದ ಆತಿಥೇಯ ಆಸ್ಟ್ರೇಲಿಯಾ ತಂಡ ಇದೀಗ ಸರಣಿಯ ಮೂರನೇ ಮತ್ತು ಅಂತಿಮ ಏಕದಿನ ಪಂದ್ಯದಲ್ಲಿ ರನ್‌ಗಳ ಬೆಟ್ಟವನ್ನೇ ಕಟ್ಟಿದೆ. ಉಭಯ ತಂಡಗಳ ನಡುವಿನ ಈ ಪಂದ್ಯದಲ್ಲಿ ಮೊದಲು ಬ್ಯಾಟಿಂಗ್ ಮಾಡಿದ ಆಸ್ಟ್ರೇಲಿಯಾ ತಂಡ ನಿಗದಿತ 50 ಓವರ್‌ಗಳಲ್ಲಿ ಕೇವಲ 2 ವಿಕೆಟ್ ಕಳೆದುಕೊಂಡು ಬರೋಬ್ಬರಿ 431 ರನ್ ಕಲೆಹಾಕಿದೆ. ಇದು ಏಕದಿನ ಕ್ರಿಕೆಟ್‌ನಲ್ಲಿ ಆಸ್ಟ್ರೇಲಿಯಾ ಕಲೆಹಾಕಿದ ಎರಡನೇ ಅತ್ಯಧಿಕ ಸ್ಕೋರ್ ಆಗಿದೆ. ತಂಡದ ಪರ ಆರಂಭಿಕರಾದ ಟ್ರಾವಿಸ್ ಹೆಡ್, ಮಿಚೆಲ್ ಮಾರ್ಷ್ ಶತಕ ಬಾರಿಸಿದರೆ, ಮೂರನೇ ಕ್ರಮಾಂಕದಲ್ಲಿ ಬಂದ



ಕ್ಯಾಮರೂನ್ ಗ್ರೀನ್ ಕೂಡ ಸ್ಫೋಟಕ ಶತಕ ಬಾರಿಸಿದರು.

ಈ ಮೂವರ ಆಟದಿಂದಾಗಿ ಆಸೀಸ್ ಪಡೆ ಬೃಹತ್ ಮೊತ್ತವನ್ನು ಪೇರಿಸಿತು. ವಾಸ್ತವವಾಗಿ ಇದೇ ದಕ್ಷಿಣ ಆಫ್ರಿಕಾ ವಿರುದ್ಧ 2006 ರಲ್ಲಿ ನಡೆದಿದ್ದ ಏಕದಿನ ಪಂದ್ಯದಲ್ಲಿ ಆಸ್ಟ್ರೇಲಿಯಾ ತಂಡ 434 ರನ್‌ಗಳ ಇನ್ನಿಂಗ್ಸ್ ಆಡಿತ್ತು.

ಇದು ಏಕದಿನದಲ್ಲಿ ಆಸ್ಟ್ರೇಲಿಯಾ ಕಲೆಹಾಕಿರುವ ಅತ್ಯಧಿಕ ರನ್‌ಗಳ ಇದುವರೆಗಿನ ದಾಖಲೆಯಾಗಿದೆ. ಇದೀಗ ಅಂದರೆ ಬರೋಬ್ಬರಿ 19 ವರ್ಷಗಳ ನಂತರ, ದಕ್ಷಿಣ ಆಫ್ರಿಕಾ ವಿರುದ್ಧ ಕಾಂಗರೂಗಳು ಮತ್ತೊಮ್ಮೆ ಏಕದಿನ ಪಂದ್ಯಗಳಲ್ಲಿ ಎರಡನೇ ಅತ್ಯಧಿಕ ಸ್ಕೋರ್ ದಾಖಲಿಸಿದ ಸ್ಕ್ರಿಪ್ಟ್ ಬರೆದಿದ್ದಾರೆ. 10 ವರ್ಷಗಳ ನಂತರ 400 ಕ್ಕೂ ಹೆಚ್ಚು ಸ್ಕೋರ್ ಇದು ಮಾತ್ರವಲ್ಲದೆ 10 ವರ್ಷಗಳ ಕಾಯುವಿಕೆಯ ನಂತರ ಆಸ್ಟ್ರೇಲಿಯಾ ಏಕದಿನ ಕ್ರಿಕೆಟ್‌ನಲ್ಲಿ 400 ಕ್ಕೂ ಹೆಚ್ಚು ರನ್ ಗಳಿಸಿದೆ.



# ಕೀರನ್ ಪೊಲಾರ್ಡ್ ಸಿಡಿಲಬ್ಬರ

ವೆಸ್ಟ್ ಇಂಡೀಸ್‌ನಲ್ಲಿ ನಡೆಯುತ್ತಿರುವ ಕೆರಿಬಿಯನ್ ಪ್ರೀಮಿಯರ್ ಲೀಗ್‌ನ 10ನೇ ಪಂದ್ಯದಲ್ಲಿ ಟ್ರಿನ್‌ಬಾಗೊ ನೈಟ್ ರೈಡರ್ಸ್ ಭರ್ಜರಿ ಜಯ ಸಾಧಿಸಿದೆ. ಈ ಗೆಲುವಿನ ರೂವಾರಿ ಕೀರನ್ ಪೊಲಾರ್ಡ್. ಸೇಂಟ್ ಲೂಸಿಯಾದ ಡಾರೆನ್ ಸ್ಯಾಮಿ ಸ್ಟೇಡಿಯಂನಲ್ಲಿ ನಡೆದ ಈ ಪಂದ್ಯದಲ್ಲಿ ಟ್ರಿನ್‌ಬಾಗೊ ನೈಟ್ ರೈಡರ್ಸ್ ಹಾಗೂ ಸೇಂಟ್ ಲೂಸಿಯಾ ಕಿಂಗ್ಸ್ ತಂಡಗಳು ಮುಖಾಮುಖಿಯಾಗಿದ್ದವು.

ಈ ಮ್ಯಾಚ್‌ನಲ್ಲಿ ಟಾಸ್ ಗೆದ್ದ ಸೇಂಟ್ ಲೂಸಿಯಾ ಕಿಂಗ್ಸ್ ತಂಡದ ನಾಯಕ ಡೇವಿಡ್ ವೀಝು ಬೌಲಿಂಗ್ ಆಯ್ದುಕೊಂಡಿದ್ದರು. ಅದರಂತೆ ಮೊದಲು ಬ್ಯಾಟ್ ಮಾಡಿದ ಟ್ರಿನ್‌ಬಾಗೊ ನೈಟ್ ರೈಡರ್ಸ್ ತಂಡಕ್ಕೆ ಕಾಲಿನ್ ಮನ್ರೊ (43) ಉತ್ತಮ ಆರಂಭ ಒದಗಿಸಿದ್ದರು. ಆ ಬಳಿಕ ಬಂದ ನಿಕೋಲಸ್ ಪೂರನ್ 34 ರನ್‌ಗಳ ಕೊಡುಗೆ ನೀಡಿದರು.

ಇನ್ನು ಐದನೇ ಕ್ರಮಾಂಕದಲ್ಲಿ ಬ್ಯಾಟ್ ಬೀಸಿದ ಕೀರನ್ ಪೊಲಾರ್ಡ್ ಸಿಡಿಲಬ್ಬರದ ಬ್ಯಾಟಿಂಗ್ ಪ್ರದರ್ಶಿಸಿದರು. ಸೇಂಟ್ ಲೂಸಿಯಾ ಕಿಂಗ್ಸ್ ಬೌಲರ್‌ಗಳನ್ನು ಮನಸೋ ಇಚ್ಛೆ ದಂಡಿಸಿದ ಪೊಲಾರ್ಡ್ 29 ಎಸೆತಗಳಲ್ಲಿ 6 ಭರ್ಜರಿ ಸಿಕ್ಸ್ ಹಾಗೂ 4 ಫೋರ್‌ಗಳನ್ನು ಬಾರಿಸಿದರು. ಅಲ್ಲದೆ 65 ರನ್ ಸಿಡಿಸುವ ಮೂಲಕ ಟ್ರಿನ್‌ಬಾಗೊ ನೈಟ್ ರೈಡರ್ಸ್ ತಂಡದ ಮೊತ್ತವನ್ನು 20 ಓವರ್‌ಗಳಲ್ಲಿ 187 ರನ್‌ಗಳಿಗೆ ತಂದು ನಿಲ್ಲಿಸಿದರು. 188 ರನ್‌ಗಳ ಕಠಿಣ ಗುರಿ ಬೆನ್ನತ್ತಿದ ಸೇಂಟ್ ಲೂಸಿಯಾ ಕಿಂಗ್ಸ್ ಪರ ಜಾನ್ಸನ್ ಚಾರ್ಲ್ಸ್ 47 ರನ್ ಸಿಡಿಸಿದರು. ಇದಾಗ್ಯೂ ಉಳಿದ ಬ್ಯಾಟರ್‌ಗಳಿಂದ ನಿರೀಕ್ಷಿತ ಪ್ರದರ್ಶನ ಮೂಡಿಬಂದಿರಲಿಲ್ಲ. ಪರಿಣಾಮ ಸೇಂಟ್ ಲೂಸಿಯಾ ಕಿಂಗ್ಸ್ ತಂಡವು 6 ವಿಕೆಟ್ ಕಳೆದುಕೊಂಡು 165 ರನ್‌ಗಳಿಸಲಷ್ಟೇ ಶಕ್ತರಾದರು.

**Printed by : A. BALACHANDRA, Printed at : RAJHANS ENTERPRISES** No. 134, 4th Main Road, Industrial Town, Rajajinagar, Bengaluru - 560044, Karnataka. **Owned By, Published By, Editor :T. HOMBE GOWDA,** No. 1230, Jayamahal, Ground Floor, 13th Cross, 2nd Phase, Girinagar, Bengaluru - 560 085, Karnataka. Email Id: udayavahininews@yahoo.com , epaper.udayavahini.in www.udayavahini.in Udaya vahini news Udaya vahini news
**ಉದಯವಾಹಿನಿ ಪತ್ರಿಕೆ ಹೆಸರಿನಲ್ಲಿ ಯಾರಾದರೂ ಬ್ಲ್ಯಾಕ್‌ಮೇಲ್ ಮಾಡಿದರೆ ಅಥವಾ ಹೆಸರು ದುರ್ಬಳಕೆ ಮಾಡಿಕೊಳ್ಳುತ್ತಿದ್ದರೆ ಕೂಡಲೇ ಈ ನಂಬರ್‌ಗೆ ಕರೆ ಮಾಡಿ: 9448225966**